
ವಾರ್ಷಿಕ ಚಂದಾ ರೂ.25/-

# ಜನಪದ

ಸಂಪುಟ–06 • ಸಂಚಿಕೆ–03 • ಡಿಸೆಂಬರ್ 2022



Downloaded From:www.kpscvaani.com




ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 10 ಕೋಟಿ ರೂ.ಗಳ ದೇಣಿಗೆಯ ಚೆಕ್ ಅನ್ನು ಮುಖ್ಯಮಂತ್ರಿ ಅವರಿಗೆ ಹಸ್ತಾಂತರಿಸಿದ ಸಂದರ್ಭ. ಕೆಆರ್‌ಐಡಿಎಲ್ ಅಧ್ಯಕ್ಷರಾದ ಎಂ.ರುದ್ರೇಶ್, ವ್ಯವಸ್ಥಾಪಕ ನಿರ್ದೇಶಕರಾದ ಎಂ.ಜಿ.ಹಿರೇಮಠ ಮತ್ತಿತರರು ಉಪಸ್ಥಿತರಿದ್ದಾರೆ.



ಎಂಎಸ್‌ಐಎಲ್ ವತಿಯಿಂದ ಮುಖ್ಯಮಂತ್ರಿ ಪರಿಹಾರ ನಿಧಿಗೆ 3 ಕೋಟಿ ರೂ.ಗಳ ದೇಣಿಗೆಯ ಚೆಕ್ ಅನ್ನು ಮುಖ್ಯಮಂತ್ರಿ ಅವರಿಗೆ ಹಸ್ತಾಂತರಿಸಿದ ಸಂದರ್ಭ. ಎಂಎಸ್‌ಐಎಲ್ ಅಧ್ಯಕ್ಷರಾದ ಹರತಾಳು ಹಾಲಪ್ಪ, ವ್ಯವಸ್ಥಾಪಕ ನಿರ್ದೇಶಕರಾದ ವಿಕಾಸ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದಾರೆ.

Downloaded From:www.kpscvaani.com



ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-06 • ಸಂಚಿಕೆ-03 • ಡಿಸೆಂಬರ್ 2022


**06** ಬೆಂಗಳೂರಿನ ಮುನ್ನಡೆಗೆ ಪ್ರಧಾನಿ ಅವರಿಂದ ಮುಕ್ತ ಕಂಠದ ಶ್ಲಾಘನೆ
• ಮಂಜುನಾಥ ಡಿ.ಡೊಳ್ಳಿನ

**12** ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ನಿರೀಕ್ಷೆಗೂ ಮೀರಿ ಹರಿದು ಬಂದ ಬಂಡವಾಳ
• ಡಾ. ಮುರುಗೇಶ ಆರ್. ನಿರಾಣಿ

**16** ಬೆಂಗಳೂರು ತಂತ್ರಜ್ಞಾನ ಸಮಾವೇಶ: ರಜತ ಮಹೋತ್ಸವದ ಬೆಳ್ಳಿಕಿರಣ
• ಡಾ.ಸಿ.ಎನ್.ಅಶ್ವಥನಾರಾಯಣ

**19** ಬಿದಿರಿನ ತೂಗುದ್ಯಾನದಲ್ಲಿ ಅತ್ಯಾಕರ್ಷಕವಾಗಿ ಮೇಳೈಸಿರುವ ಎರಡನೇ ಟರ್ಮಿನಲ್
• ಎಂ.ಎನ್. ಪ್ರಶಾಂತ್ ಕುಮಾರ್



**22** ಆರೋಗ್ಯ ದಾಖಲೆಗಳ ರಕ್ಷಣೆ ಮತ್ತು ಸಂಗ್ರಹಣೆಗೆ ಆಭಾ ಮೊಬೈಲ್ ಆ್ಯಪ್
• ಡಿ. ಪಿ. ಮುರಳೀಧರ್

**25** ಕಾಶಿ ಯಾತ್ರೆ ಮಾಡಿಸುವ ಭಾರತ್ ಗೌರವ್ ಕಾಶಿ ದರ್ಶನ ರೈಲಿಗೆ ಚಾಲನೆ
• ಬಿ.ಜಿ.ಪೂರ್ಣಿಮ

**28** ಜನಮನ್ನಣೆಗೆ ಪಾತ್ರವಾದ ಕೃಷಿ ಮೇಳ
• ರಂಜನ್ ಗೌಡ

**31** ಕನ್ನಡದ ರತ್ನನಿಗೆ ಕರ್ನಾಟಕ ರತ್ನ ಪ್ರಶಸ್ತಿ
• ಧಾರಿಣಿ

**34** ನವೆಂಬರ್ 1 ರಿಂದ ಮರು ಜಾರಿಗೊಂಡ ಯಶಸ್ವಿನಿ ಯೋಜನೆ
• ಕೆ.ಟಿ.ರಮ್ಯ/ಎಸ್.ಮಂಜುಳ

**37** ಜನೌಷಧಿ ಪರಿಯೋಜನೆಯಲ್ಲಿ ಎರಡನೇ ಸ್ಥಾನದಲ್ಲಿರುವ ಕರ್ನಾಟಕ

**38** ಬೆಂಗಳೂರು ಮಹಾನಗರಕ್ಕೆ ೯೦ ಮೀಟರ್ ಏರಿಯಲ್ ಲ್ಯಾಡರ್
• ಎನ್. ಸಾಗರತ್ನಮ್ಮ

**40** ವಿದೇಶಕ್ಕೆ ಲಗ್ಗೆಯಿಟ್ಟಿರುವ ನುಗ್ಗೆ ಪುಡಿ
• ಭೀಮನಗೌಡ ಪಿ ಮಂಡಲಮರಿ

**41** ಕೃಷಿ ಚಟುವಟಿಕೆಯೊಂದಿಗೆ ಸಾವಯವ ಗೊಬ್ಬರದ ಘಟಕದವರೆಗೆ
• ಗಣಪತಿ ಹಾಸ್ಪುರ

**43** ಮಾನಸಿಕ ರೋಗದ ಬಗ್ಗೆ ಸಮಾಜದಲ್ಲಿ ತಪ್ಪು ಕಲ್ಪನೆ
• ಡಾ. ಎಸ್.ಎಸ್. ದಿವ್ಯಾಶ್ರೀ

**46** ಗಡಾಯಿಕಲ್ಲನ್ನೊಮ್ಮೆ ಹತ್ತಿ ಬನ್ನಿ
• ಸೌಮ್ಯ ಕಾರ್ಕಳ

**48** ಶೋಷಿತರಿಗೆ ಸಂಜೀವಿನಿಯಾಗಿರುವ ಕುವೆಂಪು ಸಾಹಿತ್ಯ
• ವಿರೇಶ ಮಾಶೆಟ್ಟಿ

**50** ಪದಬಂಧ-37



ಪ್ರಧಾನ ಸಂಪಾದಕರು
ಡಾ|| ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

ಮುದ್ರಕರು
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು-50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From:www.kpscvaani.com

# ನಿಮ್ಮ ಅನಿಸಿಕೆ

ಬುಡಕಟ್ಟು ಸಮುದಾಯದಿಂದ ಬಂದಿರುವ ಮಹಿಳೆಯೊಬ್ಬರು ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿರುವುದು ನಮ್ಮೆಲ್ಲರಿಗೂ ಹೆಮ್ಮೆ ತರುವಂತಹದು. ಅವರು ರಾಷ್ಟ್ರಪತಿ ಹುದ್ದೆಯನ್ನು ಅಲಂಕರಿಸಿದ ನಂತರ ಇದೇ ಮೊದಲ ಬಾರಿಗೆ ರಾಜ್ಯಕ್ಕೆ ಆಗಮಿಸಿ, ಮೈಸೂರು ದಸರಾ ಉದ್ಘಾಟನೆ ಮಾಡಿದ್ದು ನಮಗೆ ಅತ್ಯಂತ ಸಂತಸ ತಂದಿದೆ.

ರಾಜ್ಯ ಸರ್ಕಾರವು ಅವರಿಗೆ ನಾಗರಿಕ ಸನ್ಮಾನ ನೀಡಿ ಗೌರವಿಸಿದ ಸಂದರ್ಭದಲ್ಲಿ ಅವರು ಬಸವಣ್ಣನವರ ವಚನವನ್ನು ಹೇಳಿ, ಅದರಂತೆ ನಾವೆಲ್ಲರು ನಡೆದುಕೊಳ್ಳಬೇಕಿದೆ ಎಂದು ಹೇಳಿರುವುದು ಅವರ ಸರಳತೆಯನ್ನು ತೋರಿಸುತ್ತದೆ. ಅವರ ರಾಜ್ಯ ಭೇಟಿಯ ವಿವರವನ್ನು ನೀಡಿರುವ ಲೇಖನ ಸಂಗ್ರಹ ಯೋಗ್ಯವಾಗಿದೆ.

**-ಎಂ.ಎಲ್.ರಚನಾ, ಮೈಸೂರು**

* * *


ಡಾ.ಸಿ.ಆರ್.ಚಂದ್ರಶೇಖರ್ ಅವರು ಎಲೆಮರೆ ಕಾಯಿಯಂತೆ ಇದ್ದುಕೊಂಡು ಇಂದಿಗೂ ಮನೋರೋಗಿಗಳಿಗೆ ತಮ್ಮ ಸೇವೆಯನ್ನು ನೀಡುತ್ತಿದ್ದಾರೆ. ಮಹಾತ್ಮ ಗಾಂಧೀಜಿ ಅವರ ಆದರ್ಶ ಹಾಗೂ ತತ್ವಗಳನ್ನು ತಮ್ಮ ಸೇವೆಯಲ್ಲಿ ಅಳವಡಿಸಿಕೊಂಡು ಮುಂದುವರೆಯುತ್ತಿರುವ ಅವರಿಗೆ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಯನ್ನು ನೀಡಿ ಗೌರವಿಸಿರುವುದಕ್ಕೆ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ.

ಅವರು ಮನೋರೋಗಕ್ಕೆ ಸಂಬಂಧಿಸಿದಂತೆ ಕನ್ನಡ ಭಾಷೆಯಲ್ಲಿ 28 ಹಾಗೂ 40 ಇಂಗ್ಲಿಷ್ ಭಾಷೆಯಲ್ಲಿ ಬರೆದಿರುವ ಪುಸ್ತಕಗಳ ಕುರಿತು ಮತ್ತು ತಮ್ಮ ನಿವೃತ್ತಿಯ ಅವಧಿಯಲ್ಲಿ ಸಂದಾಯವಾದ ಎಲ್ಲಾ ಹಣ ಮತ್ತು ಆಸ್ತಿಯನ್ನು ನಿಮಾನ್ಸ್ ಆಸ್ಪತ್ರೆಗೆ ದಾನ ಮಾಡಿರುವುದನ್ನು ಓದಿ ಈಗಿನ ದಿನಗಳಲ್ಲಿ ಇಂತಹವರೂ ಇದ್ದಾರೆಯೇ ಎನಿಸಿತು. ಅವರ ಜೀವನವೇ ಅವರ ಸರಳತೆಯನ್ನು ತೋರಿಸುತ್ತದೆ. ಇಂತಹವರಿಗೆ ಪ್ರಶಸ್ತಿ ನೀಡಿ ಗೌರವಿಸಿದ ಸರ್ಕಾರಕ್ಕೂ ಹಾಗೂ ಇವರ ಕುರಿತು ಲೇಖನ ಪ್ರಕಟಿಸಿ ಎಲ್ಲರಿಗೂ ಪರಿಚಯಿಸಿದ ವಾರ್ತಾ ಜನಪದ ಸಂಪಾದಕೀಯ ಬಳಗಕ್ಕೆ ಮತ್ತೊಮ್ಮೆ ಧನ್ಯವಾದಗಳು.

**-ಬಿ.ಎಸ್.ಆಶ್ರಯ್, ಬೆಂಗಳೂರು**

* * *

67ನೇ ವರುಷದ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದೇವೆ. ಅದರಿಂದ ಎಲ್ಲೆಲ್ಲೂ ಕನ್ನಡ ಭಾಷೆ ಪಸರಿಸುವಂತಾಗಬೇಕು. ಯಾರು ಏನೇ ಓದಲು ತಿಳಿಯಲು ಪ್ರಯತ್ನಿಸಿದರೂ ಅದೂ ಕನ್ನಡದಲ್ಲಿ ಸಿಗುವಂತೆ ಮಾಡಬೇಕು. ಬೇರೆ ದೇಶದವರು ಬಂದು ಕನ್ನಡ ಭಾಷೆ ಕಲಿತು ಮಾತನಾಡುವುದನ್ನು ನೋಡಿದಾಗ ಮನಸ್ಸಿಗೆ ಮತ್ತಷ್ಟು ಖುಷಿ ನೀಡುತ್ತೆ. ಆದರೆ ಕರ್ನಾಟಕ ರಾಜ್ಯದಲ್ಲೆ ಇದ್ದು ಕನ್ನಡ ಮಾತನಾಡಲು ನಾವು ಮಾತ್ರ ಹಿಂದೇಟು ಹಾಕುತ್ತೇವೆ.




ನಮ್ಮ ಭಾಷೆ ಮೇಲೆ ಅಭಿಮಾನ ಇರಬೇಕೇ ಹೊರತು ಮುಜುಗರ ಇರಬಾರದು. ಕನ್ನಡವೇ ಸತ್ಯ ಕನ್ನಡವೇ ನಿತ್ಯ ಘೋಷಣೆ ಎಲ್ಲೆಡೆ ಪಸರಿಸಲಿ. ನವೆಂಬರ್ ಸಂಚಿಕೆಯ ವಾರ್ತಾ ಜನಪದದಲ್ಲಿ ಪ್ರಕಟವಾಗಿದ್ದ ಕನ್ನಡ ಭಾಷೆ ಕುರಿತ ಲೇಖನಗಳು ಕನ್ನಡ ಅಭಿಮಾನವನ್ನು ಹೆಚ್ಚಿಸಿದವು.

**-ಸೌಮ್ಯ ಕಾರ್ಕಳ, ಶೃಂಗೇರಿ**

* * *

ನವೆಂಬರ್ ಸಂಚಿಕೆಯ ವಾರ್ತಾ ಜನಪದದಲ್ಲಿ ಜಾನುವಾರುಗಳಿಗೆ ಬರುತ್ತಿರುವ ಚರ್ಮಗಂಟು ರೋಗ ತಡೆಗೆ ಸಂಬಂಧಿಸಿದಂತೆ ಪ್ರಕಟಿಸಿರುವ ಅರಿವು ಮೂಡಿಸುವ ಲೇಖನ ಬಹು ಪ್ರಯೋಜನಕಾರಿಯಾಗಿದೆ. ನಮ್ಮ ನೆರೆಯ ರಾಜ್ಯಗಳಲ್ಲಿ ಈ ರೋಗದಿಂದ ಜಾನುವಾರುಗಳು ಮರಣ ಹೊಂದುತ್ತಿರುವುದನ್ನು ನೋಡಿ ರೈತರು ಬಹಳ ಹೆದರಿದ್ದರು.

ರೋಗ ಬಂದಾಗ ಚಿಕಿತ್ಸೆ ನೀಡುವುದಕ್ಕಿಂತ ರೋಗ ಹರಡದಂತೆ ನೋಡಿಕೊಳ್ಳುವುದು ಉತ್ತಮ. ಈ ನಿಟ್ಟಿನಲ್ಲಿ ರೋಗ ಹರಡದಂತೆ ಏನು ಮಾಡಬೇಕು ಎಂಬುದನ್ನು ತಮ್ಮ ಪತ್ರಿಕೆಯ ಮೂಲಕ ಅರಿವು ಮೂಡಿಸಲಾಗಿರುವುದು ಸಮಸ್ಯೆ ಉಲ್ಬಣಗೊಳ್ಳದಂತೆ ತಡೆಯಲು ಸಹಕಾರಿಯಾಗಿದೆ. ಸರ್ಕಾರ ಕೂಡ ಅತ್ಯಂತ ಶೀಘ್ರವಾಗಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿ ರೋಗ ಹರಡುವಿಕೆ ಪ್ರಮಾಣ ಕಡಿಮೆಯಾಗಿದೆ.

**-ಕೆಂಚೇಗೌಡ, ರಾಮನಗರ**

ಗ್ರಾಮೀಣ ಭಾಗದ ಮಹಿಳೆಯರು ಸ್ವ-ಸಹಾಯ ಸಂಘದಲ್ಲಿ ಸಂಘಟಿತರಾಗುವ ಮುಖಾಂತರ ಕಿರು ಉದ್ದಿಮೆಗಳಲ್ಲಿ ತೊಡಗಿರುವುದನ್ನು ನೋಡಿ ಹೆಮ್ಮೆ ಎನಿಸಿತು. ಶೃಂಗೇರಿ ತಾಲೂಕಿನ ಅಡ್ಡಗದ್ದೆ ಗ್ರಾಮದ ಜ್ಯೋತಿ ಅವರು ತಮ್ಮ ಮಾವನವರಿಂದ ಕಲಿತ ಬಾಳೆಕಾಯಿ ಚಿಪ್ಸ್ ಅನ್ನೇ ಉದ್ದಿಮೆಯಾಗಿಸಿಕೊಂಡು ನಾಲ್ಕೈದು ಜನರಿಗೆ ಉದ್ಯೋಗವನ್ನು ನೀಡಿರುವುದು ಇತರರಿಗೂ ಸ್ಫೂರ್ತಿ ನೀಡುವಂತಹದು. ಅಲ್ಲದೆ ಗ್ರಾಮೀಣ ಮಹಿಳೆಯರು ಸ್ವಾವಲಂಬಿ ಬದುಕು ನಡೆಸುವಂತೆ ಮಾಡುವ ನಿಟ್ಟಿನಲ್ಲಿ ಎನ್‌ಆರ್‌ಎಲ್‌ಎಂ ಸಹಕಾರ ನೀಡುತ್ತಿರುವುದು ಪ್ರಶಂಸನೀಯವಾದುದು.

**-ಮೋಹನ ಕುಮಾರಿ, ಚಿಕ್ಕಮಗಳೂರು**

'ವಾರ್ತಾ ಜನಪದ' ಮಾಸಿಕ ಈಗ
**www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/- ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From:www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೆ,

ಬೆಂಗಳೂರು ನಗರದ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಬೃಹತ್ ಕಂಚಿನ ಪ್ರತಿಮೆಯನ್ನು ಇದೇ ನವೆಂಬರ್ 11 ರಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಅನಾವರಣಗೊಳಿಸಿದ್ದಾರೆ. ಪಾಳೇಗಾರರೊಬ್ಬರ ಅತಿ ಎತ್ತರದ ಪ್ರತಿಮೆ ನಿರ್ಮಾಣ ಮಾಡಿರುವುದು ವಿಶ್ವದಾಖಲೆಯಾಗಿದೆ. ಇದೇ ಸಂದರ್ಭದಲ್ಲಿ ಪ್ರಧಾನಿ ಅವರು ಪ್ರತಿಮೆಯ ಸುತ್ತಲಿನ ಸುಮಾರು 20 ಎಕರೆ ಪ್ರದೇಶದಲ್ಲಿ ಕೆಂಪೇಗೌಡರ ಜೀವನ-ಸಾಧನೆಗಳನ್ನು ಬಿಂಬಿಸುವ ಥೀಮ್ ಪಾರ್ಕ್ ನಿರ್ಮಾಣಕ್ಕೂ ಚಾಲನೆ ನೀಡಿದರು.

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅತ್ಯಾಧುನಿಕವಾಗಿ ನಿರ್ಮಾಣ ಮಾಡಲಾಗಿರುವ ಟರ್ಮಿನಲ್ -2 ಅನ್ನು ಉದ್ಘಾಟನೆ ಮಾಡಿ, ವೀಕ್ಷಣೆ ಮಾಡಿದ ಪ್ರಧಾನಿ ಅವರು ಟರ್ಮಿನಲ್-2 ಅತ್ಯಂತ ಸುಂದವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಚೆನ್ನೈ-ಬೆಂಗಳೂರು-ಮೈಸೂರು ನಡುವೆ ಸಂಚರಿಸುವ ಅತಿ ವೇಗದ 'ವಂದೇ ಭಾರತ್' ರೈಲಿಗೆ ಹಾಗೂ ರಾಜ್ಯದ ಜನತೆಗೆ ಕಾಶಿ ದರ್ಶನದ ಪ್ಯಾಕೇಜ್ ಟೂರ್ ಒದಗಿಸುವ 'ಭಾರತ್ ಗೌರವ್ ಕಾಶಿ ದರ್ಶನ' ರೈಲಿಗೂ ಚಾಲನೆ ನೀಡಿದರು.

ವಂದೇ ಭಾರತ್ ರೈಲು ಚಾಲನೆಯಿಂದ ದಕ್ಷಿಣ ಭಾರತದಲ್ಲಿ ಇದೇ ಮೊದಲ ಬಾರಿಗೆ ಅತಿ ವೇಗದ ರೈಲು ಸಂಚರಿಸುವಂತ್ತಾಗಿದೆ. ಭಾರತ್ ಗೌರವ್ ಕಾಶಿ ವಿಶೇಷ ದರ್ಶನ ರೈಲು ಚಾಲನೆಯಿಂದ ನಮ್ಮ ರಾಜ್ಯವು ದೇಶದಲ್ಲೇ ಪ್ರಪ್ರಥಮ ಬಾರಿಗೆ ಕಾಶಿ ಯಾತ್ರೆ ಸೇವೆಯನ್ನು ಒದಗಿಸಿದ ರಾಜ್ಯವೆನಿಸಿದೆ. ಮುಜರಾಯಿ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆಯಾದ ಪ್ಯಾಕೇಜ್ ಯಾತ್ರೆ ಕೈಗೊಳ್ಳುವ ಯಾತ್ರಿಕರಿಗೆ ಸರ್ಕಾರದಿಂದ ಐದು ಸಾವಿರ ರೂ. ಸಹಾಯಧನವನ್ನು ಒದಗಿಸಲಾಗುತ್ತಿದೆ.

ಕರ್ನಾಟಕವು ದೇಶದಲ್ಲೇ ಕೋವಿಡ್-19 ನಂತರ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಆಯೋಜಿಸಿರುವ ಮೊದಲ ರಾಜ್ಯವಾಗಿದೆ. ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ತೆಗೆದುಕೊಂಡಿರುವ ಹಲವಾರು ಕೈಗಾರಿಕಾ ಸ್ನೇಹಿ ನಿರ್ಧಾರಗಳು ಕರ್ನಾಟಕವನ್ನು ದೇಶದ ಅತೀ ಹೆಚ್ಚು ಆಕರ್ಷಕ ಹೂಡಿಕೆ ತಾಣಗಳ ಪೈಕಿ ಮುಂಚೂಣಿಯ ರಾಜ್ಯವನ್ನಾಗಿ ಮಾಡಿದೆ. ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ ನಿರ್ಮಾಣ ಉದ್ದೇಶದಿಂದ ಸರ್ಕಾರವು ಕೈಗಾರಿಕಾಭಿವೃದ್ಧಿ ಹಾಗೂ ಉದ್ಯೋಗ ಸೃಷ್ಟಿಗೆ ಹೆಚ್ಚಿನ ಒತ್ತನ್ನು ನೀಡುತ್ತಿದೆ.

ಈ ಬಾರಿಯ ಜಿಮ್‌ನಲ್ಲಿ ಒಂಬತ್ತು ಲಕ್ಷ ಕೋಟಿಗೂ ಹೆಚ್ಚಿನ ಮೊತ್ತದ ಒಪ್ಪಂದಗಳಿಗೆ ಸಹಿ ಹಾಕಿರುವುದಲ್ಲದೆ, ಜಿಮ್ ಪ್ರಾರಂಭವಾಗುವ ಮೊದಲೇ ಶೇ. 29% ರಷ್ಟು ಯೋಜನೆಗಳಿಗೆ ಅನುಮೋದನೆ ದೊರಕಿದೆ. ಮುಂದಿನ ಮೂರು ತಿಂಗಳ ಅವಧಿಯೊಳಗೆ ಬಂಡವಾಳ ಹೂಡಿಕೆಯ ಎಲ್ಲಾ ಒಪ್ಪಂದಗಳನ್ನು ಅನುಷ್ಠಾನಗೊಳಿಸುವಂತೆ ಮುಖ್ಯಮಂತ್ರಿ ಅವರು ಸಂಬಂಧಿಸಿದ ಹಿರಿಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಯಶಸ್ವಿನಿ ಯೋಜನೆಯನ್ನು ಮರು ಜಾರಿ ಮಾಡುವಂತೆ ರೈತರು ಮತ್ತು ಸಹಕಾರ ಸದಸ್ಯರು ಸಲ್ಲಿಸಿದ್ದ ಬೇಡಿಕೆಯನ್ನು ಸರ್ಕಾರವು ಪೂರೈಸಿದೆ. ನವೆಂಬರ್ 1 ರಿಂದ ಯಶಸ್ವಿನಿ ಯೋಜನೆಯನ್ನು ಸರ್ಕಾರವು ಮರು ಜಾರಿಗೊಳಿಸಿದೆ. ಫಲಾನುಭವಿಗಳು ಅಂಗೀಕೃತ ಆಸ್ಪತ್ರೆಗಳಲ್ಲಿ ಈ ಯೋಜನೆಯಡಿ ಬರುವ ಯಾವುದೇ ಚಿಕಿತ್ಸೆಯನ್ನು ನಗದು ರಹಿತವಾಗಿ ಪಡೆಯಬಹುದು.

ನಮ್ಮ ರಾಜ್ಯವು ವಿದೇಶಿ ಬಂಡವಾಳ ಹೂಡಿಕೆ ಹಾಗೂ ಸ್ಟಾರ್ಟ್ ಅಪ್‌ಗಳಲ್ಲಿ ಉತ್ತಮ ಸ್ಥಾನದಲ್ಲಿದೆ. ಇತ್ತೀಚೆಗಷ್ಟೆ ಬೆಂಗಳೂರಿನಲ್ಲಿ ಮೂರು ದಿನಗಳ ಕಾಲ ಜರುಗಿದ ಟೆಕ್ ಸಮ್ಮಿಟ್-2022ನಲ್ಲಿ ನವೋದ್ಯಮಗಳ ಬೆಳವಣಿಗೆಗೆ ಇಂಬು ನೀಡುವ ನಿಟ್ಟಿನಲ್ಲಿ ಒಂಬತ್ತು ಒಡಂಬಡಿಕೆಗಳಿಗೆ ಸಹಿ ಹಾಕಲಾಗಿದೆ.

ತಮ್ಮ ನಟನೆ ಮತ್ತು ಸಾಮಾಜಿಕ ಕೆಲಸಗಳ ಮೂಲಕ ಯುವ ಜನರಗೆ ಮಾದರಿಯಾಗಿರುವ ಪುನೀತ್ ರಾಜ್‌ಕುಮಾರ್ ಅವರಿಗೆ ಮರಣೋತ್ತರವಾಗಿ ಸರ್ಕಾರವು ನಾಡಿನ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕನ್ನಡ ರಾಜ್ಯೋತ್ಸವದಂದು ಮುಖ್ಯಮಂತ್ರಿ ಅವರು ಪುನೀತ್ ಅವರ ಪತ್ನಿ ಅನಿತಾ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಹಾಗಾಗಿ ಹದಿಮೂರು ವರ್ಷಗಳ ನಂತರ 9ನೇ 'ಕರ್ನಾಟಕ ರತ್ನ' ಪ್ರಶಸ್ತಿಗೆ ಪುನೀತ್ ಅವರಿಗೆ ದೊರಕಿರುವುದು ಕನ್ನಡಿಗರಿಗೆಲ್ಲರಿಗೂ ಸಂತಸ ತಂದಿದೆ.

**ಓದುಗರೆಲ್ಲರಿಗೂ ಕ್ರಿಸ್‌ಮಸ್ ಶುಭಾಶಯಗಳು**

**ಡಾ|| ಪಿ. ಎಸ್. ಹರ್ಷ, ಐಪಿಎಸ್**
ಪ್ರಧಾನ ಸಂಪಾದಕರು

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Downloaded From:www.kpscvaani.com




# ಬೆಂಗಳೂರಿನ ಮುನ್ನಡೆಗೆ...

# ಪ್ರಧಾನಿ ಅವರಿಂದ ಮುಕ್ತ ಕಂಠದ ಶ್ಲಾಘನೆ

● ಮಂಜುನಾಥ ಡಿ.ಡೊಳ್ಳಿನ

**ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಭವ್ಯ ಕಂಚಿನ ಪ್ರಗತಿ ಪ್ರತಿಮೆ ಅನಾವರಣ, ಅತ್ಯಾಧುನಿಕ ಸೌಕರ್ಯಗಳ ಟರ್ಮಿನಲ್ 2 ಉದ್ಘಾಟನೆ, ದಕ್ಷಿಣ ಭಾರತದ ಮೊದಲ ವಂದೇ ಭಾರತ್ ಹಾಗೂ ಭಾರತ್ ಗೌರವ್ ಕಾಶಿಯಾತ್ರೆ ರೈಲುಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದಾರೆ**

ಸಿಲಿಕಾನ್ ಕಣಿವೆ, ಐಟಿ ಬಿಟಿ, ಸ್ಟಾರ್ಟ್ ಅಪ್ ಹಬ್ ಎಂದು ಜಗದ್ವಿಖ್ಯಾತಿ ಗಳಿಸಿರುವ ಬೆಂಗಳೂರು ನಗರ ಭವಿಷ್ಯದ ಹತ್ತು ಹಲವು ಅವಕಾಶಗಳ ಮಹಾ ಆಗರವೆನಿಸಿದೆ. ಈ ಮಹಾನ್ ನಗರದ ಸ್ಥಾಪಕ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಭವ್ಯ ಕಂಚಿನ ಪ್ರಗತಿ ಪ್ರತಿಮೆ ಅನಾವರಣ, ಅತ್ಯಾಧುನಿಕ ಸೌಕರ್ಯವುಳ್ಳ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಟದ ಟರ್ಮಿನಲ್-2 ಉದ್ಘಾಟನೆ, ದಕ್ಷಿಣ ಭಾರತದ ಮೊಟ್ಟ ಮೊದಲ ವಂದೇ ಭಾರತ್ ರೈಲು ಹಾಗೂ ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆ ವ್ಯವಸ್ಥೆ ಮಾಡಿರುವ ಭಾರತ್ ಗೌರವ್ ಕಾಶಿ ದರ್ಶನ ರೈಲು ಪ್ರಯಾಣಕ್ಕೆ ಚಾಲನೆ ಸೇರಿದಂತೆ ಹಲವು ಮಹತ್ವದ ಸರಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿಯವರು 2022 ರ ನವೆಂಬರ್ 11ರಂದು ಬೆಂಗಳೂರಿಗೆ ನೀಡಿದ ಭೇಟಿ ಕನ್ನಡ ನಾಡಿನಾದ್ಯಂತ ಸಂಚಲನ ಮೂಡಿಸಿತು.

ಅಂದು ಬೆಳಿಗ್ಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿನ ಹೆಚ್.ಎ.ಎಲ್. ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಮಂತ್ರಿ ನರೇಂದ್ರ ಮೋದಿಯವರನ್ನು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿಯವರಾದ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಷಿ ಮತ್ತಿತರ ಗಣ್ಯರು ಬರಮಾಡಿಕೊಂಡರು.



Downloaded From:www.kpscvaani.com

ಶಾಸಕರ ಭವನದ ಆವರಣದಲ್ಲಿರುವ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಹಾಗೂ ದಾಸವರೇಣ್ಯ ಸಂತ ಕನಕದಾಸರ ಪ್ರತಿಮೆಗಳಿಗೆ ಪ್ರಧಾನಮಂತ್ರಿಯವರು ಗೌರವ ಸಮರ್ಪಿಸಿದರು. ಅಲ್ಲಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಕ್ಕೆ ತೆರಳಿದ ಅವರು ಚೆನ್ನೈ-ಬೆಂಗಳೂರು-ಮೈಸೂರು ನಡುವೆ ಸಂಚರಿಸುವ ದಕ್ಷಿಣ ಭಾರತದ ಮೊದಲ ವಂದೇ ಭಾರತ್ ಅತಿವೇಗದ ರೈಲು ಹಾಗೂ ಬೆಂಗಳೂರಿನಿಂದ ಕಾಶಿಕ್ಷೇತ್ರಕ್ಕೆ ಸಂಚರಿಸುವ ಭಾರತ್ ಗೌರವ್ ಕಾಶಿಯಾತ್ರೆ ವಿಶೇಷ ರೈಲಿಗೆ ಹಸಿರು ನಿಶಾನೆ ತೋರಿದರು.

ನಂತರ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಮಂತ್ರಿಗಳು, ವಿಮಾನ ನಿಲ್ದಾಣದ ಅತ್ಯಾಧುನಿಕ ಎರಡನೇ ಟರ್ಮಿನಲ್ ಉದ್ಘಾಟಿಸಿ, ಪ್ರಗತಿ ಪ್ರತಿಮೆ ಎಂದು ಕರೆಯಲಾಗುವ ನಾಡಪ್ರಭು ಕೆಂಪೇಗೌಡ ಅವರ 108 ಅಡಿಯ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿ, ನಾಡ ಪ್ರಭು ಕೆಂಪೇಗೌಡ, ಸಂತ ಶ್ರೇಷ್ಠ ಕನಕದಾಸ ಹಾಗೂ ವೀರ ವನಿತೆ ಒನಕೆ ಓಬವ್ವ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿದರು.

ನಾಡಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿಯವರಿಗೆ ನಾಡಪ್ರಭು ಕೆಂಪೇಗೌಡರ ಬೆಳ್ಳಿಯ ಪ್ರತಿಮೆ ನೀಡಿ, ಬನಾರಸ್ ಸೀರೆ, ಮುತ್ತು, ಗರಿಗಳ ಸೂಕ್ಷ್ಮ ಕುಸುರಿಯೊಂದಿಗೆ ವಿನ್ಯಾಸಗೊಳಿಸಲಾಗಿದ್ದ ರಾಜಗಾಂಭೀರ್ಯದ ಕೆಂಪೇಗೌಡರ ಪೇಟ ತೊಡಿಸಿ ಗಣ್ಯರು ಸನ್ಮಾನಿಸಿದರು.



ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎರಡನೇ ಟರ್ಮಿನಲ್ ಲೋಕಾರ್ಪಣೆಗೊಳ್ಳುವ ಮೂಲಕ ಇದು ದೇಶದ ಎರಡನೇ ಅತಿದೊಡ್ಡ ವಿಮಾನ ನಿಲ್ದಾಣ ಎಂಬ ಹಿರಿಮೆಗೆ ಪಾತ್ರವಾಗಿದೆ. ನಾಡಪ್ರಭು ಕೆಂಪೇಗೌಡರು ಯೋಜನಾಬದ್ಧ ನಗರ ನಿರ್ಮಿಸಿ ತಮ್ಮ ದೂರದೃಷ್ಟಿಯ ಕನಸುಗಳನ್ನು ಸಾಕಾರಗೊಳಿಸಿದರು. ಅವರ ವಿಚಾರ, ರೀತಿ, ನೀತಿಗಳ ಧಾರೆಯಲ್ಲಿ ನಾಡು ಕಟ್ಟಲು ಸರ್ಕಾರ ಸಂಕಲ್ಪ ಮಾಡುತ್ತದೆ. ದೇಶದ ಹತ್ತು ಹಲವು ಸಮಸ್ಯೆಗಳನ್ನು ಪರಿಹರಿಸಿ ಅಭಿವೃದ್ಧಿಯಲ್ಲಿ ಸರ್ವರಿಗೂ ಸಮಪಾಲು ನೀಡಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತ ಹೆಮ್ಮೆಯಿಂದ ಮುನ್ನಡೆಯುತ್ತಿದೆ. ನವಭಾರತ ನಿರ್ಮಾಣಕ್ಕಾಗಿ ಕನ್ನಡ ನಾಡಿನ ಅಭಿವೃದ್ಧಿಗೆ ಪ್ರಧಾನಿ ಮೋದಿಯವರು ಅನೇಕ ಕೊಡುಗೆಗಳನ್ನು ನಿರಂತರವಾಗಿ ನೀಡುತ್ತಿದ್ದಾರೆ.

–ಬಸವರಾಜ ಎಸ್ ಬೊಮ್ಮಾಯಿ, ಮುಖ್ಯಮಂತ್ರಿಗಳು







Downloaded From:www.kpscvaani.com





**ಕೆಂಪೇಗೌಡ ಅವರ ಕಲ್ಪನೆಯಂತೆಯೇ ಬೆಂಗಳೂರು ಪ್ರಗತಿಯ ಹಾದಿಯಲ್ಲಿ ಮುನ್ನಡೆ**

ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ಭುವನಹಳ್ಳಿ ಬಳಿ ಏರ್ಪಡಿಸಲಾಗಿದ್ದ ಬೃಹತ್ ಸಾರ್ವಜನಿಕ ಸಮಾರಂಭದಲ್ಲಿ ನೆರೆದಿದ್ದ ಲಕ್ಷಾಂತರ ಜನರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕರ್ನಾಟಕದ ಜನತೆಗೆ ಕೋಟಿ ಕೋಟಿ ನಮಸ್ಕಾರಗಳು ಎಂದು ಕನ್ನಡದಲ್ಲಿ ತಮ್ಮ ಭಾಷಣ ಪ್ರಾರಂಭಿಸಿದಾಗ ಜನಸ್ತೋಮದಲ್ಲಿನ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು.

ನಾಡಪ್ರಭು ಕೆಂಪೇಗೌಡ ಅವರ ಅದ್ಭುತ ಹಾಗೂ ಅದ್ವಿತೀಯ ಕಲ್ಪನೆಯಂತೆಯೇ ಬೆಂಗಳೂರು ಪ್ರಗತಿಯ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಮುಕ್ತ ಕಂಠದಿಂದ ಶ್ಲಾಘನೆ ಮಾಡಿದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಾಣಿಜ್ಯ, ಸಂಸ್ಕೃತಿ ಹಾಗೂ ಸವಲತ್ತುಗಳ ಕ್ಷೇತ್ರಗಳಲ್ಲಿ ಕೆಂಪೇಗೌಡರ ದೂರದೃಷ್ಟಿಯ ಲಾಭವನ್ನು ಬೆಂಗಳೂರು ಪಡೆದಿದೆ ಎಂದು ಬಣ್ಣಿಸಿದರು.

ಕೋವಿಡ್–19 ರ ಸಂದರ್ಭದಲ್ಲೂ ಕರ್ನಾಟಕದಲ್ಲಿ ನಾಲ್ಕು ಲಕ್ಷ ಕೋಟಿ ರೂ ಹೂಡಿಕೆಯಾಗಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಾತ್ರವಲ್ಲ, ಜೈವಿಕ ತಂತ್ರಜ್ಞಾನ, ರಕ್ಷಣಾ ಉಪಕರಣಗಳ ತಯಾರಿಕೆ, ವೈಮಾನಿಕ ಹಾಗೂ ಅಂತರಿಕ್ಷ ಕೈಗಾರಿಕಾ ಕ್ಷೇತ್ರಗಳೂ ಒಳಗೊಂಡಂತೆ ಎಲ್ಲಾ ಕ್ಷೇತ್ರಗಳಲ್ಲಿ ಶೇಕಡಾ 25 ರಷ್ಟು ಕೊಡುಗೆ ಕರ್ನಾಟಕದ್ದಾಗಿದೆ. ನವೋದ್ಯಮದ ತವರಾಗಿ

**ಸಂಸ್ಕೃತಿ, ಪರಂಪರೆ, ಆಧ್ಯಾತ್ಮ ಅರಿತವರು ಭವಿಷ್ಯ ಸೃಷ್ಟಿಸಬಲ್ಲರು. ಜ್ಞಾನದ ಜೊತೆ ಕರ್ಮ ಜ್ಞಾನವೂ ಬೇಕು. ಭಾರತ ಉಳಿದರೆ ಎಲ್ಲರೂ ಉಳಿಯುತ್ತಾರೆ. ಭಾರತ ಅಳಿದರೆ ಎಲ್ಲರೂ ಅಳಿಯುತ್ತಾರೆ. ಕೊರೊನಾ ಸಂಕಷ್ಟದ ಕಾಲವನ್ನು ಸಮರ್ಥವಾಗಿ ಎದುರಿಸಿ ದೇಶ ಮುನ್ನಡೆಯುತ್ತಿದೆ. ಸುಮಾರು 500 ವರ್ಷಗಳ ಹಿಂದೆ ಯಾವುದೇ ಜಾತಿ, ಪಂಥಗಳಿಗೆ ಸೀಮಿತವಾಗದೇ ದೂರದೃಷ್ಟಿಯಿಂದ ಮಾನವ ಸಂಪನ್ಮೂಲದ ಸದ್ವಿನಿಯೋಗ ಹಾಗೂ ಕೌಶಲ್ಯಗಳನ್ನು ಆಧರಿಸಿ ನಾಡಪ್ರಭು ಕೆಂಪೇಗೌಡರು ನಿರ್ಮಿಸಿದ 64 ಮಾರುಕಟ್ಟೆಗಳು ಬೆಂಗಳೂರನ್ನು ಆರ್ಥಿಕ, ವಾಣಿಜ್ಯ ಶಕ್ತಿ ಕೇಂದ್ರವಾಗಿಸಿವೆ. ಪ್ರಧಾನಿ ಮೋದಿಯವರೂ ಕೂಡ ಅಂತಹ ದೂರದೃಷ್ಟಿಯ ನೇತಾರರಾಗಿದ್ದಾರೆ.**

**–ಶ್ರೀ ನಿರ್ಮಲಾನಂದ ಮಹಾಸ್ವಾಮೀಜಿ**
**ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರು**



Downloaded From:www.kpscvaani.com






## ವಂದೇ ಭಾರತ್ ರೈಲು

ಚೆನ್ನೈ–ಬೆಂಗಳೂರು–ಮೈಸೂರು ನಡುವೆ ಸಂಚರಿಸುವ ವಂದೇ ಭಾರತ್ ರೈಲಿಗೆ, ನವೆಂಬರ್ 11 ರಂದು ಪ್ರಧಾನಿ ಮೋದಿ ಬೆಂಗಳೂರಿನಲ್ಲಿ ಚಾಲನೆ ನೀಡಿದರು. ರೈಲು ಮೈಸೂರಿನಿಂದ ಆರಂಭವಾಗಿ ಬೆಂಗಳೂರು ಮೂಲಕ ಚೆನ್ನೈ ನಗರವನ್ನು ತಲುಪಲಿದೆ. ಇದು ದೇಶದ 5ನೇ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಹಾಗೂ ದಕ್ಷಿಣ ಭಾರತದ ಮೊದಲ ವಂದೇ ಭಾರತ್ ರೈಲು ಎನಿಸಿದೆ. ಟೆಕ್ ಮತ್ತು ಸ್ಟಾರ್ಟ್ ಅಪ್ ಹಬ್ ಬೆಂಗಳೂರು, ಕೈಗಾರಿಕಾ ಹಬ್ ಚೆನ್ನೈ ಮತ್ತು ಪ್ರಸಿದ್ಧ ಪ್ರವಾಸಿತಾಣ ಮೈಸೂರಿಗೆ ಸಂಪರ್ಕ ಕಲ್ಪಿಸುವ ಅತಿ ವೇಗದ ರೈಲು ಇದಾಗಿದೆ.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು, ಸ್ವದೇಶಿ ನಿರ್ಮಿತ ಅಪಘಾತ ತಡೆ ತಂತ್ರಜ್ಞಾನ 'ಕವಚ' ದಂತಹ ಅತ್ಯಾಧುನಿಕ ಸೌಕರ್ಯಗಳನ್ನು ಒಳಗೊಂಡಿದೆ. 52 ಸೆಕೆಂಡುಗಳಲ್ಲಿ 0 ಯಿಂದ 100 ಕಿ.ಮೀಗೆ ವೇಗ ಹೆಚ್ಚಿಸಿಕೊಳ್ಳಲಿದೆ. ಪ್ರತಿ ಗಂಟೆಗೆ ಗರಿಷ್ಠ ವೇಗದ ಮಿತಿ 180 ಕಿ.ಮೀ ಆಗಿದೆ. 2019ರಲ್ಲಿ ದೆಹಲಿ–ಕಾನ್ಪುರ–ಅಲಹಾಬಾದ್–ವಾರಣಾಸಿ ನಡುವಣ ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ಆರಂಭಿಸಲಾಗಿತ್ತು.

ಎಲ್ಲಾ ಸಾಮಾನ್ಯ ರೈಲುಗಳ ಟಿಕೆಟ್ ಕಾಯ್ದಿರಿಸುವ ಮಾದರಿಯಲ್ಲಿಯೇ ಈ ರೈಲಿಗೂ ಕೂಡ ಐಆರ್‌ಸಿಟಿಸಿ ವೆಬ್‌ಸೈಟ್ ಮೂಲಕ ಟಿಕೆಟ್ ಕಾಯ್ದಿರಿಸಬಹುದು.

ರೂಪಿತವಾಗಿರುವ ಬೆಂಗಳೂರು ಅಂತಾರಾಷ್ಟ್ರೀಯ ನಕ್ಷೆಯಲ್ಲಿ ನವ ಭಾರತದ ಹೊಸ ಅಸ್ಮಿತೆಯೇ ಆಗಿದೆ.

ದೇಶದಲ್ಲಿಯೇ ಅತಿ ಹೆಚ್ಚು ವಿದೇಶೀ ನೇರ ಬಂಡವಾಳದ ಹೂಡಿಕೆ ಕರ್ನಾಟಕದಲ್ಲಾಗಿದೆ. ರಾಷ್ಟ್ರದ ರಕ್ಷಣಾ ಕ್ಷೇತ್ರದಲ್ಲಿ ಶೇಕಡಾ 70 ರಷ್ಟು ಕೊಡುಗೆ ಕರ್ನಾಟಕದ್ದೇ ಆಗಿದೆ. ಫಾರ್ಚೂನ್ - 500 ಕಂಪನಿಗಳ ಪಟ್ಟಿಯಲ್ಲಿರುವ 400 ಕ್ಕೂ ಹೆಚ್ಚು ಕಂಪನಿಗಳು ಕರ್ನಾಟಕದಲ್ಲಿವೆ. ವಿದ್ಯುತ್ ವಾಹನಗಳ ತಯಾರಿಕಾ ಕ್ಷೇತ್ರದಲ್ಲಿಯೂ ಕರ್ನಾಟಕವು ಮುಂಚೂಣಿಯಲ್ಲಿದೆ ಎಂದರು.

ಸ್ವದೇಶಿ ನಿರ್ಮಿತ ಪರಿಕಲ್ಪನೆಯ ಅಭಿವೃದ್ಧಿ ಸೂತ್ರ ಆತ್ಮ ನಿರ್ಭರ ಭಾರತದ ಮೇಡ್ ಇನ್ ಇಂಡಿಯಾ ಬೆಂಗಳೂರಿನ ಯುವ ಜನತೆ ಹಾಗೂ ವೃತ್ತಿಪರರಿಗೆ ವಿಪುಲ ಉದ್ಯೋಗಾವಕಾಶಗಳನ್ನು ದೊರಕಿಸಿಕೊಟ್ಟಿದೆ.

ಸದಾ ಹಳೆಯ ಯೋಚನೆ ಮತ್ತು ಹಳೆಯ ಯೋಜನೆಗಳಲ್ಲಿಯೇ ಹೆಜ್ಜೆ ಇಡುತ್ತಿದ್ದ ಹಿಂದಿನ ಸರ್ಕಾರಗಳಿಗೆ ಹೊಸ ಆಲೋಚನೆಗಳೇ ಹೊಳೆಯುತ್ತಿರಲಿಲ್ಲ. ಆದರೆ, ತಮ್ಮ ಸರ್ಕಾರದ ಅವಧಿಯಲ್ಲಿ ಆಡಳಿತ ನಿರ್ವಹಣೆಯಲ್ಲಿ ಭೌತಿಕ ಮೂಲಭೂತ ಸೌಲಭ್ಯ ಹಾಗೂ ಅಂಕಿತ ಪಾವತಿ ( ಡಿಜಿಟಲ್ ಪೇಮೇಂಟ್ ) ಯಂತಹ ಯೋಜನೆಗಳು ಅನುಷ್ಠಾನಗೊಂಡು ಅಭಿವೃದ್ಧಿಯ ವೇಗ ಹೆಚ್ಚಾಗಿದೆ.

ಅಂತೆಯೇ, ಬಹು ಮಾದರಿ ಸಂಪರ್ಕಕ್ಕೆ ಪ್ರಗತಿಯ ವೇಗ ಭಾರತದ

## ಕರ್ನಾಟಕ – ಭಾರತ್ ಗೌರವ್ ಕಾಶಿ ದರ್ಶನ ರೈಲು : 15 ಸಾವಿರ ರೂಪಾಯಿಗಳಲ್ಲಿ 8 ದಿನಗಳ ಕಾಶಿ ದರ್ಶನ ಪ್ಯಾಕೇಜ್ ಟೂರ್

ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆ ಕರ್ನಾಟಕ – ಭಾರತ್ ಗೌರವ್ ಕಾಶಿ ದರ್ಶನ ರೈಲಿಗೂ ಕೂಡ ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದರು.

'ದಿವ್ಯ ಕಾಶಿ – ಭವ್ಯಕಾಶಿ' ಗೆ ರಾಜ್ಯದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಕಾಶಿ ವಿಶ್ವನಾಥನ ದರ್ಶನ ಪಡೆಯಲಿ ಎನ್ನುವ ಉದ್ದೇಶದಿಂದ ಈ ವಿಶೇಷ ಪ್ಯಾಕೇಜ್ ಟೂರನ್ನು ಆಯೋಜಿಸಲಾಗಿದೆ. ಕೇಂದ್ರ ಸರಕಾರದ ಭಾರತ್ ಗೌರವ್ ಯೋಜನೆಯ ಅಡಿಯಲ್ಲಿ ರೈಲನ್ನು ರಾಜ್ಯ ಸರ್ಕಾರದ ಮುಜರಾಯಿ ಇಲಾಖೆ ಗುತ್ತಿಗೆಗೆ ಪಡೆದು ಈ ಯೋಜನೆ ಕಾರ್ಯತಗೊಳಿಸುತ್ತಿದೆ.

ಬೆಂಗಳೂರಿನಿಂದ ಹೊರಡುವ ಈ ರೈಲನ್ನು ಹತ್ತಲು ಉತ್ತರ ಕರ್ನಾಟಕದ ಪ್ರಮುಖ ನಿಲ್ದಾಣಗಳಲ್ಲೂ ಅವಕಾಶ ಕಲ್ಪಿಸಲಾಗಿದೆ. ಈ ರೈಲು ಬೆಂಗಳೂರು, ಬೀರೂರು, ಹಾವೇರಿ, ಹುಬ್ಬಳ್ಳಿ, ಬೆಳಗಾವಿ ಹಾಗೂ ರಾಯಬಾಗ ಮಾರ್ಗವಾಗಿ ಕಾಶಿ, ಅಯೋಧ್ಯ ಮತ್ತು ಪ್ರಯಾಗರಾಜ್‌ಗೆ ಸಂಚರಿಸಲಿದೆ.

ಐಆರ್‌ಸಿಟಿಸಿ ಸಹಭಾಗಿತ್ವದಲ್ಲಿ ವಿಶೇಷ ಪ್ಯಾಕೇಜ್‌ನಲ್ಲಿ ಯಾತ್ರಾರ್ಥಿಗಳಿಗೆ ಎಲ್ಲಾ ಅಗತ್ಯ ಸೇವೆಗಳನ್ನು ಒದಗಿಸಲಾಗಿದ್ದು, ಈ ಟೂರ್ ಪ್ಯಾಕೇಜ್ ತಗೆದುಕೊಳ್ಳುವ ಪ್ರತಿ ವ್ಯಕ್ತಿಗೂ 5 ಸಾವಿರ ರೂಪಾಯಿಗಳ ಸಹಾಯಧನವನ್ನು ಕರ್ನಾಟಕ ಸರ್ಕಾರ ನೀಡಲಿದೆ. ಈ ಪ್ಯಾಕೇಜ್‌ನ ದರ ಮೂಲತಃ 20 ಸಾವಿರ ರೂಪಾಯಿಗಳಾಗಿದ್ದು, ಪ್ರಯಾಣಿಕರು ಕೇವಲ 15 ಸಾವಿರ ರೂಪಾಯಿಗಳನ್ನು ಪಾವತಿಸಿದರೆ ಸಾಕು.


Downloaded From:www.kpscvaani.com




ಶಕ್ತಿ ಎಂಬ ಧ್ಯೇಯ ಹೊತ್ತ ಪ್ರಧಾನ ಮಂತ್ರಿ ರಾಷ್ಟ್ರೀಯ ಯೋಜನೆ ( ಪ್ರೈಮ್ ಮಿನಿಸ್ಟರ್ಸ್ ನ್ಯಾಷನಲ್ ಮಾಸ್ಟರ್ ಪ್ಲಾನ್ ಫಾರ್ ಮಲ್ಟಿ ಮಾಡೆಲ್ ಕನೆಕ್ಟಿವಿಟಿ) ಹಾಗೂ ರಾಷ್ಟ್ರೀಯ ಸಾಗಣಾ ನೀತಿ ( ನ್ಯಾಷನಲ್ ಲಾಜಿಸ್ಟಿಕ್ಸ್ ಪಾಲಿಸಿ ) ಯಲ್ಲಿನ ನವನವೀನ ಅಂಶಗಳು ದೇಶವನ್ನು ಪ್ರಗತಿ ಪಥದಲ್ಲಿ ಕೊಂಡೊಯ್ಯುತ್ತಿವೆ ಎಂದು ಪ್ರಧಾನಮಂತ್ರಿಯವರು ವಿವರಿಸಿದರು.

**ಕರ್ನಾಟಕದಲ್ಲಿ ಅಭಿವೃದ್ಧಿಯ ಪರ್ವ**

ಕಳೆದ ಎಂಟು ವರ್ಷಗಳಲ್ಲಿ ದೇಶದಲ್ಲಿ ನಿರ್ಮಿಸಿರುವ 35 ಕೋಟಿ ಮನೆಗಳ ಪೈಕಿ ಎಂಟು ಲಕ್ಷ ಮನೆಗಳನ್ನು ಕರ್ನಾಟಕದಲ್ಲಿಯೇ ನಿರ್ಮಿಸಲಾಗಿದೆ.

ಕೊಳವೆ ನೀರು ಸರಬರಾಜು ಯೋಜನೆಯಲ್ಲಿ ಏಳು ಕೋಟಿ ಸಂಪರ್ಕಗಳಿಗೆ ಪ್ರತಿಯಾಗಿ 30 ಲಕ್ಷ ಸಂಪರ್ಕಗಳು ಕರ್ನಾಟಕದಲ್ಲಿವೆ.

ಆಯುಷ್ಮಾನ್ ಭಾರತ್ ಆರೋಗ್ಯ ವಿಮಾ ಯೋಜನೆಯಲ್ಲಿ ದೇಶದ ನಾಲ್ಕು ಕೋಟಿ ಫಲಾನುಭವಿಗಳ ಪೈಕಿ 30 ಲಕ್ಷ ಫಲಾನುಭವಿಗಳು ಕರ್ನಾಟಕದವರೇ ಆಗಿದ್ದಾರೆ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ 10 ಕೋಟಿ ರೈತರಿಗೆ ಪ್ರತಿಯಾಗಿ 2.25 ಲಕ್ಷ ಫಲಾನುಭವಿಗಳು ಕರ್ನಾಟಕದವರಾಗಿದ್ದಾರೆ ಎಂದು ಪ್ರಧಾನಮಂತ್ರಿ ಅವರು ಅಂಕಿ-ಅಂಶಗಳನ್ನು ಹಂಚಿಕೊಂಡರು.

ರಾಷ್ಟ್ರದಲ್ಲಿ ವಾಯುಯಾನ ಕ್ಷೇತ್ರದಲ್ಲಿ ಗಮನಾರ್ಹ ಬೆಳವಣಿಗೆಯಾಗಿದೆ. ವಿಶ್ವದ ಹಲವು ದೇಶಗಳ ಪೈಕಿ ಭಾರತದಲ್ಲಿ ವಿಮಾನ ಪ್ರಯಾಣಿಕರ ಸಂಖ್ಯೆಯಲ್ಲಿ ಅತ್ಯಧಿಕ ಏರಿಕೆಯಾಗಿದೆ. ವಿಮಾನ ಪ್ರಯಾಣಿಕರ ಸಂಖ್ಯೆಯಲ್ಲಿನ ಗಣನೀಯ ಏರಿಕೆ ಹಾಗೂ ಪ್ರಯಾಣ ಮಾರುಕಟ್ಟೆ ವಿಸ್ತಾರಗೊಂಡಿರುವುದನ್ನು ಗಮನಿಸಿ ಈ ನಿಟ್ಟಿನಲ್ಲಿ ತಮ್ಮ ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ. 2014 ರಲ್ಲಿ ದೇಶದಲ್ಲಿ 70 ವಿಮಾನ ನಿಲ್ದಾಣಗಳಿದ್ದವು. ಇದೀಗ ದೇಶದಲ್ಲಿ ದುಪ್ಪಟ್ಟು ಅಂದರೆ 140 ವಿಮಾನ ನಿಲ್ದಾಣಗಳಿವೆ. ಹೊಸ ಟರ್ಮಿನಲ್‌ಗಳು, ಹೊಸ ಸೌಲಭ್ಯಗಳು ಹೀಗೆ ಹಳೆಯ ವಿಮಾನ ನಿಲ್ದಾಣಗಳನ್ನೂ ಮೇಲ್ದರ್ಜೇಗೇರಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

ಅದೇ ರೀತಿ, ರೈಲು ಸಂಪರ್ಕ ಕ್ಷೇತ್ರದಲ್ಲೂ ಕ್ರಾಂತಿಕಾರಿ ಬೆಳವಣಿಗೆಗಳಾಗಿವೆ.

**108 ಅಡಿ ಎತ್ತರದ ಪ್ರಗತಿ ಪ್ರತಿಮೆ**

ಜಾಗತಿಕ ನಕ್ಷೆಯಲ್ಲಿ ಬೆಂಗಳೂರಿನ ಖ್ಯಾತಿಗೆ ಕಾರಣರಾದ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಬೃಹತ್ ಕಂಚಿನ ಪ್ರತಿಮೆ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ತಲೆ ಎತ್ತಿದೆ. ಪ್ರಗತಿಯ ಪ್ರತಿಮೆ ಎಂದು ಕರೆಯಲಾಗಿರುವ ಈ ಪ್ರತಿಮೆಯು 18 ಅಡಿ ಎತ್ತರದ ಪೀಠದ ಮೇಲೆ, ವರೆಯಲ್ಲಿನ ಕತ್ತಿಯನ್ನು ಹೊರತೆಗೆದು ಕೈಯಲ್ಲಿ ಹಿಡಿದು ಅಜಾನುಬಾಹುವಾಗಿ ನಿಂತಿರುವ 90 ಅಡಿ ಎತ್ತರದ ಘನಗಾಂಭೀರ್ಯದ ನಾಡಪ್ರಭು ಕೆಂಪೇಗೌಡರ ಪ್ರತಿಮೆ ಭವ್ಯವಾಗಿ ಸ್ಥಾಪನೆಯಾಗಿದೆ. ಪೀಠಕ್ಕೆ 120 ಟನ್ ಉಕ್ಕು ಹಾಗೂ ಪ್ರತಿಮೆಗೆ 100 ಟನ್ ಕಂಚು ಬಳಸಲಾಗಿದೆ. ಪೀಠದ ಪದತಲದ ನಾಲ್ಕೂ ದಿಕ್ಕುಗಳಲ್ಲಿ ನಾಡಪ್ರಭುವಿನ ಜೀವಿತಾವಧಿಯ ನಾಲ್ಕು ಪ್ರಮುಖ ಘಟ್ಟಗಳು ಉಬ್ಬುಶಿಲ್ಪದಲ್ಲಿ ಮೂಡಿವೆ. ಪರಿವಾರ ಸಹಿತ ಕಾಲಭೈರವೇಶ್ವರನಿಗೆ ಪೂಜೆ, ಮಾರುಕಟ್ಟೆ, ಕೆರೆ, ಎಲ್ಲ ಸಮುದಾಯಗಳ ಆಸ್ಥಾನ ಸಭೆ ಹಾಗೂ ಕೋಟೆ ನಿರ್ಮಾಣಕ್ಕೆ ಮಾರ್ಗದರ್ಶನ ನೀಡುತ್ತಿರುವ ಕೆಂಪೇಗೌಡರ ಚಿತ್ರಗಳನ್ನು ಶಿಲ್ಪಿ ಮೂಡಿಸಿದ್ದಾರೆ. ನಾಡಪ್ರಭುವಿನ ಹಾವ-ಭಾವ, ಮುಖ ಚಹರೆ ಹಾಗೂ ಗುಣಲಕ್ಷಣಗಳನ್ನು ಪುತ್ತೂರಿನ ಕೆ.ಚಂದ್ರನಾಥ ಆಚಾರ್ಯ ವಿನ್ಯಾಸಗೊಳಿಸಿದರೆ, ಹೆಸರಾಂತ ಅನುಭವಿ ಕಲಾವಿದ 90 ರ ಹರೆಯದ ರಾಮ್ ಸುತಾರ್ ಹಾಗೂ ಅವರ ಮಗ ಅನಿಲ ಸುತಾರ್ ಅವರ ನೈಪುಣ್ಯತೆಯಲ್ಲಿ ಅದ್ಭುತ ಕಂಚಿನ ಕಲಾಕೃತಿ ಹೊರಹೊಮ್ಮಿದೆ. ಸುಮಾರು 64 ಕೋಟಿ ರೂ.ವೆಚ್ಚದಲ್ಲಿ ಈ ಬೃಹತ್ ಪ್ರತಿಮೆ ಎದ್ದು ನಿಂತಿದೆ.

ಪ್ರತಿಮೆ ಸುತ್ತಲಿನ ಸುಮಾರು 20 ಎಕರೆ ಪ್ರದೇಶದಲ್ಲಿ ಕೆಂಪೇಗೌಡರ ಜೀವನ-ಸಾಧನೆಗಳನ್ನು ಬಿಂಬಿಸುವ ಥೀಮ್ ಪಾರ್ಕ್ ನಿರ್ಮಿಸಲು ಇದೇ ಸಂದರ್ಭದಲ್ಲಿ ಚಾಲನೆ ನೀಡಲಾಯಿತು, ರಾಜ್ಯದ ಸುಮಾರು 24 ಸಾವಿರ ವಿವಿಧ ಸ್ಥಳಗಳಿಂದ ಸಂಗ್ರಹಿಸಿದ ಪವಿತ್ರ ಮಣ್ಣನ್ನು ಈ ಥೀಮ್ ಪಾರ್ಕಿನಲ್ಲಿ ಬಳಸಿ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ. ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣ ಅಭಿವೃದ್ಧಿ ಪ್ರಾಧಿಕಾರವು ಈ ಕಾರ್ಯವನ್ನು ಅನುಷ್ಠಾನಗೊಳಿಸುತ್ತಿದೆ.

16 ನೇ ಶತಮಾನದಲ್ಲಿ ಬೆಂಗಳೂರು ನಗರ ಸ್ಥಾಪನೆಗೆ ತಮ್ಮ ದೂರದೃಷ್ಟಿಯೊಂದಿಗೆ ಯೋಜನಾಬದ್ಧ ರೂಪುರೇಷೆ ಹಾಕಿ ಮುನ್ನುಡಿ ಬರೆದ ನಾಡಪ್ರಭು ಕೆಂಪೇಗೌಡರು ಇಂದು ತನ್ನ ಕನಸಿನ ನಗರ ಜಗತ್ತಿನ ಪ್ರಮುಖ ನಗರವಾಗಿ ಗುರುತಿಸಿಕೊಂಡಿರುವುದನ್ನು, ಅಜಾನುಬಾಹುವಾಗಿ ನಿಂತು ನೋಡುತ್ತಿದ್ದಾರೆ. ಅಭಿವೃದ್ಧಿಯೊಂದಿಗೆ ಪ್ರಾಕೃತಿಕ ಸಮತೋಲನದ ಸಂರಕ್ಷಣೆಯನ್ನೂ ಇಂದಿನ ಪೀಳಿಗೆ ಪಾಲಿಸಲಿ ಎಂಬ ಸಂದೇಶವನ್ನು ತಮ್ಮ ಕಣ್ಣಂಚಿನಲ್ಲಿಯೇ ಅವರು ಭಾವಪೂರ್ಣವಾಗಿ ನೀಡುತ್ತಿದ್ದಾರೆ.



Downloaded From:www.kpscvaani.com



ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಆಡಳಿತಾವಧಿಯಲ್ಲಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೊದಲ ಟರ್ಮಿನಲ್ ಉದ್ಘಾಟನೆಯಾಗಿತ್ತು. ಇದೀಗ ಪ್ರಧಾನಿ ಮೋದಿಯವರಿಂದ ಎರಡನೇ ಟರ್ಮಿನಲ್ ಲೋಕಾರ್ಪಣೆಯಾಗಿದೆ. ಮೆಟ್ರೋ, ಉಪನಗರ ರೈಲು ಯೋಜನೆಗಳು ಬೆಂಗಳೂರಿನ ಸರ್ವಾಂಗೀಣ ವಿಕಾಸಕ್ಕೆ ಮುನ್ನುಡಿ ಬರೆಯುತ್ತಿವೆ.

**– ಪ್ರಲ್ಹಾದ ಜೋಶಿ,**
**ಕೇಂದ್ರ ಸಚಿವರು**

**ಅತ್ಯಾಧುನಿಕ ಸೌಕರ್ಯಗಳ ಟರ್ಮಿನಲ್ 2**

ಸಾಮಾಜಿಕ ಜಾಲತಾಣದ ತಮ್ಮ ಟ್ವೀಟ್‌ನಲ್ಲಿ ತಾವು ಹಂಚಿ ಕೊಂಡ ಚಿತ್ರಕ್ಕಿಂತಲೂ ನೈಜವಾಗಿ ನೋಡಿದಾಗ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಅತ್ಯಂತ ಸುಂದರ ಮತ್ತು ಆಧುನಿಕವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹರ್ಷ ವ್ಯಕ್ತಪಡಿಸಿದರು. ಕೇಂದ್ರ, ರಾಜ್ಯ ಸರ್ಕಾರ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಾಣವಾಗಿರುವ ಎರಡನೇ ಟರ್ಮಿನಲ್ ಪರಿಸರ ಕಾಳಜಿ, ನಾಡಿನ ಕಲೆ, ಸಂಸ್ಕೃತಿ, ತಂತ್ರಜ್ಞಾನ–ಆವಿಷ್ಕಾರದ ಮನಮೋಹಕ ಮೂರ್ತರೂಪವಾಗಿದೆ. ಒಟ್ಟು 2.55 ಚದರ ಮೀಟರ್ ವಿಸ್ತೀರ್ಣದಲ್ಲಿ ಸುಮಾರು 13 ಸಾವಿರ ಕೋಟಿ ರೂ.ವೆಚ್ಚದಲ್ಲಿ ನಿರ್ಮಾಣವಾಗಿರುವ ಟರ್ಮಿನಲ್ 2 ರಲ್ಲಿ, ಶೇಕಡಾ ನೂರರಷ್ಟು ನವೀಕರಿಸಬಹುದಾದ ಇಂಧನ ಬಳಕೆ ಮಾಡಲಾಗುತ್ತಿದೆ. 5,239 ಆಸನಗಳ ಮೊಗಸಾಲೆ, 100 ಕೌಂಟರುಗಳು, ತ್ವರಿತ ಭದ್ರತಾ ತಪಾಸಣೆ, ಸ್ವಯಂ ಬ್ಯಾಗೇಜ್ ಡ್ರಾಪ್, ಚೆಕ್ ಇನ್, ಬಹುವಿಧ ಸಾರಿಗೆ ಮತ್ತಿತರ ಸೌಕರ್ಯಗಳನ್ನು ಹೊಂದಿದೆ.

ಎಲ್ಲಾ ನಿಲ್ದಾಣಗಳಲ್ಲೂ ನಿಲುಗಡೆ ಮಾಡಿ ತೆರಳುತ್ತಿದ್ದ ರೈಲುಗಳ ವೇಗ ಹೆಚ್ಚಿಸಲಾಗಿದೆ. ದೇಶಾದ್ಯಂತ ವಂದೇ ಭಾರತ್ ಮತ್ತು ವಿಸ್ಟೋಡೋಮ್‌ನ 400 ಕ್ಕೂ ಹೆಚ್ಚು ರೈಲುಗಳು ಸದ್ಯದಲ್ಲಿಯೇ ಸಂಚರಿಸಲಿವೆ. ಚೆನ್ನೈ–ಬೆಂಗಳೂರು–ಮೈಸೂರು ಮಾರ್ಗದ ವಂದೇ ಭಾರತ್ ಎಕ್ಸ್‌ಪ್ರೆಸ್ ಹಾಗೂ ಬೆಂಗಳೂರು ಮತ್ತು ವಾರಣಾಸಿ ನಡುವೆ ಸಂಚರಿಸಲಿರುವ ಭಾರತ್ ಗೌರವ್ ಎಕ್ಸ್‌ಪ್ರೆಸ್ ರೈಲುಗಳು ರಾಜ್ಯದ ಜನತೆಗೆ ನೀಡಿದ ಕೊಡುಗೆಗಳಾಗಿವೆ.

ವಾರಣಾಸಿಯಲ್ಲಿ ಕಾಶಿ ವಿಶ್ವನಾಥನ ದರ್ಶನ, ಪ್ರಯಾಗ್ ರಾಜ್ (ಅಲಹಾಬಾದ್) ನಲ್ಲಿ ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಹಾಗೂ ಅಯೋಧ್ಯೆಯಲ್ಲಿ ಶ್ರೀರಾಮ ಜನ್ಮಭೂಮಿಯನ್ನು ಕಣ್ತುಂಬಿಕೊಳ್ಳಲು ಭಾರತ್ ಗೌರವ್ ಎಕ್ಸ್‌ಪ್ರೆಸ್ ರಿಯಾಯಿತಿ ದರದಲ್ಲಿ ವಿಶೇಷ ಅವಕಾಶ ದೊರಕಿಸಿಕೊಡಲಿದೆ. ಬೆಂಗಳೂರಿನ ಸರ್ ಎಂ ವಿಶ್ವೇಶ್ವರಯ್ಯ ರೈಲು ನಿಲ್ದಾಣ ಸಂಪೂರ್ಣ ಹವಾನಿಯಂತ್ರಿತವಾಗಿದ್ದು, ಹೊಸ ಅನುಭವವನ್ನೇ ನೀಡುತ್ತದೆ. ಬೆಂಗಳೂರಿನ ಕಂಟೋನ್ಮೆಂಟ್ ಮತ್ತು ಯಶವಂತಪುರ ರೈಲು ನಿಲ್ದಾಣಗಳಿಗೂ ಕಾಯಕಲ್ಪ ನೀಡಲಾಗಿದೆ ಎಂದು ಹೇಳಿದರು.

**ಕನಕದಾಸರು ಮತ್ತು ಒನಕೆ ಓಬವ್ವ ಸ್ಮರಣೆ**

ಜಾತಿ–ಜಾತಿಗಳ ನಡುವೆ ಸಂಘರ್ಷ ಬೇಡ ಎಂಬ ಸಂದೇಶ ಹೊತ್ತ ಕುಲ ಕುಲ ಕುಲವೆಂದು ಹೊಡೆದಾಡದಿರಿ ಎಂಬ ಸಂತ ಶ್ರೇಷ್ಠ ಕನಕದಾಸರ ಸತ್ವಭರಿತ ತತ್ವ ಪದವನ್ನು ಸ್ಮರಿಸಿದ ನರೇಂದ್ರ ಮೋದಿ ಅವರು ಮನುಷ್ಯ–ಮನುಷ್ಯರನ್ನು ಒಂದುಗೂಡಿಸುವ ಭಗವತ್ ಭಕ್ತಿ ಹಾಗೂ ಸಾಮಾಜಿಕ ಶಕ್ತಿಗೆ ಕನಕದಾಸರು ಪ್ರೇರಣೆಯಾಗಿದ್ದರು ಎಂದು ಬಣ್ಣಿಸಿದರು.

ಹದಿನೈದನೇ ಶತಮಾನದಲ್ಲಿಯೇ ತಮ್ಮ ರಾಮಧಾನ್ಯ ಚರಿತೆಯಲ್ಲಿ ಕನಕದಾಸರು ಸಿರಿಧಾನ್ಯದ ಮಹತ್ವವನ್ನು ಉಲ್ಲೇಖಿಸಿರುವುದನ್ನು ಪ್ರಧಾನ ಮಂತ್ರಿ ಅವರು ನೆನಪಿಸಿಕೊಂಡರು. ಸಿರಿಧಾನ್ಯಗಳಲ್ಲೊಂದಾದ ರಾಗಿ ಕರ್ನಾಟಕದ ಬಹುಜನರ ಜನಪ್ರಿಯ ಆಹಾರವಾಗಿದೆ ಎಂದು ಅವರು ಹೇಳಿದರು. ನಾಡಿನ ಸಂರಕ್ಷಣೆಗಾಗಿ ದಿಟ್ಟವಾಗಿ ಹೋರಾಡಿ, ಪ್ರಾಣತ್ಯಾಗ ಮಾಡಿದ ವೀರವನಿತೆ ಒನಕೆ ಓಬವ್ವಳ ಆದರ್ಶಗಳನ್ನು ನಾವೆಲ್ಲ ಮೈಗೂಡಿಸಿಕೊಳ್ಳಬೇಕು ಎಂದು ಸ್ಮರಿಸಿದರು.

ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್, ಶ್ರೀ ಗುರುಗುಂಡ ಬ್ರಹ್ಮೇಶ್ವರ ಮಠದ ಪೀಠಾಧ್ಯಕ್ಷ ಶ್ರೀ ನಂಜಾವಧೂತ ಸ್ವಾಮೀಜಿ, ಕೇಂದ್ರ ಸಚಿವರಾದ ಅಶ್ವಿನ್ ವೈಷ್ಣವ್, ಎ. ನಾರಾಯಣಸ್ವಾಮಿ, ಭಗವಂತ್ ಖೂಬಾ, ಶೋಭಾ ಕರಂದ್ಲಾಜೆ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಸಂಸದ ಸದಾನಂದಗೌಡ, ರಾಜ್ಯದ ಸಚಿವರಾದ ಅರಗ ಜ್ಞಾನೇಂದ್ರ, ಸಿ.ಎನ್.ಅಶ್ವತ್ಥನಾರಾಯಣ, ಆರ್.ಅಶೋಕ, ನಾರಾಯಣಗೌಡ, ಸುನೀಲ್‌ಕುಮಾರ್, ಬಿ.ಎ.ಬಸವರಾಜ, ಕೆ.ಗೋಪಾಲಯ್ಯ, ಮುನಿರತ್ನ, ಎನ್.ನಾಗರಾಜ(ಎಂ.ಟಿ.ಬಿ), ವಿ.ಸೋಮಣ್ಣ, ಡಾ.ಕೆ.ಸುಧಾಕರ್, ಎಸ್.ಟಿ.ಸೋಮಶೇಖರ್ ಅವರು ವೇದಿಕೆಯಲ್ಲಿದ್ದರು.


Downloaded From:www.kpscvaani.com




## ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ

# ನಿರೀಕ್ಷೆಗೂ ಮೀರಿ ಹರಿದು ಬಂದ ಬಂಡವಾಳ

**'ಬ್ರ್ಯಾಂಡ್ ಬೆಂಗಳೂರು' ಜತೆ, 'ಬಿಯಾಂಡ್ ಬೆಂಗಳೂರು' ಪರಿಕಲ್ಪನೆಯನ್ನು ಯಶಸ್ವಿಯಾಗಿಸಿದ 'ಜಿಮ್ 2022'.**



**ಡಾ.ಮುರುಗೇಶ ಆರ್. ನಿರಾಣಿ**
ಬೃಹತ್ ಮತ್ತು ಮಧ್ಯಮ
ಕೈಗಾರಿಕಾ ಸಚಿವರು

ಜಾಗತಿಕ ಹೂಡಿಕೆದಾರರ ಸಮಾವೇಶ ನಿರೀಕ್ಷೆಗೂ ಮೀರಿ ಯಶಸ್ವಿಯಾಗಿದೆ. ಈ ಬಾರಿ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 5 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ ಐದು ಲಕ್ಷ ಉದ್ಯೋಗಗಳು ಸೃಷ್ಟಿಯಾಗುವ ನಿರೀಕ್ಷೆ ಸರ್ಕಾರದ್ದಾಗಿತ್ತು.

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಅದ್ಧೂರಿ ತೆರೆಬಿದ್ದಿದ್ದು, ಸಮಾವೇಶದಲ್ಲಿ 9.8 ಲಕ್ಷ ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಒಡಂಬಡಿಕೆ ಆಗಿದೆ.

ಆದರೆ, ವಿಶ್ವದ ಅಗ್ರಮಾನ್ಯ ಉದ್ಯಮಿಗಳು ರಾಜ್ಯದಲ್ಲಿ ಅತಿ ಹೆಚ್ಚು ಬಂಡವಾಳ ಹೂಡಿಕೆ ಮಾಡಲು ಮುಂದೆ ಬಂದಿರುವುದು ಸರ್ಕಾರದ ನಿರೀಕ್ಷೆಯನ್ನು ಮತ್ತಷ್ಟು ಹೆಚ್ಚುವಂತೆ ಮಾಡಿದೆ. ರಾಜ್ಯದಲ್ಲಿ ಲಕ್ಷಾಂತರ ಉದ್ಯೋಗಗಳು ಸೃಷ್ಟಿಯಾಗುವ ಅಂದಾಜಿದ್ದು, ನಮ್ಮ ಕನ್ನಡಿಗರಿಗೆ ಹೆಚ್ಚಿನ ಪ್ರಮಾಣದಲ್ಲಿ ಉದ್ಯೋಗ ಸಿಗಲಿವೆ ಎಂಬುದೇ ಅತ್ಯಂತ ಸಂತಸದ ವಿಷಯ.

**'ಗ್ಲೋಬಲ್ ಇನ್ವೆಸ್ಟರ್ಸ್ ಮೀಟ್'** ಇದು ಕರ್ನಾಟಕದಲ್ಲಿ ನಡೆದ ಐದನೆಯ ಮತ್ತು ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವನಾಗಿ ನನ್ನ ನೇತೃತ್ವದಲ್ಲಿ ಮೂರನೇ ಜಾಗತಿಕ ಹೂಡಿಕೆದಾರರ ಸಮಾವೇಶವಾಗಿತ್ತು.



Downloaded From:www.kpscvaani.com




ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವೀಡಿಯೋ ಕಾನ್ಫರೆನ್ಸ್ ಮೂಲಕ ಸಮಾವೇಶವನ್ನು ಉದ್ಘಾಟನೆ ಮಾಡಿದ್ದು, ಈ ಬಾರಿಯ ಸಮಾವೇಶಕ್ಕೆ ವಿಶೇಷ ಮೆರಗು ತಂದುಕೊಟ್ಟಿತು.

ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು, ಕೇಂದ್ರ ವಿತ್ತ ಸಚಿವರಾದ ನಿರ್ಮಲಾ ಸೀತಾರಾಮನ್, ವಾಣಿಜ್ಯ ಮತ್ತು ಕೈಗಾರಿಕೆ, ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಜವಳಿ ಸಚಿವರಾದ ಪಿಯೂಷ್ ಗೋಯಲ್, ಸಂಸದೀಯ ವ್ಯವಹಾರಗಳು, ಕಲ್ಲಿದ್ದಲು ಮತ್ತು ಗಣಿ ಸಚಿವರಾದ ಪ್ರಲ್ಹಾದ್ ಜೋಶಿ, ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರಾದ ರಾಜೀವ್ ಚಂದ್ರಶೇಖರ್ ಬೆಂಗಳೂರಿನ ಅರಮನೆಯಲ್ಲಿ ನವೆಂಬರ್ 2ರಂದು ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದ ಉದ್ಘಾಟನಾ ಸಮಾವೇಶದಲ್ಲಿ ಉಪಸ್ಥಿತರಿದ್ದರು.

ಅಗ್ರ ಕೈಗಾರಿಕೋದ್ಯಮಿಗಳಾದ ಜಿಂದಾಲ್ ಗ್ರೂಪ್ ಅಧ್ಯಕ್ಷರಾದ ಸಜ್ಜನ್ ಜಿಂದಾಲ್, ಟೊಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್‌ನ ಉಪಾಧ್ಯಕ್ಷರಾದ ವಿಕ್ರಮ್ ಎಸ್ ಕಿರ್ಲೋಸ್ಕರ್, ವಿಪ್ರೋ ಅಧ್ಯಕ್ಷರಾದ ರಿಷಾದ್ ಪ್ರೇಮ್‌ಜೀ, ಭಾರತಿ ಎಂಟರ್‌ಪ್ರೈಸಸ್‌ನ ಉಪಾಧ್ಯಕ್ಷರಾದ ರಾಜನ್ ಭಾರತಿ ಮಿತ್ತ, ಅದಾನಿ ಪೋರ್ಟ್ಸ್ ಮತ್ತು ಎಸ್‌ಇಝುಡ್‌ನ ಸಿಇಒ ಕರಣ್ ಅದಾನಿ ಮತ್ತು ಸ್ಟೆರ್ಲೈಟ್ ಪವರ್‌ನ ಎಂಡಿ ಪ್ರತೀಕ್ ಅಗರ್ವಾಲ್ ಅವರು ಕರ್ನಾಟಕದಲ್ಲಿ ತಮ್ಮ ಉದ್ಯಮ ಅನುಭವವನ್ನು ಹಂಚಿಕೊಳ್ಳುವ ಜೊತೆಗೆ ರಾಜ್ಯದಲ್ಲಿ ಇನ್ನೂ ಹೆಚ್ಚಿನ ಹೂಡಿಕೆ ಮಾಡುವ ಇಂಗಿತವನ್ನು ವ್ಯಕ್ತಪಡಿಸಿದರು.

> "ರಾಜ್ಯ ಮತ್ತು ಕೇಂದ್ರದಲ್ಲಿ ಒಂದೇ ಸರ್ಕಾರ ಇರುವುದರಿಂದ ಹೂಡಿಕೆ ಸಮಾವೇಶ ಸಾಕಾರವಾಯಿತು. ಕೇಂದ್ರ ಸರ್ಕಾರದ ಸಹಕಾರದಿಂದ ಕರ್ನಾಟಕ ಈ ಸಾಧನೆ ಮಾಡಿದೆ. ಡಬಲ್ ಇಂಜಿನ್ ಸರ್ಕಾರದಿಂದ ಕಾರ್ಯಕ್ರಮಗಳ ಅನುಷ್ಠಾನ ಸಾಧ್ಯವಾಗಿದೆ. ಕೇಂದ್ರ ಸರ್ಕಾರ 5 ಟ್ರಿಲಿಯನ್ ಡಾಲರ್ ಆರ್ಥಿಕ ಗುರಿ ಹೊಂದಿದೆ. ಕರ್ನಾಟಕ ಒಂದು ಟ್ರಿಲಿಯನ್ ಕೊಡುಗೆ ನೀಡಲಿದೆ. ಈಗಾಗಲೇ ಕರ್ನಾಟಕ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಹೂಡಿಕೆದಾರರ ಹೆಗಲಿಗೆ ಹೆಗಲು ಕೊಟ್ಟು ಸರ್ಕಾರ ಕೆಲಸ ಮಾಡಲಿದೆ."
>
> **-ಬಸವರಾಜ ಎಸ್ ಬೊಮ್ಮಾಯಿ, ಮುಖ್ಯಮಂತ್ರಿಗಳು**

ಎರಡನೇ ದಿನದ ಸಮಾವೇಶದಲ್ಲಿ ವನ್ಯಜೀವಿ ಚಲನಚಿತ್ರ ನಿರ್ಮಾಪಕರಾಗಿ ಮತ್ತು ಪ್ರಸಿದ್ಧ ನೈಸರ್ಗಿಕ ಇತಿಹಾಸಕಾರ ಹಂಟರ್ ತಮ್ಮ ವೃತ್ತಿ ಬದುಕಿನ ರೋಚಕ ವಿಷಯಗಳನ್ನು ಹಂಚಿಕೊಂಡರು. ಜುಕರ್ ಬರ್ಗ್ ಮೀಡಿಯಾ ಸಂಸ್ಥಾಪಕಿ ಯಾರ್ಲ್ ಡಿ ಜುಕರ್‌ಬರ್ಗ್ **" ಬೆಂಗಳೂರು ತಂತ್ರಜ್ಞಾನದ ತವರೂರು, ಇಡೀ ಜಗತ್ತಿಗೆ ಚಿರಪರಿಚಿತವಾದ ಹೆಸರು"** ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**"ಡ್ರೈವಿಂಗ್ ಇಂಡಿಯಾ ಇನ್ ದ ಫ್ಯೂಚರ್: ರೆವಲ್ಯೂಷನ್ ಇನ್ ಇಂಡಿಯಾಸ್ ಮೊಬಿಲಿಟಿ"** ಸೆಷನ್‌ನಲ್ಲಿ ಸನ್ ಮೊಬಿಲಿಟಿಯ ಸಹ ಸಂಸ್ಥಾಪಕ ಮತ್ತು ಅಧ್ಯಕ್ಷ ಚೇತನ್ ಮೈನಿ, ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸೊಲ್ಯೂಷನ್ಸ್ ಸಿಇಒ ಮತ್ತು ಎಂಡಿ ಅಸಿಮ್ ಕುಮಾರ್ ಮುಖೋಪಾಧ್ಯಾಯ ಮತ್ತು ಸ್ವಿಚ್ ಮೊಬಿಲಿಟಿಯ ಚೀಫ್ ರೆವಿನ್ಯೂ ಅಧಿಕಾರಿ ಸಚಿನ್ ನಿಜವಾನ್ ಭಾಗವಹಿಸಿದ್ದರು.

ಇಂಧನ ಕ್ಷೇತ್ರ ಕುರಿತ ಸಂವಾದದಲ್ಲಿ ಪಾಲ್ಗೊಂಡು ಮಾತನಾಡಿದ ವಿಜಯ್ ನಿರಾಣಿ, "ಏಷ್ಯಾದಲ್ಲೇ ಅತಿ ಹೆಚ್ಚು ಎಥನಾಲ್ ಉತ್ಪಾದನೆ ಮಾಡುವ ರಾಜ್ಯ ಕರ್ನಾಟಕ. ಪವನ ಹಾಗೂ ಸೌರ ವಿದ್ಯುತ್ ಉತ್ಪಾದನೆ ಯೋಜನೆಯನ್ನು ಅಭಿವೃದ್ಧಿಪಡಿಸಿ, ಮುಂದಿನ ಐದು




Downloaded From:www.kpscvaani.com










## ಜಿಮ್‌ನಲ್ಲಿ ಕಲಾ ಗರಿಮೆ ಅನಾವರಣ:

2022ರ ಜಿಮ್‌ನಲ್ಲಿ ಕರ್ನಾಟಕ ಸಾಂಸ್ಕೃತಿಕ ಪರಂಪರೆಯ ಹಲವು ಕಲೆಗಳೂ ಅನಾವರಣಗೊಂಡಿದ್ದೊಂದು ವಿಶೇಷವಾಗಿತ್ತು.

ಕರ್ನಾಟಕ ಸರ್ಕಾರದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ಪ್ರಾಚ್ಯವಸ್ತು ಮತ್ತು ಪರಂಪರೆ ಇಲಾಖೆ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಸಹಯೋಗದೊಂದಿಗೆ ಕನ್ನಡ ನಾಡಿನ ಮೇರು ಸಾಂಸ್ಕೃತಿಕ ಖಜಾನೆಯನ್ನು ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದಲ್ಲಿ ಪ್ರಸ್ತುತಪಡಿಸಿ, ಬಂಡವಾಳ ಹೂಡಿಕೆದಾರರ ಗಮನ ಸೆಳೆಯಲಾಯಿತು.

ಭಾರತೀಯ ಮಹಾಕಾವ್ಯಗಳಾದ ರಾಮಾಯಣ ಹಾಗೂ ಮಹಾ ಭಾರತದ ಅನೇಕ ಸನ್ನಿವೇಶಗಳನ್ನು ಚಿತ್ರ ಚಿತ್ತಾರಗಳ ಮೂಲಕ ತೊಗಲು ಗೊಂಬೆಗಳ ಪ್ರದರ್ಶನವೂ ಏರ್ಪಟ್ಟಿತ್ತು. ಇದರೊಂದಿಗೆ ಕರ್ನಾಟಕದ ಹಿರಿಮೆ ಗರಿಮೆಗಳನ್ನು ಹೆಚ್ಚಿಸಿರುವ ವರ್ಣ ಶಿಲ್ಪಿ ಕೆ.ವೆಂಕಟಪ್ಪ, ಕೆ.ಕೆ.ಹೆಬ್ಬಾರ್, ರುಮಾಲೆ ಚೆನ್ನಬಸವಯ್ಯ, ಎಫ್.ಬಿ.ಯಲವಟ್ಟಿ, ಹನುಮಯ್ಯ, ಎಂ.ಎಸ್ ಚಂದ್ರಶೇಖರ್, ಮುಂತಾದ ಪ್ರಖ್ಯಾತ ಚಿತ್ರಕಲಾವಿದರ ಪ್ರಕೃತಿ ಚಿತ್ರಗಳು, ಸಾಂಪ್ರದಾಯಿಕ ಚಿತ್ರಗಳು ಹಾಗೂ ಐತಿಹಾಸಿಕ ತಾಣಗಳ ತೈಲ ವರ್ಣ ಚಿತ್ರಗಳು ಪ್ರದರ್ಶನದಲ್ಲಿದ್ದವು.

ಕನ್ನಡ ನಾಡಿನ ಗುಡಿಗಾರರ ಸೂಕ್ಷ್ಮ ಮರದ ಕೆತ್ತನೆ, ಪಂಚಲೋಹಗಳ ದೇವ ದೇವತೆಗಳ ಪ್ರತಿಮೆಗಳು ಈ ನೆಲದ ಕಲೆಯ ವೈಭವವನ್ನು ಅನಾವರಣಗೊಳಿಸಿದವು.

ಚಿತ್ರಕಲಾ ಪರಿಷತ್ತಿನಲ್ಲಿ ಕರ್ನಾಟಕದ ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಪ್ರಾಚೀನ ತೊಗಲುಗೊಂಬೆ ಆಟಗಳು ನಡೆದವು.

ವರ್ಷಗಳಲ್ಲಿ ಕರ್ನಾಟಕದ ನವೀಕರಿಸಬಹುದಾದ ಇಂಧನದ ಸಾಮರ್ಥ್ಯವನ್ನು 10 ಪಟ್ಟು ಹೆಚ್ಚಿಸಲು ಯೋಜಿಸಲಾಗಿದೆ" ಎಂದರು.

ಮೂರನೇ ದಿನದ ಸಮಾವೇಶದಲ್ಲಿ ಸ್ವಾರ್ ಬಕ್ಸ್‌ನ ಸಹ ಸಂಸ್ಥಾಪಕರಾದ ಜೀವ್ ಸೇಗ್ಲ್ ಅವರು ತಮ್ಮ ವೃತ್ತಿ ಬದುಕಿನ ಅನುಭವ ಹಂಚಿಕೊಂಡರು. ಕೊವಿಡ್‌ನಂಥ ಪರಿಸ್ಥಿತಿ ಎದುರಿಸುವ ಸನ್ನದ್ಧತೆ ಕುರಿತ ಸಮಾವೇಶದಲ್ಲಿ ಆರೋಗ್ಯ ಸಚಿವರಾದ ಡಾ. ಕೆ. ಸುಧಾಕರ್, ನಾರಾಯಣ ಹೆಲ್ತ್‌ನ ಸಂಸ್ಥಾಪಕರಾದ ಡಾ. ದೇವಿ ಶೆಟ್ಟಿ, ವಿಶ್ವ ಆರೋಗ್ಯ ಸಂಸ್ಥೆಯ ಡಾ. ಸೌಮ್ಯ ಸ್ವಾಮಿನಾಥನ್ ಪಾಲ್ಗೊಂಡು ಅರ್ಥಪೂರ್ಣ ಚರ್ಚೆ ನಡೆಸಿದರು. ದಿ ಪ್ರಿಂಟ್‌ನ ಸಂಸ್ಥಾಪಕ ಶೇಖರ್ ಗುಪ್ತ ಸಂವಾದ ನಡೆಸಿಕೊಟ್ಟರು.

ಕರ್ನಾಟಕದಲ್ಲಿ ಹೂಡಿಕೆ ಮಾಡಿರುವ ಉದ್ಯಮಿಗಳ ಯಶೋಗಾಥೆಗೆ ರಿಸಿಲಿಯಂಟ್ ಕರ್ನಾಟಕ ವೇದಿಕೆ ಸಾಕ್ಷಿಯಾಯಿತು.

### ಬ್ರ್ಯಾಂಡ್ ಬೆಂಗಳೂರು ಜತೆಗೆ ಬಿಯಾಂಡ್ ಬೆಂಗಳೂರು– ಯಶಸ್ವಿ

ಬ್ರ್ಯಾಂಡ್ ಬೆಂಗಳೂರಿನ ಘನತೆ ಹೆಚ್ಚಿಸುವುದರೊಂದಿಗೆ ಬಿಯಾಂಡ್ ಬೆಂಗಳೂರು ಮೂಲಕ 2–3ನೇ ಹಂತದ ನಗರಗಳಿಗೆ ಕೈಗಾರಿಕೆಗಳನ್ನು ವಿಸ್ತರಿಸುವ ಮಹತ್ವಾಕಾಂಕ್ಷೆಯೊಂದಿಗೆ ಆರಂಭವಾದ ಈ ಸಮಾವೇಶ ತನ್ನ ಉದ್ದೇಶ ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ.

ಬ್ಯುಲ್ಡ್ ಫಾರ್ ದಿ ವರ್ಲ್ಡ್ ಎಂಬ ಘೋಷವಾಕ್ಯದೊಂದಿಗೆ ನಡೆದ ಮೂರು ದಿನಗಳ ಸಮಾವೇಶದಲ್ಲಿ 9.8 ಲಕ್ಷ ಕೋಟಿ ರೂಪಾಯಿಗೂ ಹೆಚ್ಚಿನ ಹೂಡಿಕೆ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಅದರಲ್ಲಿ ಬಹುತೇಕ ಹೂಡಿಕೆಗಳು ಬೆಂಗಳೂರು ಅಲ್ಲದೇ  ಟೈರ್ 2 ಮತ್ತು ಟೈರ್ 3 ನಗರ–ಪಟ್ಟಗಳು ಮತ್ತು ಅದರ ಸುತ್ತಲಿನ ಪ್ರದೇಶಗಳಲ್ಲಿ ಅನುಷ್ಠಾನಗೊಳ್ಳುವಂತಹದ್ದು.

ಮತ್ತೊಂದೆಡೆ ಸಂಶೋಧನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಬೆಂಗಳೂರಿನ ಸಾಧನೆ ಪರಿಗಣಿಸಿ ಈ ಕ್ಷೇತ್ರದ ಹೂಡಿಕೆಗಳು ಬೆಂಗಳೂರಿಗೆ ಭಾರೀ ಪ್ರಮಾಣದಲ್ಲಿ ಬರುವುದರೊಂದಿಗೆ


Downloaded From:www.kpscvaani.com









ಬ್ರ್ಯಾಂಡ್ ಬೆಂಗಳೂರು ಕೂಡ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದೆ.

ಹೂಡಿಕೆದಾರರ ಸಮಾವೇಶಗಳೆಂದರೆ ಅಲ್ಲಿ ಬೆಂಗಳೂರು ನಗರ ಮತ್ತು ಸುತ್ತಮುತ್ತ ಹಾಗೂ ಪ್ರಮುಖ ನಗರಗಳಿಗೆ ಮಾತ್ರ ಸೀಮಿತವಾಗಿರುತ್ತವೆ ಎಂಬ ಭಾವನೆಯನ್ನು ಈ ಬಾರಿಯ ಸಮಾವೇಶ ಖಂಡಿತವಾಗಿಯೂ ದೂರ ಮಾಡಿದೆ. ಬೆಂಗಳೂರಿನ ಆಚೆಗೂ ಅತಿ ಹೆಚ್ಚು ಹೂಡಿಕೆಗಳನ್ನು ಆಕರ್ಷಿಸುವಲ್ಲಿ ಇನ್ವೆಸ್ಟ್ ಕರ್ನಾಟಕ– 2022 ಯಶಸ್ವಿಯಾಗಿದೆ.

### ಬಿಯಾಂಡ್ ಬೆಂಗಳೂರಿಗೆ ಬಲ

ಬೆಂಗಳೂರಿನ ಹೊರಗೆ ಅಂದರೆ ಟೈರ್ 2 ಮತ್ತು 3 ನಗರಗಳಲ್ಲಿ ಅಂದರೆ ಮೈಸೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ, ಕೊಪ್ಪಳ, ವಿಜಯಪುರ ಹೀಗೆ ರಾಜ್ಯದ ಎಲ್ಲಾ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಮೂಲಕ ಆ ಭಾಗದಲ್ಲಿರುವ ಮಾನವ ಸಂಪನ್ಮೂಲವನ್ನು ಪ್ರದೇಶಗಳ ಆರ್ಥಿಕ ಬೆಳವಣಿಗೆಗೆ ಅವಕಾಶ ಕಲ್ಪಿಸುವ ಮೂಲಕ ರಾಜ್ಯದ ಸುಸ್ಥಿರ ಮತ್ತು ಸಮಗ್ರ ಅಭಿವೃದ್ಧಿಗೆ ಕ್ರಮ ಕೈಗೊಳ್ಳಬೇಕು ಎಂಬುದು ಸರಕಾರದ ಉದ್ದೇಶ.

ಅದರಲ್ಲೂ ಮುಖ್ಯವಾಗಿ ಗ್ರೀನ್ ಹೈಡ್ರೋಜನ್, ನವೀಕರಿಸಬಹುದಾದ ಇಂಧನ, ಏರೋಸ್ಪೇಸ್ ಮತ್ತು ರಕ್ಷಣೆ ಮುಂತಾದ ವಲಯಗಳಲ್ಲಿ ಆ ಭಾಗದಲ್ಲಿ ಸಾಕಷ್ಟು ಹೂಡಿಕೆ ಮಾಡಲು ಆಸಕ್ತಿ ತೋರಿರುವ ಕೈಗಾರಿಕೋದ್ಯಮಿಗಳು ಈ ಕುರಿತಂತೆ ಸರಕಾರದ ಜತೆ ಒಪ್ಪಂದ ಮಾಡಿಕೊಂಡಿದ್ದಾರೆ.

ಬಿಯಾಂಡ್ ಬೆಂಗಳೂರಿಗಾಗಿ ಸರಕಾರ ಮೊದಲೇ ಸಿದ್ಧತೆ ಮಾಡಿಕೊಂಡಿತ್ತು. ವಿದೇಶಗಳು ಮತ್ತು ದೇಶದ ಪ್ರಮುಖ ನಗರಗಳಲ್ಲಿ ನಡೆದ ರೋಡ್ ಶೋ ವೇಳೆ ಈ ಕುರಿತು ಉದ್ಯಮಿಗಳ ಜತೆ ಮಾತುಕತೆ ನಡೆಸಲಾಗಿತು. ಅದಕೂ ಮೊದಲು

ಹಿಂದುಳಿದಿರುವ ಕೈಗಾರಿಕಾ ಅಭಿವೃದ್ಧಿಯನುಸಾರ ಬಂಡವಾಳ ಹೂಡಿಕೆಗಳಿಗೆ ರಿಯಾಯಿತಿ ಒದಗಿಸಲು ರಾಜ್ಯದ ಜಿಲ್ಲೆಗಳನ್ನು ಮೂರು ವಲಯಗಳನ್ನಾಗಿ ವಿಂಗಡಿಸಲಾಗಿತ್ತು.

ಬೆಂಗಳೂರು ಕೇಂದ್ರಿತ ಕೈಗಾರಿಕೆಗಳ ಸ್ಥಾಪನೆ ತಪ್ಪಿಸುವ ನಿಟ್ಟಿನಲ್ಲಿ ರೂಪಿಸಿರುವ ಒಂದು ಜಿಲ್ಲೆ ಒಂದು ಉತ್ಪಾದನೆ ಕಾರ್ಯಕ್ರಮದಡಿ ಕೊಪ್ಪಳದಲ್ಲಿ ಆಟಿಕೆ ಕ್ಲಸ್ಟರ್, ಹುಬ್ಬಳ್ಳಿ ಧಾರವಾಡದಲ್ಲಿ ಎಫ್‌ಎಂಸಿಜಿ ಕ್ಲಸ್ಟರ್, ಯಾದಗಿರಿಯ ಜಿಲ್ಲೆಯಲ್ಲಿ ಫಾರ್ಮಾ ಕ್ಲಸ್ಟರ್, ಕಲಬುರ್ಗಿಯಲ್ಲಿ ಜವಳಿ, ಜ್ಯವೆಲ್ಲರಿ ಪಾರ್ಕ್, ಹುಬ್ಬಳ್ಳಿ–ಧಾರವಾಡದಲ್ಲಿ ಐಟಿ ಪಾರ್ಕ್ ಅಭಿವೃದ್ಧಿ ಪಡಿಸಲಾಗಿತ್ತು. ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆ ಸ್ಥಾಪನೆಗೆ, ಅದರಲ್ಲಿಯೂ ಕೃಷಿ ಆಧಾರಿತ ಟೆಕ್ಸ್‌ಟೈಲ್ ಹಾಗೂ ಫುಡ್ ಪ್ರೊಸೆಸ್ಸಿಂಗ್ ಕೈಗಾರಿಕೆಗಳ ಸ್ಥಾಪನೆಗೆ ಆದ್ಯತೆ ನೀಡಲಾಗಿತ್ತು. ತುಮಕೂರು ಮಷಿನ್ ಟೂಲ್ಸ್ ಪಾರ್ಕ್, ಫುಡ್ ಪಾರ್ಕ್, ಜಪಾನೀಸ್ ಕೈಗಾರಿಕಾ ಪ್ರದೇಶ ಹೀಗೆ ಹಲವಾರು ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲಾಗಿತ್ತು.

ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡುವವರಿಗೆ ನಮ್ಮ ಸರ್ಕಾರ ವಿಶ್ವದರ್ಜೆಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಿದ್ದು, ಉದ್ದಿಮೆದಾರರು ಬಂಡವಾಳ ಹೂಡಲು ಮುಂದೆ ಬರಬೇಕು. ■







Downloaded From:www.kpscvaani.com




# ಬೆಂಗಳೂರು ತಂತ್ರಜ್ಞಾನ ಸಮಾವೇಶ:
# ರಜತ ಮಹೋತ್ಸವದ ಬೆಳ್ಳಿಕಿರಣ




ಡಾ. ಸಿ. ಎನ್. ಅಶ್ವತ್ಥನಾರಾಯಣ
ಐಟಿ–ಬಿಟಿ ಮತ್ತು
ಉನ್ನತ ಶಿಕ್ಷಣ ಸಚಿವರು


ಬೆಂಗಳೂರು ತಂತ್ರಜ್ಞಾನ ಸಮಾವೇಶದ 25ನೇ ವರ್ಷದ ಸಮಾವೇಶವು (ರಜತ ಮಹೋತ್ಸವ ವರ್ಷ) ಇದೇ ನವೆಂಬರ್ 16, 17 ಮತ್ತು 18 ರಂದು ನಗರದ ಅರಮನೆ ಆವರಣದಲ್ಲಿ ಅರ್ಥಪೂರ್ಣವಾಗಿ ನಡೆದಿದ್ದು ನಿಮಗೆಲ್ಲ ಗೊತ್ತಿದೆ. 1998ರಲ್ಲಿ 'ಬೆಂಗಳೂರು ಐಟಿ.ಕಾಂ' ಎನ್ನುವ ಹೆಸರಿನೊಂದಿಗೆ ಆರಂಭವಾದ ಈ ಸಮಾವೇಶವು ಕಳೆದ ಕಾಲು ಶತಮಾನದಲ್ಲಿ ಜಾಗತಿಕ ಸಮುದಾಯದ ಗಮನ ಸೆಳೆಯುವಂತಹ ಒಂದು ವಿದ್ಯಮಾನವಾಗಿ ಬೆಳೆದಿರುವುದು ಎಲ್ಲರೂ ಹುಬ್ಬೇರಿಸುವಂತಹ ಒಂದು ಸಾಧನೆಯಾಗಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಇಷ್ಟು ವರ್ಷಗಳಲ್ಲಿ ರಾಜ್ಯವನ್ನು ಆಳಿದ ಸರಕಾರಗಳು ಕಾಲಕಾಲಕ್ಕೆ ಅಗತ್ಯವಾದ ಸಮರ್ಪಕ ಮತ್ತು ದಕ್ಷ ನೀತಿಗಳನ್ನು ಜಾರಿಗೆ ತಂದು, ತಂತ್ರಜ್ಞಾನವನ್ನು ಆಧರಿಸಿದ ಆಧುನಿಕ ಉದ್ದಿಮೆಗಳನ್ನು ತೆರೆದ ತೋಳುಗಳಿಂದ ಸ್ವಾಗತಿಸಿದ್ದು ಇದಕ್ಕೆ ಕಾರಣವಾಗಿದೆ.

ಆದರೆ ಕಳೆದ ಎರಡು ವರ್ಷಗಳು ದೇಶ/ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿಕವು ಕಾಡುತ್ತಿದ್ದ ಹಿನ್ನೆಲೆಯಲ್ಲಿ ಬೆಂಗಳೂರು ತಂತ್ರಜ್ಞಾನ ಸಮಾವೇಶಕ್ಕೆ ತುಸು ಹಿನ್ನಡೆಯಾಗಿದ್ದು ವಾಸ್ತವ. ಈ ಸಂಕಷ್ಟದ ಮಧ್ಯೆಯೂ 2020, 2021ರಲ್ಲಿ ಇದನ್ನು ಆನ್‌ಲೈನ್ ಮಾದರಿಯಲ್ಲಿ ಅಚ್ಚುಕಟ್ಟಾಗಿಯೇ ನಡೆಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.




Downloaded From:www.kpscvaani.com

ಈಗ ಕೋವಿಡ್ ಪಿಡುಗು ಕಣ್ಮರೆಯಾಗಿ, ಸಹಜ ಪರಿಸ್ಥಿತಿ ಇರುವ ಹಿನ್ನೆಲೆಯಲ್ಲಿ, ಈ ಸಲ ಆಫ್‌ಲೈನ್ ಮಾದರಿಯಲ್ಲಿ ಬೆಂಗಳೂರು ತಂತ್ರಜ್ಞಾನ ಸಮಾವೇಶವನ್ನು ಏರ್ಪಡಿಸಲು ನಮ್ಮ ಸರಕಾರವು ತೀರ್ಮಾನಿಸಿತು. ಇದಕ್ಕೆ ಪೂರಕವಾಗಿ, ಇಲ್ಲಿ ನಡೆಯುವ ಚರ್ಚೆ, ವಿಚಾರ ವಿನಿಮಯ, ಸಂವಾದ ಇತ್ಯಾದಿಗಳನ್ನು ಆಸಕ್ತರು ಗಮನಿಸಬೇಕು ಎನ್ನುವ ಕಾರಣದಿಂದ ಆನ್‌ಲೈನ್ ಲೈವ್ ಸ್ಟ್ರೀಮಿಂಗ್ಗೂ ಒಳ್ಳೆಯ ವ್ಯವಸ್ಥೆ ಮಾಡಲಾಗಿತ್ತು. ಇದರಿಂದಾಗಿ ನಾವು ಕೋಟ್ಯಂತರ ಜನರನ್ನು ಮತ್ತು ಜಗತ್ತಿನ ಮೂಲೆಮೂಲೆಗಳನ್ನೂ ತಲುಪಲು ಸಾಧ್ಯವಾಯಿತು. ಇಂಟರ್ನೆಟ್ ಆಧಾರಿತ ಹೊಸ ಜಗತ್ತಿನಲ್ಲಿ ತಂತ್ರಜ್ಞಾನದ ಶಕ್ತಿ ಎಷ್ಟೊಂದು ಅಗಾಧ ಎನ್ನುವುದನ್ನು ಇದು ತೋರಿಸುತ್ತದೆ.

ನಮ್ಮ ಸರಕಾರವು ರಾಜ್ಯ ಮತ್ತು ಕೇಂದ್ರಗಳ ಮಟ್ಟದಲ್ಲಿ ತಂತ್ರಜ್ಞಾನವನ್ನು ಆಧರಿಸಿ, ಅಭಿವೃದ್ಧಿಕೇಂದ್ರಿತ ಮತ್ತು ಜನಪರ ಆಡಳಿತದ ಸಂಸ್ಕೃತಿಯನ್ನು ಆರಂಭಿಸಿರುವುದಕ್ಕೂ ಇದೊಂದು ಸಂಕೇತದಂತಿತ್ತು ಎಂದು ನಾನು ಹೇಳಲು ಬಯಸುತ್ತೇನೆ.

### 30 ದೇಶಗಳು, 72 ಗೋಷ್ಠಿಗಳು

ಬೆಂಗಳೂರು ತಂತ್ರಜ್ಞಾನ ಸಮಾವೇಶದಲ್ಲಿ ಈ ಬಾರಿ ಆಸ್ಟ್ರೇಲಿಯಾ, ಯುನೈಟೆಡ್ ಕಿಂಗ್‌ಡಮ್, ಫಿನ್ಲೆಂಡ್, ಸಂಯುಕ್ತ ಅರಬ್ ಸಂಸ್ಥಾನ, ದಕ್ಷಿಣ ಕೊರಿಯಾ, ಪೋಲೆಂಡ್, ಡೆನ್ಮಾರ್ಕ್ ಸೇರಿದಂತೆ ಒಟ್ಟು 30 ರಾಷ್ಟ್ರಗಳು ಭಾಗವಹಿಸಿದ್ದವು. ಈ ಮೂರು ದಿನಗಳಲ್ಲಿ ನನ್ನ ನೇತೃತ್ವದ ಐಟಿ, ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಐಟಿ ಮತ್ತು ಡೀಪ್‌ಟೆಕ್ ಟಾಕ್, ಬಯೋಟೆಕ್ ಟಾಕ್, ಸ್ಟಾರ್ಟಪ್ ಟಾಕ್ ಮತ್ತು ಜಿಐಐ ಟಾಕ್‌ಗಳಲ್ಲಿ ಒಟ್ಟು 72 ವಿಚಾರಗೋಷ್ಠಿಗಳನ್ನು ಏರ್ಪಡಿಸಿತ್ತು.



ಇದರ ಜೊತೆಗೆ ಮೂರು ದಿನವೂ ಬೆಳಗಿನ ಆರಂಭದ ಗೋಷ್ಠಿಯಲ್ಲಿ ದೊಡ್ಡದೊಡ್ಡ ಸಾಧಕರು ಮತ್ತು ಉದ್ಯಮಿಗಳು ಹಾಗೂ ತಂತ್ರಜ್ಞಾನ ಪರಿಣತರಿಂದ ತಲಾ ಎರಡು 'ಪ್ಲೆನರಿ ಟಾಕ್'ಗಳನ್ನು ಆಯೋಜಿಸಲಾಗಿತ್ತು.

ಬಿಟಿಎಸ್-25ರಲ್ಲಿ ಒಟ್ಟು 405 ಜನರು ಮಾತನಾಡಿದ್ದು, 26 ಸಾವಿರಕ್ಕೂ ಹೆಚ್ಚು ನೋಂದಾಯಿತ ಪ್ರತಿನಿಧಿಗಳು ಭಾಗವಹಿಸಿದ್ದರು. ಇದಲ್ಲದೆ, ಮೂರು ದಿನಗಳ ಅವಧಿಯಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ಸಮಾವೇಶದಲ್ಲಿ ಖುದ್ದು ಭಾಗವಹಿಸಿದ್ದರು. ಇದಕ್ಕೆ ಪೂರಕವಾಗಿ ರಾಜ್ಯದಲ್ಲಿರುವ ವಿವಿಧ ನವೋದ್ಯಮಗಳು ಅಭಿವೃದ್ಧಿಪಡಿಸಿರುವ 28 ಉತ್ಪನ್ನಗಳನ್ನು ಬಿಡುಗಡೆ ಮಾಡಲಾಯಿತು. ಇದರಲ್ಲಿ ಎಡುಟೆಕ್‌ನಿಂದ ಹಿಡಿದು ಅಗ್ರಿಟೆಕ್‌ವರೆಗಿನ ನವನವೀನ ಉತ್ಪನ್ನಗಳಿದ್ದವು ಎನ್ನುವುದೊಂದು ವಿಶೇಷ.

ಇದಲ್ಲದೆ, ಈ ಅವಧಿಯಲ್ಲಿ ಬೇರೆಬೇರೆ ಕಂಪನಿಗಳ ಜತೆ ಒಂಬತ್ತು ಒಡಂಬಡಿಕೆಗಳನ್ನೂ ಮಾಡಿಕೊಳ್ಳಲಾಯಿತು. ಇವು ಮುಂಬರುವ ದಿನಗಳಲ್ಲಿ ನಾನಾ ಕಂಪನಿಗಳು ರಾಜ್ಯದಲ್ಲಿ ಹೂಡಿಕೆ ಮಾಡಲು ಅನುವು ಮಾಡಿಕೊಡಲಿವೆ. ಇದಕ್ಕೆ ಪೂರಕವಾಗಿ, ಯೂಟ್ಯೂಬ್, ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂ ಮುಂತಾದ ಸೋಶಿಯಲ್ ಮೀಡಿಯಾಗಳ ಮೂಲಕ ಹೆಚ್ಚುಹೆಚ್ಚು ಜನರನ್ನು ಬಿಟಿಎಸ್ ತಲುಪುವಂತೆ ವ್ಯವಸ್ಥೆ ಮಾಡಲಾಗಿತ್ತು. ಹೀಗಾಗಿ, ಬಿಟಿಎಸ್-25 ಸಮಾವೇಶವು ಏನಿಲ್ಲವೆಂದರೂ ಪ್ರಪಂಚದ ನಾನಾ ಭಾಗಗಳ ಐದು ಕೋಟಿ ಜನರನ್ನು ತಲುಪಿತು.

ಭಾರತವು ಈಗ ದೇಶದ ನವೋದ್ಯಮ ರಾಜಧಾನಿ (ಸ್ಟಾರ್ಟಪ್ ಕ್ಯಾಪಿಟಲ್) ಆಗಿರುವುದು ನಮಗೆಲ್ಲ ಹೆಮ್ಮೆಯ ಸಂಗತಿಯಾಗಿದೆ. ಈ ವಲಯವು ನಮ್ಮಲ್ಲಿ ಎಷ್ಟೊಂದು ಶರವೇಗದಿಂದ ಬೆಳೆಯುತ್ತಿದೆ ಎಂದರೆ, ಮೊದಲು ನಾವು 2025ರೊಳಗೆ 20 ಸಾವಿರ ಸ್ಟಾರ್ಟಪ್‌ಗಳನ್ನು ನಮ್ಮ ರಾಜಧಾನಿಯಲ್ಲಿ ಕಾಣಬೇಕೆಂಬ ಗುರಿ ಇಟ್ಟುಕೊಂಡಿದ್ದೆವು. ಆಶ್ಚರ್ಯವೆಂದರೆ, ಈಗಾಗಲೇ ನಮ್ಮಲ್ಲಿ ಇವುಗಳ ಸಂಖ್ಯೆಯು 22 ಸಾವಿರವನ್ನು ದಾಟಿದೆ. ಇದಕ್ಕೆ ತಕ್ಕಂತೆ, ಬೆಟಿಎಸ್-25ರಲ್ಲಿ 400ಕ್ಕೂ ಹೆಚ್ಚು ಸ್ಟಾರ್ಟಪ್ ಮಳಿಗೆಗಳಿಗೆ ಪ್ರದರ್ಶನ ಮೇಳದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಈ ಮೇಳಗಳ ಪೈಕಿ ಸ್ವತಃ ನಾನು 150ಕ್ಕೂ ಹೆಚ್ಚು ಮಳಿಗೆಗಳಿಗೆ ಭೇಟಿ ನೀಡಿದ್ದು ನನಗೂ ಒಂದು ವಿಶಿಷ್ಟ ಅನುಭವವನ್ನು ತಂದು ಕೊಟ್ಟಿತು.

### ಪ್ರಧಾನಿ ಮೋದಿಯವರಿಂದ ಮೆಚ್ಚುಗೆ

ಬಿಟಿಎಸ್-25ನ್ನು ನಮ್ಮ ಜನಪ್ರಿಯ ಪ್ರಧಾನಮಂತ್ರಿಗಳಾದ ನರೇಂದ್ರ






Downloaded From:www.kpscvaani.com






ಮೋದಿಯವರು ವರ್ಚುಯಲ್ ಆಗಿ ಉದ್ಘಾಟಿಸಿ, ಬೆಂಗಳೂರು ಮತ್ತು ಕರ್ನಾಟಕವು ಮೈಗೂಡಿಸಿಕೊಂಡಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಕೃತಿಗಳ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಅಲ್ಲದೆ, ಎಲ್ಲರನ್ನೂ ಒಳಗೊಳ್ಳುವಂತಹ ನಮ್ಮ ನಾಡಿನ 'ಇನ್‌ಕ್ಲೂಸೀವ್ ಕಲ್ಚರ್' ಅನ್ನೂ ಅವರು ಶ್ಲಾಘಿಸಿದರು. ಮುಖ್ಯವಾಗಿ, ಸಮಾನತೆ, ಪಾರದರ್ಶಕತೆ, ಬಡತನ ನಿರ್ಮೂಲನೆ, ಭ್ರಷ್ಟಾಚಾರದ ವಿರುದ್ಧದ ಹೋರಾಟ, ಸಬಲೀಕರಣ ಇತ್ಯಾದಿಗಳಿಗೆ ತಂತ್ರಜ್ಞಾನವು ಪ್ರಬಲ ಅಸ್ತ್ರವಾಗಿದೆ ಎಂದು ಹೇಳಿದ್ದು ಸರಿಯಾಗಿಯೇ ಇತ್ತು. ಜತೆಗೆ, ಭಾರತವು ಮುಂಬರುವ ವರ್ಷಗಳಲ್ಲಿ ಮೂಲಸೌಲಭ್ಯ ಕ್ಷೇತ್ರದಲ್ಲಿ 100 ಟ್ರಿಲಿಯನ್ ಡಾಲರ್ ಹೂಡಿಕೆ ಮಾಡಲಿದ್ದು, ಭಾರತವು ತಂತ್ರಜ್ಞಾನದ ಮಹಾಹೆದ್ದಾರಿಯಾಗಿ ಹೊರಹೊಮ್ಮಿದೆ ಎನ್ನುವ ಅಂಶವನ್ನು ಸಾರಿದರು. ಹಾಗೆಯೇ, ಕೊರೋನಾ ನಂತರದ ಕಾಲದಲ್ಲಿ ಭಾರತವು ಡಿಜಿಟಲ್ ಆರ್ಥಿಕತೆಯನ್ನು ಎಷ್ಟೊಂದು ಪರಿಣಾಮಕಾರಿಯಾಗಿ ಬೆಳೆಸುತ್ತಿದೆ ಎನ್ನುವುದನ್ನು ಅವರು ಸರಳವಾದ ಭಾಷೆಯಲ್ಲಿ ಜನರಿಗೆ ತಲುಪಿಸಿದರು.

ಕೊನೆಯ ದಿನ ನಡೆದ ಸಮಾರೋಪದಲ್ಲಿ ಮುಖ್ಯ ಅತಿಥಿಗಳಾಗಿದ್ದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರಾದ ಪೀಯೂಷ್ ಗೋಯಲ್ ಅವರು, ಭಾರತವು 2047ರ ಹೊತ್ತಿಗೆ ಹೇಗೆ 30 ಟ್ರಿಲಿಯನ್ ಡಾಲರ್ ಮೌಲ್ಯದ ಆರ್ಥಿಕ ಶಕ್ತಿಯಾಗಿ ಬೆಳೆಯಲಿದೆ ಎನ್ನುವುದನ್ನು ವಿವರಿಸಿದರು. ಈ ಸಂದರ್ಭದಲ್ಲಿ ಅವರು, ಬೆಂಗಳೂರಿನಲ್ಲಿ ಇತ್ತೀಚೆಗೆ ಪ್ರಧಾನಿಗಳಿಂದ ಲೋಕಾರ್ಪಣೆಗೊಂಡ ನಾಡಪ್ರಭು ಮತ್ತು ಬೆಂಗಳೂರಿನ ಸಂಸ್ಥಾಪಕ ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪುತ್ಥಳಿ 'ಪ್ರಗತಿ ಪ್ರತಿಮೆ'ಯನ್ನು ಉಲ್ಲೇಖಿಸಿದ್ದು ಸಾಮಯಿಕವಾಗಿತ್ತು.

ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ನಮ್ಮವರೇ ಆದ ಕೇಂದ್ರ ಐಟಿ ಖಾತೆಯ ಸಹಾಯಕ ಸಚಿವರಾದ ರಾಜೀವ್ ಚಂದ್ರಶೇಖರ್ ಅವರು, ಬೆಂಗಳೂರು ನಗರದಲ್ಲಿ ದೇಶದ ಎರಡನೇ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ನಿರ್ಧಾರವನ್ನು ಘೋಷಿಸಿದರು. ಇದರಿಂದಾಗಿ, ಮುಂಬರುವ ದಿನಗಳಲ್ಲಿ ಬೆಂಗಳೂರು ನಗರವು ಭಾರತದ ಸೆಮಿಕಂಡಕ್ಟರ್ ರಾಜಧಾನಿಯಾಗಿ ಹೊರಹೊಮ್ಮಲಿದೆ.

ಬೆಂಗಳೂರು ತಂತ್ರಜ್ಞಾನ ಸಮಾವೇಶದಲ್ಲಿ ಮೊದಲಿನಿಂದಲೂ ಒಂದು ಆಕರ್ಷಕ ಕಾರ್ಯಕ್ರಮ ನಡೆದುಕೊಂಡು ಬರುತ್ತಿದೆ. ಇದ್ಯಾವುದೆಂದರೆ, ಟಿಸಿಎಸ್ ಕಂಪನಿಯು ಪ್ರಾಯೋಜಿಸಿಕೊಂಡು ಬರುತ್ತಿರುವ ಗ್ರಾಮೀಣ ಐಟಿ ರಸಪ್ರಶ್ನೆ ಸ್ಪರ್ಧೆ. ಸುಮಾರು ಒಂದೂವರೆ ಗಂಟೆ ಕಾಲ ನಡೆದ ಇದರ ಅಂತಿಮ ಹಣಾಹಣಿಯನ್ನು ನಾನಂತೂ ಖುದ್ದಾಗಿ ವೀಕ್ಷಿಸಿದೆ. ಇದು ನಮ್ಮ ದೇಶದ ಸರಕಾರಿ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ಪ್ರತಿಭೆಯ ವಿಲಾಸವನ್ನು ನಮಗೆಲ್ಲ ತೋರಿಸಿತು.

**ಉದ್ಯಮಗಳಿಗೆ ಸನ್ಮಾನ**

ಇದು 25ನೇ ವರ್ಷದ ಬೆಂಗಳೂರು ತಂತ್ರಜ್ಞಾನ ಸಮಾವೇಶವಾಗಿದ್ದ ಹಿನ್ನೆಲೆಯಲ್ಲಿ, ನಮ್ಮ ನಗರದಲ್ಲಿ ಕಳೆದ ಕಾಲು ಶತಮಾನದಿಂದಲೂ ಸಕ್ರಿಯವಾಗಿರುವ ಐಟಿ ವಲಯದ 34 ಕಂಪನಿಗಳಿಗೆ ಸನ್ಮಾನ ಮಾಡಲಾಯಿತು. ಇದರ ಜತೆಯಲ್ಲೇ ಇಲ್ಲಿರುವ 9 ಯೂನಿಕಾರ್ನ್ ಕಂಪನಿಗಳಿಗೆ ಮತ್ತು ರಫ್ತು ವಹಿವಾಟಿನಲ್ಲಿ ಗಮನಾರ್ಹ ಸಾಧನೆ ತೋರಿರುವ 20ಕ್ಕೂ ಹೆಚ್ಚು ಕಂಪನಿಗಳಿಗೆ ಭಾರತೀಯ ಸಾಫ್ಟ್‌ವೇರ್ ಪಾರ್ಕುಗಳ ಒಕ್ಕೂಟದ ವತಿಯಿಂದ ನೀಡಲಾಗುವ ಪುರಸ್ಕಾರಗಳನ್ನು ಪ್ರದಾನ ಮಾಡಲಾಯಿತು.

ಬೆಂಗಳೂರು ಮತ್ತು ಕರ್ನಾಟಕದಲ್ಲಿ ಈಗ ಕೈಗಾರಿಕಾ ಕ್ರಾಂತಿ 4.0 ಸದ್ದಿಲ್ಲದೆ ನಡೆಯುತ್ತಿದೆ. ಸರಕಾರವು ಕೈಗೊಂಡಿರುವ **'ಬಿಯಾಂಡ್ ಬೆಂಗಳೂರು'** ಇತ್ಯಾದಿ ಉಪಕ್ರಮಗಳಿಂದ ಮೈಸೂರು, ಹುಬ್ಬಳ್ಳಿ–ಧಾರವಾಡ ಮತ್ತು ಮಂಗಳೂರು ಕ್ಲಸ್ಟರ್‌ಗಳಲ್ಲಿ ಆಧುನಿಕ ಉದ್ಯಮಗಳು ನೆಲೆಯೂರುತ್ತಿದ್ದು, ಅಪಾರ ಸಂಖ್ಯೆಯಲ್ಲಿ ಉದ್ಯೋಗವನ್ನು ಸೃಷ್ಟಿಸಲು ಅಣಿಯಾಗಿವೆ. ಇದು ಕರ್ನಾಟಕದಲ್ಲಿ 1 ಟ್ರಿಲಿಯನ್ ಡಾಲರ್ ಮೊತ್ತದ ಡಿಜಿಟಲ್ ಆರ್ಥಿಕತೆಯ ಗುರಿಯನ್ನು ಸಾಧಿಸಲು ನೆರವಾಗಲಿದ್ದು, ಐಟಿ ವಲಯದ ರಫ್ತು ವಹಿವಾಟನ್ನು 2025ರ ಹೊತ್ತಿಗೆ ಈಗಿರುವ 100 ಬಿಲಿಯನ್ ಡಾಲರ್‌ಗಳಿಂದ 150 ಬಿಲಿಯನ್ ಡಾಲರ್‌ಗಳ ಮಟ್ಟಕ್ಕೆ ಕೊಂಡೊಯ್ಯಲಿದೆ.

ಇದರ ಜತೆಜತೆಯಲ್ಲೇ ರಾಜ್ಯದಲ್ಲಿ ಸೆಮಿಕಂಡಕ್ಟರ್, ಚಿಪ್ ತಯಾರಿಕೆ, ವಿನ್ಯಾಸ, ಎಲೆಕ್ಟ್ರಾನಿಕ್ಸ್, ಸೈಬರ್ ಸೆಕ್ಯುರಿಟಿ, ಎಜುಟೆಕ್, ಮೆಡ್ಟೆಕ್, ಅಗ್ರಿಟೆಕ್, ಫಿನ್‌ಟೆಕ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್, ಬ್ಲಾಕ್ ಚೈನ್, ಐಒಟಿ ತರಹದ ಆಧುನಿಕ ಧಾರೆಗಳ ತೊಟ್ಟಿಲಾಗಲಿದೆ. ಸದ್ಯಕ್ಕೆ ರಾಜ್ಯದಲ್ಲಿ 40 ಯೂನಿಕಾರ್ನ್‌ಗಳಿದ್ದು, ಮುಂದಿನ ದಿನಗಳಲ್ಲಿ ತಲಾ 10 ಬಿಲಿಯನ್ ಡಾಲರ್ ಕಿಮ್ಮತ್ತಿನ ಡೆಕಾಕಾರ್ನ್ ಸ್ಥಾನಮಾನದ ಕಂಪನಿಗಳು ಮುನ್ನೆಲೆಗೆ ಬರಲಿವೆ. ಒಟ್ಟಿನಲ್ಲಿ ಬೆಂಗಳೂರು ಜಾಗತಿಕ ಸ್ತರದಲ್ಲಿ ಬೆಳಗುತ್ತಿದ್ದು, ಅರ್ಥಪೂರ್ಣವಾಗಿ ನಡೆದ ಬಿಟಿಎಸ್–25 ಭರವಸೆಯ ಮತ್ತಷ್ಟು ಬೆಳ್ಳಿಕಿರಣಗಳನ್ನು ಹೊಮ್ಮಿಸಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ■


Downloaded From:www.kpscvaani.com



# ಬಿದಿರಿನರ ತೂಗುದ್ಯಾನದಲ್ಲಿ ಅತ್ಯಾಕರ್ಷಕವಾಗಿ ಮೇಳೈಸಿರುವ

# ಎರಡನೇ ಟರ್ಮಿನಲ್



**ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2 ಬಿದಿರಿನ ತೂಗುದ್ಯಾನ ಮತ್ತು ಆಧುನಿಕ ತಂತ್ರಜ್ಞಾನದೊಟ್ಟಿಗೆ ತುಂಬಾ ಆಕರ್ಷಕವಾಗಿದ್ದು, ಅಂತಾರಾಷ್ಟ್ರೀಯ ಮಟ್ಟದ ವಿಮಾನ ನಿಲ್ದಾಣಗಳಿಗೆ ಸೆಡ್ಡು ಹೊಡೆಯುವಂತಿದೆ.**


ಎಂ. ಎನ್. ಪ್ರಶಾಂತ್ ಕುಮಾರ್

ಉದ್ಯಾನ ನಗರಿ ಬೆಂಗಳೂರಿನ ದೃಶ್ಯ ವೈಭವಕ್ಕೆ ಇತ್ತೀಚೆಗಷ್ಟೇ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಕ್ಕೆ ಸಮರ್ಪಿಸಿದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ ಮತ್ತೊಂದು ಗರಿ ಮೂಡಿಸಿದೆ.

ಹೌದು ಬೆಂಗಳೂರು ಎಂದರೆ **"ಉದ್ಯಾನ ನಗರಿ"** ಎಂದೇ ಮೊದಲಿನಿಂದಲೂ ಪ್ರಸಿದ್ಧಿ. ಕಳೆದೆರಡು ದಶಕಗಳಲ್ಲಿ ಈ ನಗರಿಯ ಮಕುಟ ಮಣಿಯನ್ನು ಅಲಂಕರಿಸಿದ್ದು ತಂತ್ರಜ್ಞಾನದ ಗರಿ. ಅದೇ ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ ಕೀರ್ತಿ ಪತಾಕೆ.



Downloaded From:www.kpscvaani.com



### ಹೊಸ ವರ್ಷಕ್ಕೆ ಸಾರ್ವಜನಿಕರ ಸೇವೆಗೆ

ಡಿಸೆಂಬರ್ ಮಧ್ಯಭಾಗದಲ್ಲೇ ಕೆಐಎಎಲ್ ಟರ್ಮಿನಲ್ 2 ಸಾರ್ವಜನಿಕರ ಸೇವೆಗೆ ತೆರೆದುಕೊಳ್ಳುವ ಗುರಿ ಹೊಂದಲಾಗಿದ್ದು ಹೊಸ ವರ್ಷ 2024ರ ಜನವರಿಯಲ್ಲಂತೂ ಈ ಟರ್ಮಿನಲ್ ಕಾರ್ಯಾರಂಭ ಮಾಡುವುದು ನಿಶ್ಚಿತ ಎಂದು ಕೆಐಎಎಲ್‌ನ ಸಿಇಒ ಹರಿ ಮಾರಾರ್ ಅವರು ತಿಳಿಸಿದ್ದಾರೆ.



> ಬಾನಾಡಿಯಾದ ಗರುಡನೇ ನಿಮ್ಮ ಹಾರುವ ಹಕ್ಕಿಯೊಂದಿಗಿನ ಪ್ರಯಾಣಕ್ಕೆ ಸ್ವಾಗತಿಸುತ್ತಾನೆ. ವಿಘ್ನವಿನಾಯಕ ಗಣೇಶ, ಆಂಜನೇಯ, ರಾಮ, ವಿಷ್ಣು, ರಾಮಾನುಜರು, ಮದನಿಕೆಯರು ಸೇರಿದಂತೆ ಸುಮಾರು 16 ಪುರಾತನ ಕಂಚಿನ ಪ್ರತಿಮೆಗಳನ್ನು ಪ್ರಾಚ್ಯವಸ್ತು ಸಂಗ್ರಹಾಲಯದ ಸಹಯೋಗದೊಂದಿಗೆ ಸಂಗ್ರಹಿಸಿ ಪ್ರದರ್ಶಿಸಲಾಗಿದ್ದು, ಅವುಗಳ ಜೊತೆಗೆ ಅಧ್ಯಯನ ಯೋಗ್ಯ ಕಿರು ಪರಿಚಯದ ಫಲಕಗಳನ್ನು ಹಾಕಲಾಗಿದೆ.

ಇತ್ತೀಚಿನ ನಾಲ್ಕೈದು ವರ್ಷಗಳಲ್ಲಿ ಸ್ಟಾರ್ಟಪ್ ಕ್ಯಾಪಿಟಲ್ ಆಫ್ ಇಂಡಿಯಾ ಕೂಡ ಬೆಂಗಳೂರಿನ ಮುಡಿಗೇರಿದೆ. ಹೀಗೆ ಇವೆಲ್ಲ ಕಿರೀಟಗಳನ್ನು ಒಂದೆ ವೇದಿಕೆಯಲ್ಲಿ ದೃಶ್ಯ ಕಾವ್ಯ ವೈಭವವನ್ನು ಸಾಕ್ಷೀಕರಿಸುವಂತಿದೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್ . ತಂತ್ರಜ್ಞಾನದ ಜೊತೆಗೆ ಸೌಂದರ್ಯ ಪ್ರಜ್ಞೆಗೆ ಉದ್ಯಾನನಗರಿಯ ಪರಿಕಲ್ಪನೆಯನ್ನು ಮೂಲವಾಗಿರಿಸಿಕೊಂಡಿರುವ ಈ ಟರ್ಮಿನಲ್ ನಿಜಕ್ಕೂ ನೋಡುಗರನ್ನು ಮಾಯಾ ಲೋಕದಲ್ಲಿ ವಿಹರಿಸುವಂತೆ ಮಾಡುತ್ತದೆ.

### ಬಿದಿರಿನರಮನೆ

ಬಿದಿರು ಸಸ್ಯರಾಶಿಯಲ್ಲಿ ತನ್ನದೇ ಆದ ಮಹತ್ವವನ್ನು ಪಡೆದುಕೊಂಡಿದೆ. ಈ ಬಿದಿರಿನಲ್ಲೇ ಅನೇಕ ಕಲಾಕೃತಿಗಳು ಮೂಡಿ ಬಂದಿದೆ. ಈ ಬಿದಿರನ್ನೇ ಬಳಸಿ ಸುಮಾರು ಲಕ್ಷ ಚದರದಷ್ಟು ಮೇಲ್ಚಾವಣಿಯನ್ನು ಅಲಂಕಾರಿಕವಾಗಿ ನಿರ್ಮಾಣ ಮಾಡಿದರೆ ಹೇಗಿರಬೇಡ.

ಕೆಐಎಎಲ್‌ನ ಟರ್ಮಿನಲ್ 2 ನ ಮೇಲ್ಚಾವಣಿಯಲ್ಲೆಲ್ಲಾ ಕಣ್ಸೆಳೆಯುವುದು ಒಪ್ಪ ಓರಣವಾಗಿ ಜೋಡಿಸಿದ ಬಿದಿರುಗಂಬಗಳು, ಈ ಬಿದಿರುಗಂಬಗಳು ಬಿದಿರಿನರಮನೆಯ ನೋಟವನ್ನು ನೀಡಿದರೆ ಈ ಬಿದಿರುಗಂಬಗಳ ಮೇಲಿನಿಂದ ತೂಗುವ ತೊಟ್ಟಿಲುಗಳಂತೆ ಹತ್ತು ಸಾವಿರ ಚದರಡಿಗೂ ಹೆಚ್ಚು ವಿಸ್ತೀರ್ಣದಲ್ಲಿ ಹಸಿರು ತೊಟ್ಟಿಲುಗಳು ತೂಗುತ್ತಿವೆ. ಸಾವಿರಕ್ಕೂ ಹೆಚ್ಚು ತಳಿಯ ಲಿಲ್ಲೀ, ಕಮಲ, ಅಲ್ಲಲ್ಲಿ ನಿಂತಿರುವ ತಾಳೆ ಗಿಡಗಳ ಜೊತೆಗೆ ಅಳಿವಿನಂಚಿನಲ್ಲಿರುವ 180 ವಿಶೇಷ ಪ್ರಭೇದದ ಸಸ್ಯಗಳು, 10 ಪರಿಸರ ಆವಾಸ ಸ್ಥಾನಗಳಿಗೆ ಟರ್ಮಿನಲ್ 2 ಆಶ್ರಯ ಒದಗಿಸಿದೆ.

ಹೀಗೆ ಉದ್ಯಾನ ನಗರಿಯ ಪ್ರತೀಕವಾಗಿ ಬಿದಿರಿನರಮನೆಯ ತೂಗುದ್ಯಾನ ಸಾವಿರ ಸಾವಿರ ಗಾವುದ ದೂರ ಹಾರುವ ಹಕ್ಕಿಗಳ ಒಡನಾಡಿಯಾಗುವ ಪ್ರಯಾಣಿಕರಿಗೆ ಮಧುರಾನುಭೂತಿಯನ್ನು ಸಾವಿರ ಸಾವಿರ ಮೈಲುಗಳ ಪ್ರಯಾಣದ ಜೆಟ್‌ಲಾಗ್ ಅನ್ನುವ ದಣಿವನ್ನು ಕ್ಷಣಮಾತ್ರದಲ್ಲಿ ಇಲ್ಲವಾಗಿಸುತ್ತದೆ. ಜೊತೆಗೆ ಕಲೆ, ತಂತ್ರಜ್ಞಾನಗಳು ಮಾಯಾನಗರಿಯೊಂದರ ದರ್ಶನ ಮಾಡಿಸುತ್ತದೆ.

### ಕಲೆ, ಸಂಸ್ಕೃತಿ, ಸುಸ್ಥಿರತೆ ಮತ್ತು ತಂತ್ರಜ್ಞಾನ

ಬೆಂಗಳೂರು ಎಂಬುದೇ ಒಂದು ಸುಂದರ ಕಲಾಕೃತಿಯಂತೆ ನಿರ್ಮಾಣಗೊಂಡಿರುವ ನಗರ. ಬೆಂಗಳೂರಿಗೆ ಬಂದ ಲಕ್ಷಾಂತರ ಮಂದಿ ಇಲ್ಲೇ ನೆಲೆಯೂರುವಂತೆ ಮಾಡಿರುವ ಮೋಹಕ ನಗರಿ ಎಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿನ ಆಹ್ಲಾದಕರ ಹವಾಮಾನವಂತೂ ಎಲ್ಲರನ್ನೂ ಕೈ ಬೀಸಿ ಕರೆಯುವಂತಹುದು. ವಿಧಾನಸೌಧದಿಂದ ಹಿಡಿದು ಇಲ್ಲಿರುವ ಬೃಹತ್ ನಿರ್ಮಾಣಗಳು, ಕಬ್ಬನ್‌ಪಾರ್ಕ್, ಲಾಲ್‌ಬಾಗ್‌ನಂತಹ ಉದ್ಯಾನಗಳು, ಅಲ್ಲಲ್ಲಿ ಇರುವ ಕೆರೆಗಳು, ವಾಸ್ತು ವೈಭವದ ಜೊತೆಗೆ ನಗರದ ದೃಶ್ಯ ವೈಭವವನ್ನು ವರ್ಣಿಸಲಸದಳವೆನ್ನುವಷ್ಟು ಸುಂದರವಾಗಿಸಿವೆ. ಕಲೆ, ಸಂಸ್ಕೃತಿ ಕರುನಾಡನ್ನು ಶ್ರೀಮಂತಗೊಳಿಸಿದ್ದರೆ ಕಾಸ್ಮೋಪಾಲಿಟನ್ ನಗರಿಯಾಗಿ ಎಲ್ಲರನ್ನೂ ಕೈ ಬೀಸಿ ಕರೆಯುವುದು ಮಾತ್ರವಲ್ಲ ಆಶ್ರಯವನ್ನೂ ಕಲ್ಪಿಸಿರುವ



Downloaded From:www.kpscvaani.com

ಬೆಂಗಳೂರನ್ನು ಕಲೆ, ಸಂಸ್ಕೃತಿ ಮೇಳವಿಸಿಕೊಂಡಿದೆ. ಈ ಕಲೆ ಸಂಸ್ಕೃತಿಯನ್ನು ಐಟಿ ಕ್ಯಾಪಿಟಲ್ ತಂತ್ರಜ್ಞಾನ ಮತ್ತು ಸುಸ್ಥಿರತೆಯೊಂದಿಗೆ ಬೆಸೆದು ನಿರ್ಮಾಣಗೊಂಡಿರುವುದೇ ಕೆಐಎಎಲ್‌ನ ಟರ್ಮಿನಲ್ 2. ಇದೊಂದು ಅದ್ಭುತ ಪರಿಕಲ್ಪನೆಯ ಸಂಗಮ, ಸಮಾಗಮ.

ಕಲೆ, ಸಂಸ್ಕೃತಿಗಳನ್ನು ಟರ್ಮಿನಲ್ 2 ಪ್ರವೇಶಿಸುತ್ತಿರುವಂತೆ ಕಾಣಬಹುದು. ಹೊರಾವರಣದಲ್ಲಿನ ಚಿತ್ರಣ, ಮಂಗಳೂರಿನ ಕೆಂಪು ಕಲ್ಲು (ಮುರಕಲ್ಲು), ಇಟ್ಟಿಗೆಗಳಿಂದ ಜೋಡಣೆಗೊಂಡಿರುವ ಗೋಡೆಗಳು ಕಲಾತ್ಮಕವಾಗಿದ್ದರೆ ಹೊರಾವರಣದಲ್ಲಿ ಕಲಾಕಾರರ ಕುಂಚಗಳಿಂದ ಮೂಡಿರುವ ಬೆಂಗಳೂರು ನಗರಿಗೆ ತಿಲಕಪ್ರಾಯದಂತಿರುವ ವಿಧಾನಸೌಧ, ಕಬ್ಬನ್‌ಪಾರ್ಕ್ ಕಲ್ಲುಗಳು, ಎಂಜಿ ರಸ್ತೆ, ಬೆಂಗಳೂರು ಸಬ್‌ವೇ (1863) ಬೆಂಗಳೂರಿನ ಆ ದಿನಗಳನ್ನು ನೆನಪಿಸಿದರೆ ಪಿಜ್ಜಾಹಟ್, ಮಯ್ಯಾಸ್ ಈ ದಿನಗಳಿಗೆ ಸಾಕ್ಷಿಯಾಗಿದೆ.

ಟರ್ಮಿನಲ್ ಕಟ್ಟಡದೊಳಕ್ಕೆ ಪ್ರವೇಶಿಸುತ್ತಿರುವಂತೆ 18ನೆಯ ಶತಮಾನದ ಬೃಹದಾಕಾರದ ಗರುಡನ ಕಂಚಿನ ಪ್ರತಿಮೆಗಳೊಂದಿಗೆ ಸಾಲಂಕೃತವಾಗಿ ಜೋಡಿಸಲ್ಪಟ್ಟಿರುವ 16ನೆಯ ಶತಮಾನದಿಂದ 20ನೆಯ ಶತಮಾನದ ಕಂಚಿನ ಪ್ರತಿಮೆಗಳು ಕನ್ನಡ ನಾಡಿನ ಭವ್ಯ ಪರಂಪರೆಯನ್ನು ನೆನಪಿಸುತ್ತವೆ. ಟರ್ಮಿನಲ್‌ನಲ್ಲಿ ನೀವು ಹೆಜ್ಜೆ ಹಾಕುತ್ತಿರುವಂತೆ ಅಡಿಗಡಿಗೂ ನೀವು ಕಲೆ, ಸಂಸ್ಕೃತಿ ಜೊತೆಗೆ ತಂತ್ರಜ್ಞಾನದ ದರ್ಶನ ಮಾಡುತ್ತಾ ಸಾಗುತ್ತೀರಿ. ನವರಸ ಪರಿಕಲ್ಪನೆಯ ಕಲಾಕೃತಿಗಳು, ತೊಗಲು ಬೊಂಬೆಗಳ ಜೊತೆಗೆ ಇನ್ನಷ್ಟು ಕಲಾಕೃತಿಗಳು ಈಗ ನಿರ್ಮಾಣ ಹಂತದಲ್ಲಿದ್ದು ಇದು ಪೂರ್ಣಗೊಂಡರೆ ಟರ್ಮಿನಲ್ 2 ಕಲಾ ಯಾತ್ರೆ ಇನ್ನಷ್ಟು ರಸಮಯವಾಗಲಿದೆ.

**ಡಿಜಿ ಯಾತ್ರಾ!**

ತಂತ್ರಜ್ಞಾನದ ವಿಚಾರಕ್ಕೆ ಬಂದರೆ ನೀವು ವಿಶ್ವದ ವಿಮಾನ ನಿಲ್ದಾಣಗಳಲ್ಲೇ ಇಲ್ಲದ ಕೆಲವೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಮಾತ್ರ ಲಭ್ಯವಿರುವ ತಂತ್ರಜ್ಞಾನಕ್ಕೆ ಸಾಕ್ಷಿಯಾಗುತ್ತೀರ. ಇಲ್ಲಿನ ಸಸ್ಯಗಳಿಗೆ ನೀರುಣಿಸುವುದರಿಂದ ಅದಕ್ಕೆ ಬೇಕಾದ ಪೋಷಕಾಂಶಗಳ ಅಗತ್ಯತೆ ಪೂರೈಕೆ ಎಲ್ಲವೂ ತಂತ್ರಜ್ಞಾನಮಯ.



ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ (ಡೊಮೆಸ್ಟಿಕ್/ ಇಂಟರ್‌ನ್ಯಾಷನಲ್) ಪ್ರಯಾಣಿಕರು ಒಳ ಪ್ರವೇಶಿಸುತ್ತಿರುವಂತೆ ಬೃಹದಾಕಾರದ ಬಾಡಿ ಸ್ಕ್ಯಾನರ್‌ಗಳು ಪ್ರಯಾಣಿಕರ ದೇಹವನ್ನು ಪೂರ್ಣ ಪ್ರಮಾಣದಲ್ಲಿ ತಪಾಸಣೆ (ಸ್ಕ್ಯಾನ್) ಮಾಡುತ್ತವೆ. ಪ್ರಯಾಣಿಕರ ಮುಖಾರವಿಂದವೇ ಬೋರ್ಡಿಂಗ್ ಪಾಸ್ ಆಗಲಿದೆ. ಕೈಯಲ್ಲಿ ಸ್ಕ್ಯಾನರ್ ಹಿಡಿದು ಶಿರದಿಂದ ಪದತಳದವರೆಗೆ ಪ್ರದಕ್ಷಿಣೆ ಮಾಡುವ ಸುರಕ್ಷಾ ತಪಾಸಣೆ ಇಲ್ಲಿರುವುದಿಲ್ಲ. ಜಸ್ಟ್ ವಾಕ್ ಥ್ರೂ ದಿ ಮಷೀನ್ ಅಷ್ಟೇ. ಇಲ್ಲಿಂದ ನೀವು ವಿಮಾನವೇರುವವರೆಗೂ ನಿಮ್ಮನ್ನು ತಂತ್ರಜ್ಞಾನವೆಂಬ ಅಗೋಚರ ಕಣ್ಣುಗಳು ಹಿಂಬಾಲಿಸುತ್ತವೆ. ನಿಮ್ಮ ಪ್ರತಿಯೊಂದು ಚಲನವಲನವನ್ನೂ ದಾಖಲಿಸುತ್ತವೆ. ಇದನ್ನೇ **"ಡಿಜಿ ಯಾತ್ರಾ"** ಎಂದು ನಾಮಕರಣ ಮಾಡಲಾಗಿದೆ.

ನಿಮ್ಮ ಎಲ್ಲ ಸಾಮಾನು ಸರಂಜಾಮುಗಳ ತಪಾಸಣೆ ಸೆಲ್ಫ್ ಸರ್ವೀಸ್ ಕೌಂಟರ್‌ಗಳಲ್ಲಿ ಪ್ರಯಾಸವಿಲ್ಲದೇ ನಡೆದು ಹೋಗುತ್ತದೆ. ನಿಮ್ಮ ಕೈಚೀಲದಲ್ಲಿ ಕೊಂಡೊಯ್ಯುವ ಮೊಬೈಲ್, ಇನ್ನಿತರೇ ಸಾಮಾನುಗಳನ್ನು ತಪಾಸಣೆ ಮಾಡುವ ಟ್ರೇಗಳು ಎಲ್ಲವೂ ಆಟೋಮ್ಯಾಟಿಕ್. ಆಟೋಮ್ಯಾಟಿಕ್ ಟ್ರೇ ರಿಟ್ರೀವರ್ ಸಿಸ್ಟಂ ಎಂದು ಕರೆಯಲಾಗುವ ಈ ಒಟ್ಟು ವ್ಯವಸ್ಥೆಯು ಪ್ರಯಾಣಿಕರ ವಿಮಾನವೇರುವ ಮುನ್ನ ತಪಾಸಣಾ ಸಮಯವನ್ನು ಸಾಕಷ್ಟು ಕಡಿಮೆ ಮಾಡಲಿದೆ. ಬೇಡದ ವಸ್ತುಗಳ ಬ್ಯಾಗೇಜ್‌ಗಳು ಅಲ್ಲೇ ತಿರಸ್ಕೃತಗೊಳ್ಳುತ್ತವೆ ಕೂಡ.

ಟರ್ಮಿನಲ್ ಒಳಾವರಣ ಅತ್ಯಂತ ಆಹ್ಲಾದಕರವಾಗಿದೆ. ಬೆಳಕು ಮುದವಾಗಿದ್ದರೆ ಕರ್ಣಾನಂದಕರವಾದ ಸಂಗೀತದೊಂದಿಗೆ ಅಲ್ಲಿನ ತಾಪಮಾನ ಹೊರಗಿನ ತಾಪಮಾನಕ್ಕಿಂತ ಎರಡರಿಂದ ಮೂರು ಡಿಗ್ರಿ ಸೆಲ್ಸಿಯಸ್‌ಗಳಷ್ಟು ಕಡಿಮೆ ಇರುವಂತೆ ವಿನ್ಯಾಸಗೊಳಿಸಲಾಗಿದೆ. ಎಲ್ಲಿಂದ ಇಷ್ಟು ಆಹ್ಲಾದಕರ ಗಾಳಿ ಬರುತ್ತಿದೆ ಎಂದು ಕಣ್ಣು ಹಾಯಿಸಿದರೆ ಕಲಾಕೃತಿಗಳಂತೆ ಅಲ್ಲಲ್ಲಿ ನಿಂತಿರುವ ರಟಾನ್‌ನಿಂದ ನಿರ್ಮಿತವಾದ ಎಸಿ ಡಕ್ಟ್‌ಗಳು ಕಣ್ಣಿಗೆ ಕಾಣದಂತೆ ತಂಪು ಸೂಸುತ್ತಿರುತ್ತದೆ. ಇದು ದೇಶದಲ್ಲೇ ನಾವಿನ್ಯವಾದ ತಂತ್ರಜ್ಞಾನವಾಗಿದ್ದು ಸಂಪೂರ್ಣ ಡಿಜಿಟಲ್ ವ್ಯವಸ್ಥೆ ಹೊಂದುವ ದೇಶದ ಮೊಟ್ಟ ಮೊದಲ ಟರ್ಮಿನಲ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ.

ಒಟ್ಟಾರೆ ಹೇಳುವುದಾದರೆ ಕೆಐಎಎಲ್‌ನ ಟರ್ಮಿನಲ್ 2 ಕಲಾವಿದರು, ತಂತ್ರಜ್ಞಾನಿಗಳು ಒಟ್ಟು ಸೇರಿದರೆ ಅದ್ಭುತಗಳ ಸೃಷ್ಟಿ ಮಾಡಬಹುದೆಂಬುದಕ್ಕೆ ಸಾಕ್ಷಿಯಾಗಿ ನಿಂತಿದೆ. ಬೆಂಗಳೂರಿನ ಹಿರಿಮೆಗೆ ಮತ್ತೊಂದು ಗರಿ ಮೂಡಿಸಿದೆ.

**ಟರ್ಮಿನಲ್-2 ನಲ್ಲಿ ಇರಿಸಿರುವ ಸಸ್ಯ ತಳಿಗಳು**

| | |
|---|---|
| ಒಟ್ಟು ಸಸ್ಯ ತಳಿಗಳು | 3600 |
| ಮೇಲ್ಛಾವಣಿಗೆ ಬಳಕೆ ಮಾಡಿದ ಬಿದಿರಿನ ಒಟ್ಟು ಉದ್ದ (ಸಂಸ್ಕರಿತ ಬೆಂಕಿ ನೀರು ತುಕ್ಕು ನಿರೋಧಕ) | 923ಕಿಮೀ |
| ಕಮಲದ ತಳಿಗಳು | 96 |
| ಲಿಲ್ಲೀ ತಳಿಗಳು | 150 |
| ತಾಳೆ ಮರದ ತಳಿಗಳು | 150 |
| ಅತ್ಯಂತ ಅಪರೂಪದ ಅಳಿವಿನಂಚಿನ ಸಸ್ಯಗಳು | 180 |
| ಒಟ್ಟು ಹಸಿರು ಆವರಣ (ಚದರಡಿಗಳಲ್ಲಿ) | 10200 |
| 800 ವರ್ಷದ ಹಳೆಯ ಸಸ್ಯ ತಳಿಗಳು | 600 |
| ಸ್ಥಳೀಯ ಪ್ರಭೇದದ ಸಸ್ಯಗಳು | 620 |



Downloaded From:www.kpscvaani.com




# ಆರೋಗ್ಯ ದಾಖಲೆಗಳ ರಕ್ಷಣೆ ಮತ್ತು ಸಂಗ್ರಹಣೆಗೆ

# ಆಭಾ ಮೊಬೈಲ್ ಆ್ಯಪ್

ಡಿ. ಪಿ. ಮುರಳೀಧರ್

ನಾವು ಅನಾರೋಗ್ಯಕ್ಕೆ ಒಳಗಾದಾಗ ವೈದ್ಯರ ಬಳಿ ಹೋಗುತ್ತೇವೆ. ನಮ್ಮ ಆರೋಗ್ಯ ತಪಾಸಣೆ ನಡೆಸುವ ವೈದ್ಯರು ಔಷಧಿ ಬರೆದು ಕೊಡುತ್ತಾರೆ. ಆ ಔಷಧಿ ತೆಗೆದು ಕೊಂಡು ನಾವು ಗುಣಮುಖರಾಗುತ್ತೇವೆ. ನಂತರ, ವೈದ್ಯರು ಬರೆದು ಕೊಟ್ಟ ಹಾಗೂ ನಾವು ತೆಗೆದು ಕೊಂಡ ಔಷಧಿಗಳ ಬಗ್ಗೆ ನಾವು ಯೋಚಿಸುವುದೇ ಇಲ್ಲ. ಚಿಕಿತ್ಸೆ ನೀಡಿದ ವೈದ್ಯರನ್ನೂ ಸ್ಮರಿಸುವುದಿಲ್ಲ !

ಕೆಲವೊಮ್ಮೆ ನಮ್ಮ ದೇಹದ ತಾಪಮಾನವನ್ನು ಅಳೆಯಲು ಥರ್ಮೋ ಮೀಟರ್, ನಾಡಿ ಬಡಿತ ಮತ್ತು ಆಮ್ಲಜನಕದ ಪ್ರಮಾಣವನ್ನು ನೋಡಲು ಪಲ್ಸ್ ಆಕ್ಸೀ ಮೀಟರ್, ಎದೆ ಬಡಿತವನ್ನು ಕಾಣಲು ವಕ್ಷದರ್ಶಕ (ಸ್ಟೆಥೋಸ್ಕೋಪ್), ರಕ್ತದೊತ್ತಡವನ್ನು ಅರಿಯಲು ಸ್ಫೈಗ್ಮೋ ಮಾನೋಮೀಟರ್, ಕೆಲವು ರೋಗ ಲಕ್ಷಣಗಳನ್ನು ಪತ್ತೆ ಹಚ್ಚಲು ರಕ್ತ ಪರೀಕ್ಷೆ, ಮೂತ್ರ ಪರೀಕ್ಷೆ ಮತ್ತು ಮಲ ಪರೀಕ್ಷೆ, ಕೀಲು ಮತ್ತು ಮೂಳೆ ಸವೆದಿರುವ ಅಥವಾ ಸೀಳಿರುವ ಬಗ್ಗೆ ತಿಳಿದು ಕೊಳ್ಳಲು ಕ್ಷ-ಕಿರಣ (ಎಕ್ಸ್ ರೇ), ಹೃದಯ ಸಂಬಂಧೀ ಸಮಸ್ಯೆ ಅರಿಯಲು ಎಲೆಕ್ಟ್ರೋರೋ ಕಾರ್ಡಿಯೋಗ್ರಫಿ (ಇ ಸಿ ಜಿ) ಅಥವಾ ಆಂಜಿಯೋಗ್ರಾಮ್, ಜಠರ ಅಥವಾ ಯಕೃತ್ ಸಮಸ್ಯೆಗಳ ತಪಾಸಣೆಗೆ ಸ್ಕ್ಯಾನಿಂಗ್, ತಲೆ ಅಥವಾ ಇಡೀ ದೇಹದ ಗಂಭೀರ ಸಮಸ್ಯೆಗಳ ತಪಾಸಣೆಗೆ ಮ್ಯಾಗ್ನೇಟಿಕ್ ರೆಸೋನೆನ್ಸ್ ಇಮೇಜಿಂಗ್ (ಎಂ ಆರ್ ಐ) ಹೀಗೆ ತಪಾಸಣೆಗೆ ಒಳಪಡುತ್ತೇವೆ. ಈ ತಪಾಸಣೆಗಳ ನಂತರ ಪ್ರಯೋಗಾಲಯಗಳು (ಲ್ಯಾಬೋರೇಟರೀಸ್) ಅಥವಾ ರೋಗ ಲಕ್ಷಣಗಳ ಪತ್ತೆ ಕೇಂದ್ರಗಳು (ಡಯೋಗ್ನೋಸ್ಟಿಕ್ ಸೆಂಟರ್ಸ್) ಒದಗಿಸುವ ವರದಿಯನ್ನು ಆಧರಿಸಿ ವೈದ್ಯರು ಔಷಧೋಪಚಾರ ಮೂಲಕ ಚಿಕಿತ್ಸೆ ನೀಡುತ್ತಾರೆ. ನಾವು ಗುಣಮುಖರಾಗುತ್ತೇವೆ. ನಮ್ಮ ಅನಾರೋಗ್ಯದ ಅವಧಿಯನ್ನು ಕೆಟ್ಟ ಕನಸು ಎಂದು ಸಂಪೂರ್ಣ ಮರೆಯುತ್ತೇವೆ. ಎಂದಿನಂತೆ ದಿನ ನಿತ್ಯದ ಬದುಕಿನಲ್ಲಿ ಮೆರೆಯುತ್ತೇವೆ.

ಮತ್ತೆ ಬೇರೆಲ್ಲೋ ತೆರಳಿದಾಗ ಅಪಘಾತಕ್ಕೆ ಒಳಗಾದಾಗ ಅಥವಾ ರೋಗಕ್ಕೆ ತುತ್ತಾದಾಗ, ಈ ಹಿಂದೆ ಅನಾರೋಗ್ಯದ ಸಂದರ್ಭದಲ್ಲಿ ವೈದ್ಯರು ನೀಡಿದ ಔಷಧಗಳು, ಒಳಪಟ್ಟ ತಪಾಸಣೆಯ ವರದಿಗಳು, ಪಡೆದ ಚಿಕಿತ್ಸೆಯ ವಿವರಗಳು ನಮ್ಮಲ್ಲಿ ಲಭ್ಯವಿರುವುದಿಲ್ಲ. ಆ ವಿಚಾರಗಳನ್ನು ಅಲ್ಲಿನ ವೈದ್ಯರಿಗೆ ನಿಖರವಾಗಿ ತಿಳಿಸುವ ಜ್ಞಾನ, ಶಕ್ತಿ ಮತ್ತು ಸಾಮರ್ಥ್ಯವೂ ನಮಗೆ ಇರುವುದಿಲ್ಲ. ಆರೋಗ್ಯ ದಾಖಲೆಗಳಿಗಾಗಿ ಮನೆಯಲ್ಲಿ ದಾಖಲೆಗಳ ಹುಡುಕಾಟ ಪ್ರಾರಂಭಿಸಲು ಮುಂದಾಗಬೇಕಾಗುತ್ತದೆ. ಆದರೆ, ಸಮಯದ ಅಭಾವ ಹಾಗೂ ಸಂಯಮದ ಕೊರತೆ ಎದುರಾಗುತ್ತದೆ. ಇಂತಹ ಸನ್ನಿವೇಶದಲ್ಲಿ ನಾವು ಮತ್ತೆ ತಪಾಸಣೆಗೆ ಒಳಪಡಬೇಕಾಗುವ ಪ್ರಸಂಗ ಉದ್ಭವಿಸುತ್ತದೆ. ನಮ್ಮ ದೇಹ ಯಾವ ಔಷಧಕ್ಕೆ ಕ್ಷಿಪ್ರವಾಗಿ ಒಗ್ಗಿಕೊಳ್ಳುತ್ತದೆ. ನಮ್ಮ ದೇಹ ಯಾವ ಚಿಕಿತ್ಸೆಗೆ ಸುಲಭವಾಗಿ ಹೊಂದಿಕೊಳ್ಳುವುದಿಲ್ಲ ಎಂಬುದನ್ನು ಅನಾವರಣಗೊಳಿಸಲು ಹಾಗೂ ನಮ್ಮ ರೋಗ ಲಕ್ಷಣಗಳನ್ನು ನಿಖರವಾಗಿ ಪತ್ತೆ ಹಚ್ಚಲು ಅಲ್ಲಿನ ವೈದ್ಯರಿಗೆ ಸುದೀರ್ಘ ಸಮಯ ಬೇಕಾಗುತ್ತದೆ.



Downloaded From:www.kpscvaani.com



**ಆಯುಷ್ಮಾನ್ ಭಾರತ್ ಅಂಕಿತ ಅಭಿಯಾನವು ದೇಶದ ಸಮಗ್ರ ಅಂಕಿತ ಆರೋಗ್ಯ ಮೂಲಭೂತ ಸೌಲಭ್ಯಗಳಿಗೆ ಸೂಕ್ತ ಬೆಂಬಲ ಒದಗಿಸುವ ಹಾಗೂ ಬೆನ್ನೆಲುಬನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ.**

ಅಷ್ಟೇ ಅಲ್ಲ ! ಅಲ್ಲಿನ ವೈದ್ಯರು ಚಿಕಿತ್ಸೆಯನ್ನು ಪ್ರಾರಂಭಿಸಲು ಅನಗತ್ಯವಾಗಿ ವಿಳಂಬವಾಗುತ್ತದೆ. ಇದು ರೋಗಿಯ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಇದರಿಂದ ಎಷ್ಟೋ ಮಂದಿ ತಮ್ಮ ಜೀವವನ್ನೇ ಕಳೆದು ಕೊಂಡಿದ್ದಾರೆ. ಇವುಗಳೆಲ್ಲವನ್ನು ಪರಿಗಣಿಸಿದ ಕೇಂದ್ರ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅನಾರೋಗ್ಯಕ್ಕೆ ತುತ್ತಾಗುವವರ ರಕ್ಷಣೆಗೆ ಧಾವಿಸಿದೆ. ಅದೂ ಅಂಕಿತ ವೇದಿಕೆ (ಡಿಜಿಟಲ್ ಪ್ಲಾಟ್‌ಫಾರಂ) ಮೂಲಕ ! ಹಣ ಮತ್ತು ಸಮಯವನ್ನು ಉಳಿಸುವ ಈ ನವ ನವೀನ ವಿಧಾನ ಯಾವುದು ? ಹೇಗೆ ? ಎಂಬ ತಮ್ಮ ಪ್ರಶ್ನೆಗೆ ಇಗೋ ಇಲ್ಲಿದೆ ಉತ್ತರ !

ತಮ್ಮೆಲ್ಲಾ ಆರೋಗ್ಯ ದಾಖಲೆಗಳನ್ನು ಆನ್‌ಲೈನ್ ವ್ಯವಸ್ಥೆಯಲ್ಲಿ ತಾವು ರಕ್ಷಿಸಿಟ್ಟುಕೊಳ್ಳಬಹುದು. ತಾವು ಅನಾರೋಗ್ಯಕ್ಕೆ ತುತ್ತಾದಾಗ ಯಾವುದೇ ಮೂಲೆಯಲ್ಲಿದ್ದರೂ, ಸಮೀಪದ ವೈದ್ಯರ ಬಳಿ ತೆರಳಿ ತಮ್ಮ ಹಿಂದಿನ ಆರೋಗ್ಯ ಸಮಸ್ಯೆ, ತಾವು ಈ ಹಿಂದೆ ಒಳಪಟ್ಟ ತಪಾಸಣೆ, ಪಡೆದ ಚಿಕಿತ್ಸೆ ಹಾಗೂ ತೆಗೆದುಕೊಂಡ ಔಷಧಿಯ ವಿವರಗಳನ್ನು ಅಲ್ಲಿನ ವೈದ್ಯರೊಂದಿಗೆ ಹಂಚಿಕೊಂಡು ಶೀಘ್ರವಾಗಿ ಚಿಕಿತ್ಸೆ ಪಡೆದು ಗುಣಮುಖರಾಗಬಹುದು. ಅಂತೆಯೇ, ಅಲ್ಲಿನ ವೈದ್ಯರು ಬರೆದು ಕೊಟ್ಟ ಔಷಧಿಗಳು, ಅಲ್ಲಿ ಒಳಪಟ್ಟ ತಪಾಸಣೆ, ಅಲ್ಲಿ ಪಡೆದ ಚಿಕಿತ್ಸೆಗಳ ವಿವರಗಳನ್ನು ಮತ್ತೆ ಆನ್‌ಲೈನ್ ನಲ್ಲಿ ಮುಂದಿನ ದಿನಗಳ ಅವಶ್ಯಕತೆಗೆ ಸಂರಕ್ಷಿಸಿಟ್ಟು ಕೊಳ್ಳಬಹುದು. ಮತ್ತೊಂದು ದಿನದ ಆರೋಗ್ಯ ಸಮಸ್ಯೆಗೆ ಕ್ಷಿಪ್ರ ಚಿಕಿತ್ಸೆ ಒದಗಿಸಲು ಇದು ಅನುಕೂಲವಾಗಬಹುದು. ಇದು ತಮ್ಮ ಆರೋಗ್ಯ ಕಾಯ್ದುಕೊಳ್ಳಲು ಸಹಾಯವಾಗಬಹುದು.

ಇದರಿಂದ ಎರಡು ರೀತಿಯ ಲಾಭಗಳನ್ನು ಪಡೆಯಬಹುದು. ಮೊದಲನೆಯದಾಗಿ ರೋಗಿಯ ಸಂಪೂರ್ಣ ಆರೋಗ್ಯ ಮಾಹಿತಿ ಹಾಗೂ ದತ್ತಾಂಶ ಲಭಿಸುವುದರಿಂದ ವೈದ್ಯರಿಗೆ ಚಿಕಿತ್ಸೆ ನೀಡುವುದು ಸುಲಭ.

ಎರಡನೆಯದಾಗಿ, ಅನಾರೋಗ್ಯಕ್ಕೆ ತುತ್ತಾದ ವ್ಯಕ್ತಿಗೆ ಕ್ಷಿಪ್ರವಾಗಿ ಚಿಕಿತ್ಸೆ ದೊರೆಯುತ್ತದೆ. ಸುವರ್ಣ ಸಮಯದಲ್ಲಿ ಸಾವಿನಂಚಿನಲ್ಲಿರುವ ವ್ಯಕ್ತಿ ಕೂಡಾ ಬದುಕುಳಿಯುವ ಸಾಧ್ಯತೆ ಇರುತ್ತದೆ. ಅಂತೆಯೇ, ಅನಗತ್ಯ ತಪಾಸಣಾ ವೆಚ್ಚಗಳೂ ಇಲ್ಲದಂತಾಗುತ್ತದೆ. ಇದಕ್ಕಾಗಿಯೇ ಹೊಸದಾಗಿ ಬಂದಿದೆ ಆಭಾ ಆ್ಯಪ್ ! ಇದು 2017 ರ ರಾಷ್ಟ್ರೀಯ ಆರೋಗ್ಯ ನೀತಿಯ ಫಲಶೃತಿ. ಆರೋಗ್ಯ ರಕ್ಷಣೆಯಲ್ಲಿ ಮಾಹಿತಿ ತಂತ್ರಜ್ಞಾನದ ಅಳವಡಿಕೆ.

**ಆಭಾ ಎಂದರೇನು ?**

ಆಭಾ ಎಂದರೆ ಆಯುಷ್ಮಾನ್ ಭಾರತ್ ಆರೋಗ್ಯ ಅಭಿಯಾನ (ಆಯುಷ್ಮಾನ್ ಭಾರತ್ ಹೆಲ್ತ್ ಮಿಷನ್). ಆಯುಷ್ಮಾನ್ ಭಾರತ್ ಅಂಕಿತ ಅಭಿಯಾನ (ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್) ಅಡಿಯಲ್ಲಿ ಅಂಕಿತ ಆರೋಗ್ಯ ವ್ಯವಸ್ಥೆ ಇದೀಗ ಜಾರಿಗೆ ಬಂದಿದೆ.

ಆಯುಷ್ಮಾನ್ ಭಾರತ್ ಅಂಕಿತ ಅಭಿಯಾನವು ದೇಶದ ಸಮಗ್ರ ಅಂಕಿತ ಆರೋಗ್ಯ ಮೂಲಭೂತ ಸೌಲಭ್ಯಗಳಿಗೆ ಸೂಕ್ತ ಬೆಂಬಲ ಒದಗಿಸುವ ಹಾಗೂ ಬೆನ್ನೆಲುಬನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿದೆ. ಆರೋಗ್ಯ ರಕ್ಷಣಾ ವ್ಯವಸ್ಥೆಯಲ್ಲಿ ವಿವಿಧ ಭಾಗೀದಾರರಲ್ಲಿ ಪ್ರಸ್ತುತ ಇರುವ ಅಂತರವನ್ನು ಅಂಕಿತ ಹೆದ್ದಾರಿಯ ಮೂಲಕ ಸೇತುವೆಯಾಗಿ ಇದು ಕಾರ್ಯ ನಿರ್ವಹಿಸಲಿದೆ.

**ಆಯುಷ್ಮಾನ್ ಭಾರತ್ ಅಂಕಿತ ಅಭಿಯಾನ ವ್ಯವಸ್ಥೆ :**

ಸರ್ವರಿಗೂ ಗುಣಮಟ್ಟದ ಆರೋಗ್ಯ ಸೇವೆ ಲಭಿಸಬೇಕೆಂಬ ಸದುದ್ದೇಶದ ರಾಷ್ಟ್ರೀಯ ಆರೋಗ್ಯ ನೀತಿಯಲ್ಲಿ ರೋಗ ತಡಗಟ್ಟುವಿಕೆಗೆ ಆದ್ಯತೆ. ಅಂತೆಯೇ, ಆರೋಗ್ಯ ರಕ್ಷಣೆಗೂ ಉತ್ತೇಜನ ಎರಡೂ ಇದೆ. ಎಲ್ಲಾ ರೋಗಿಗಳಿಗೂ ಉತ್ತಮ ಹಾಗೂ ಗುಣಮಟ್ಟದ ಚಿಕಿತ್ಸೆ ಲಭಿಸಬೇಕು. ಚಿಕಿತ್ಸೆಗಾಗಿ ರೋಗಿ ಅಥವಾ ರೋಗಿಯ ಕುಟುಂಬಸ್ಥರು ಆರ್ಥಿಕ ಸಂಕಷ್ಟಕ್ಕೆ



Downloaded From:www.kpscvaani.com



ಒಳಗಾಗಬಾರದು ಎಂಬ ತತ್ವ ರಾಷ್ಟ್ರೀಯ ಆರೋಗ್ಯ ನೀತಿಯಲ್ಲಿ ಅಡಗಿದೆ. ಇದಕ್ಕಾಗಿ ಆರೋಗ್ಯ ಕ್ಷೇತ್ರದಲ್ಲಿ ತಂತ್ರಜ್ಞಾನದ ಅಳವಡಿಕೆಗೆ, ವಿಶೇಷವಾಗಿ ಮಾಹಿತಿ ತಂತ್ರಜ್ಞಾನದ ಅಳವಡಿಕೆಗೆ ಆದ್ಯತೆ ನೀಡಲಾಗಿದೆ.

ಸೇವೆ ಒದಗಿಸುವ ಆಸ್ಪತ್ರೆಗಳು, ಚಿಕಿತ್ಸಾಲಯಗಳು, ಪ್ರಯೋಗಾಲಯಗಳು, ಔಷಧಾಲಯಗಳು ಹಾಗೂ ಸೌಖ್ಯ ಕೇಂದ್ರಗಳು, ಸಂಬಂಧಿತ ಖಾಸಗೀ ಘಟಕಗಳಾದ ತೃತೀಯ ಪಕ್ಷೀ ಆಡಳಿತಗಾರ ವಿಮಾದಾರರು ಹಾಗೂ ಆರೋಗ್ಯ ತಾಂತ್ರಿಕ ಸಂಸ್ಥೆಗಳು, ಆರೋಗ್ಯ ರಕ್ಷಣಾ ವೃತ್ತಿಪರರಾದ ನವ ಔಷಧಿ ಮತ್ತು ಆಯುರ್ವೇದ ವೈದ್ಯರು ಹಾಗೂ ಇತರೆ ಅಭ್ಯಾಸಕಾರರು, ಲಾಭ-ರಹಿತ ಸಂಸ್ಥೆಗಳಾದ ಸಂಘಗಳು, ಅಭಿವೃದ್ಧಿ ಪಾಲುದಾರರು ಅಥವಾ ಸರ್ಕಾರೇತರ ಸಂಸ್ಥೆಗಳು, ಆಡಳಿತಗಾರರಾದ ಕಾರ್ಯಕ್ರಮ ವ್ಯವಸ್ಥಾಪಕರು ಮತ್ತು ನಿಯಂತ್ರಕರು, ನೀತಿ ನಿರೂಪಕರಾದ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಆಯುಷ್ಮಾನ್ ಭಾರತ್ ಅಂಕಿತ ಅಭಿಯಾನ ವ್ಯವಸ್ಥೆಯ ಭಾಗವಾಗಿದೆ.

**ಆಭಾ ಮೊಬೈಲ್ ಆ್ಯಪ್‌ನ ವೈಶಿಷ್ಟ್ಯಗಳು !**

ಆಭಾ ವಿಳಾಸ ಸೃಜನೆ, ಆರೋಗ್ಯ ಮಾಹಿತಿ ಅನ್ವೇಷಣೆ, ಆಭಾದ ನಿರ್ದಿಷ್ಟ ವಿಳಾಸದೊಂದಿಗೆ ಆರೋಗ್ಯ ದಾಖಲೆಗಳನ್ನು ಒಂದುಗೂಡಿಸುವುದು, ಆರೋಗ್ಯ ದಾಖಲೆಗಳನ್ನು ವೀಕ್ಷಿಸುವುದು ಹಾಗೂ ಸಮ್ಮತಿಗಳ ನಿರ್ವಹಣೆ ಎಲ್ಲವೂ ಈ ನಾಗರೀಕ ಕೇಂದ್ರಿತ ವ್ಯವಸ್ಥೆಯಲ್ಲಿ ಒಂದೆಡೆ ಲಭ್ಯ.

ಭಾರತದ ಅಂಕಿತ ಆರೋಗ್ಯ ರಕ್ಷಣಾ ವ್ಯವಸ್ಥೆಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರಿಗೂ 14 ಅಂಕಿಯ ವಿಶಿಷ್ಟ ಸಂಖ್ಯೆಯನ್ನು ನೀಡಿ ಗುರುತಿಸಲಾಗುತ್ತದೆ. ದೇಶಾದ್ಯಂತ ಆರೋಗ್ಯ ಸೇವೆ ಒದಗಿಸುವವರು ಈ ಸಂಖ್ಯೆಯನ್ನು ಮಾನ್ಯ ಮಾಡುತ್ತಾರೆ.ಅಂತೆಯೇ, ಆಭಾ ವಿಳಾಸವೂ ವಿಶಿಷ್ಟ ಹಾಗೂ ಪ್ರತಿಯೊಬ್ಬರಿಗೂ ಪ್ರತ್ಯೇಕ. ತಮ್ಮ ಖಾತೆಯಲ್ಲಿರುವ ಆರೋಗ್ಯ ಮಾಹಿತಿಯನ್ನು ಯಾವುದೇ ಸಮಯದಲ್ಲಿ ಅಂಕಿತ ರೂಪದಲ್ಲಿ ವೀಕ್ಷಿಸಲು ಹಾಗೂ ಹಂಚಿಕೊಳ್ಳಲು ಅವಕಾಶವಿದೆ. ಆಭಾ ವಿಳಾಸ ಸೃಜನೆಯ ನಂತರ ತಮಗೆ ಬೇಡ ಎನಿಸಿದಲ್ಲಿ, ಯಾರ ಹಂಗೂ ಇಲ್ಲದೆಯೇ ಅಭಾ ಜಾಲದಿಂದ ಸ್ವಯಂ ಪ್ರೇರಿತರಾಗಿ ಹೊರ ಬರಲು ತಮಗೆ ಅವಕಾಶವಿದೆ. ಅಂತೆಯೇ, ತಟಸ್ಥಗೊಂಡು, ಕೆಲ ಸಮಯದ ನಂತರ ಮತ್ತೆ ಪ್ರವೇಶಿಸಿ ಸಕ್ರಿಯವಾಗಲೂ ತಮಗೆ ಅವಕಾಶವಿದೆ. ದೊಡ್ಡದಾಗಿ ಚಿಂತಿಸಿ, ಸಣ್ಣದಾಗಿ ಪ್ರಾರಂಭಿಸಿ, ಕ್ಷಿಪ್ರವಾಗಿ ಏರಿ ಎಂಬುದೇ ಈ ಅಂಕಿತ ವ್ಯವಸ್ಥೆಯ ವಿಶೇಷತೆಯಾಗಿದೆ.

ಆಧುನಿಕ ಮತ್ತು ಸಾಂಪ್ರದಾಯಿಕ ಆರೋಗ್ಯ ವ್ಯವಸ್ಥೆಯಲ್ಲಿ ಸೇವೆ ಒದಗಿಸುವ ವೃತ್ತಿಪರರ ಅಂಕಿತ ರೂಪದ ವಹಿಯೂ ಈ ವ್ಯವಸ್ಥೆಯಲ್ಲಿ ಲಭ್ಯವಿದೆ.

ಆಭಾ ಮೊಬೈಲ್ ಆ್ಯಪ್ ನಲ್ಲಿ ವೈಯುಕ್ತಿಕ ಆರೋಗ್ಯ ದಾಖಲೆಗಳ ವ್ಯವಸ್ಥೆ ಇದೆ. ಇದು ತನ್ನ ಆರೋಗ್ಯ ದಾಖಲೆಗಳನ್ನು ವ್ಯಕ್ತಿಗತವಾಗಿ ತಾನೇ ನಿರ್ವಹಿಸಲು ವ್ಯಕ್ತಿಗೆ ಅನುಕೂಲಕರವಾಗಿದೆ. ತಮ್ಮ ಆರೋಗ್ಯ ಮಾಹಿತಿ ಸೋರಿಕೆಯಾಗದಂತೆ ಅದಕ್ಕೆ ಎಲ್ಲಾ ರೀತಿಯಲ್ಲೂ ಭದ್ರತೆ ಕಲ್ಪಿಸುವ ಹಾಗೂ ರೋಗಿಯ ಖಾಸಗೀತನಕ್ಕೆ ಧಕ್ಕೆ ಬಾರದಂತೆ ನೋಡಿಕೊಳ್ಳುವ ತಂತ್ರಜ್ಞಾನವನ್ನು ಆಭಾ ಮೊಬೈಲ್ ಆ್ಯಪ್ ನಲ್ಲಿ ಅಳವಡಿಸಲಾಗಿದೆ.

ಕೇವಲ ಪಟ್ಟಣ ಮತ್ತು ನಗರ ಪ್ರದೇಶದ ಜನರು ಮಾತ್ರವಲ್ಲದೆ, ಹಳ್ಳಿಗಾಡಿನ ಜನರಲ್ಲೂ ಈ ವ್ಯವಸ್ಥೆ ಹೊಸ ಆಶಾಕಿರಣವನ್ನು ಮೂಡಿಸಿದೆ.

ರೋಗ ಅಥವಾ ಕಾಯಿಲೆಗಳು ಹೇಳಿ ಕೇಳಿ ಬರುವುದಿಲ್ಲ. ಬಂದ ಕೂಡಲೇ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ಉತ್ಸಾಹ ಮತ್ತು ಉತ್ಸುಕತೆ ನಮ್ಮಲ್ಲಿ ಇರಬೇಕು. ಆಗ ಮಾತ್ರ ನಾವು ಕ್ಷಿಪ್ರವಾಗಿ ಗುಣಮುಖರಾಗಲು ಸಾಧ್ಯ. ಇಂತಹ ಸಂದರ್ಭದಲ್ಲಿ ನವ ನವೀನ ಅಂಕಿತ ತಂತ್ರಜ್ಞಾನ ಕೂಡಾ ನಮಗೆ ಬೆಂಬಲವಾಗಿ ಮತ್ತು ಬೆನ್ನೆಲುಬಾಗಿ ನಿಲ್ಲುತ್ತದೆ. ನಾವು ಇನ್ನೂ ತ್ವರಿತವಾಗಿ ಗುಣಮುಖರಾಗಲು ಇದೂ ಕೂಡಾ ನಮ್ಮ ನೆರವಿಗೆ ಬರುತ್ತದೆ.

**ಕಾಲಕ್ಕೆ ತಕ್ಕಂತೆ ಬದಲಾಗೋಣ !**

ನಮ್ಮ ಜೀವನ ಶೈಲಿಯಲ್ಲಿ ನವ ತಂತ್ರಜ್ಞಾನವನ್ನು ಅಳವಡಿಸಿಕೊಂಡು ನವ ಯುಗದತ್ತ ಮುಂದಡಿ ಇಡೋಣ. ಆಭಾ ಆ್ಯಪ್ ಕಂಡು ಅಬ್ಬಾ ಎಂದು ಬೆಚ್ಚಿ ಬೀಳುವುದಾಗಲೀ ಅಥವಾ ಬೆರಗಾಗುವುದಾಗಲೀ ಬೇಡ ! ಆಭಾ ಆ್ಯಪ್ ಬಳಸಿ ಅದನ್ನು ನಮಗೆ ಕೊಡುಗೆಯಾಗಿ ಕೊಟ್ಟ ಮಹನೀಯರಿಗೆ ಹಾಗೂ ಸರ್ಕಾರಕ್ಕೆ ಅಭಾರಿಯಾಗಿರೋಣ.

ಬನ್ನಿ ! ಮುಂಬರುವ ದಿನಗಳಲ್ಲಿ ಆರೋಗ್ಯ ದಾಖಲೆಗಳ ರಕ್ಷಣೆ ಮತ್ತು ಸಂಗ್ರಹಣೆಗೆ ಆಭಾ ಮೊಬೈಲ್ ಆ್ಯಪ್ ಬಳಸಿ ಹೊಸ ವರ್ಷಕ್ಕೆ ಹೊಸ ಹೆಜ್ಜೆ ಇಡೋಣ. ಆರೋಗ್ಯ ಲೋಕದಲ್ಲೇ ಜೀವಿಸೋಣ, ವಿಹರಿಸೋಣ. ■



Downloaded From:www.kpscvaani.com




# ಕಾಶಿ ಯಾತ್ರೆ ಮಾಡಿಸುವ

## ಭಾರತ್ ಗೌರವ್ ಕಾಶಿ ದರ್ಶನ ರೈಲಿಗೆ ಚಾಲನೆ

**ಜನರಿಗೆ ಕಡಿಮೆ ಬಜೆಟ್‌ನಲ್ಲಿ ಕಾಶಿ ಯಾತ್ರೆ ಪ್ಯಾಕೇಜ್ ಟೂರ್ ಒದಗಿಸುವ ಭಾರತ್ ಗೌರವ್ ಕಾಶಿ ದರ್ಶನ ರೈಲು ಸೇವೆ ಆರಂಭವಾಗಿದೆ.**

ಬಿ. ಜಿ. ಪೂರ್ಣಿಮ

ಕರ್ನಾಟಕ ಸರ್ಕಾರದ ಮುಜರಾಯಿ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆ ಕರ್ನಾಟಕ – ಭಾರತ್ ಗೌರವ್ ಕಾಶಿ ದರ್ಶನ ಪ್ಯಾಕೇಜ್ ಟೂರ್ ಆರಂಭಗೊಂಡಿದೆ. ಈ ಯೋಜನೆಯ ಮೊದಲ ರೈಲಿಗೆ ನವೆಂಬರ್ 11 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಹಸಿರು ಬಾವುಟ ತೋರುವ ಮೂಲಕ ಚಾಲನೆ ನೀಡಿದರು. ಆ ಮೂಲಕ ಅಂದು ಮೊದಲ ರೈಲು ಭಕ್ತರನ್ನು ಹೊತ್ತು ಕಾಶಿಯತ್ತ ತನ್ನ ಪ್ರಯಾಣ ಬೆಳಸಿತು.

ಪ್ರಧಾನಿ ನರೇಂದ್ರ ಮೋದಿ ಅವರ ಮುತುವರ್ಜಿಯಿಂದ ಮರು ನಿರ್ಮಾಣವಾಗಿರುವ 'ದಿವ್ಯ ಕಾಶಿ – ಭವ್ಯಕಾಶಿ' ಯನ್ನು ರಾಜ್ಯದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡಿ ಕಾಶಿ ವಿಶ್ವನಾಥನ ದರ್ಶನ ಪಡೆಯಲಿ ಎನ್ನುವ ಉದ್ದೇಶದಿಂದ ಈ ವಿಶೇಷ ಪ್ಯಾಕೇಜ್ ಟೂರನ್ನು ಆಯೋಜಿಸಲಾಗಿದೆ. ಕೇಂದ್ರ ಸರಕಾರದ ಭಾರತ್ ಗೌರವ್ ಯೋಜನೆಯ ಅಡಿಯಲ್ಲಿ ಕೇಂದ್ರ ರೈಲ್ವೇ ಸಚಿವರ ಸಂಪೂರ್ಣ ಸಹಕಾರದೊಂದಿಗೆ ರೈಲನ್ನು ಮುಜರಾಯಿ ಇಲಾಖೆಯು 1 ಕೋಟಿ ರೂಪಾಯಿಗಳ ಭೌತಿಕ ಬ್ಯಾಂಕ್ ಗ್ಯಾರಂಟಿಯನ್ನು ನೀಡಿ ರೈಲನ್ನು ಗುತ್ತಿಗೆ


Downloaded From:www.kpscvaani.com



ಕರ್ನಾಟಕ – ಭಾರತ್ ಗೌರವ್ ಕಾಶಿ ದರ್ಶನದ ಮೊದಲ ಯಾತ್ರೆಗೆ ಬುಕ್ಕಿಂಗ್ ಮಾಡಿದ್ದ 600 ಜನ ಯಾತ್ರಾರ್ಥಿಗಳು ರೈಲನ್ನು ಹತ್ತಿದ್ದು, ಐಆರ್‌ಸಿಟಿಸಿ ಕಡೆಯಿಂದ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಕೊಡೆಯನ್ನು ಉಚಿತವಾಗಿ ವಿತರಿಸಲಾಯಿತು.

**ಬೆಂಗಳೂರು–ವಾರಣಾಸಿ–ಅಯೋಧ್ಯೆ–ಪ್ರಯಾಗರಾಜ್–ಬೆಂಗಳೂರು ಮಾರ್ಗದಲ್ಲಿ ರೈಲು 7 ದಿನಗಳಲ್ಲಿ 4161 ಕಿಲೋಮೀಟರ್‌ಗಳಷ್ಟು ದಾರಿ ಕ್ರಮಿಸಲಿದೆ. 14 ಬೋಗಿಗಳನ್ನು ಈ ರೈಲು ಒಳಗೊಂಡಿರಲಿದ್ದು, 11 ಬೋಗಿಗಳನ್ನು ಪ್ರಯಾಣಿಕರ ಪ್ರವಾಸಕ್ಕೆ ಅಣಿ ಮಾಡಲಾಗಿದೆ. 3 ಟಯರ್ ಎಸಿಯ ವ್ಯವಸ್ಥೆ ಇದ್ದು, ಒಂದು ಬೋಗಿಯನ್ನು ದೇವಸ್ಥಾನವಾಗಿ ಪರಿವರ್ತಿಸಿ ಯಾತ್ರಾರ್ಥಿಗಳ ಭಜನೆಗೆ ಅವಕಾಶ ನೀಡಲಾಗಿದೆ. ಅಲ್ಲದೇ, ನಮ್ಮ ರಾಜ್ಯದ ಪ್ರಮುಖ ದೇವಸ್ಥಾನಗಳ ಬ್ರಾಂಡಿಂಗ್ ಮಾಡುವ ಉದ್ದೇಶದಿಂದ 11 ಬೋಗಿಗಳ ಮೇಲೆ ರಾಜ್ಯದ ಪ್ರಮುಖ 11 ದೇವಸ್ಥಾನಗಳ ಮಾಹಿತಿಯನ್ನು ಅಳವಡಿಸಲಾಗಿದೆ.**

ಆಧಾರದ ಮೇಲೆ ಬಾಡಿಗೆಗೆ ತಗೆದುಕೊಂಡು ಈ ಯೋಜನೆಯನ್ನು ಕಾರ್ಯತಗೊಳಿಸಿದೆ. ಕೇವಲ 15 ಸಾವಿರ ರೂಪಾಯಿಗಳಲ್ಲಿ 8 ದಿನಗಳ ಕಾಶಿ ದರ್ಶನ ಪ್ಯಾಕೇಜ್ ಟೂರ್‌ಗೆ ಈಗಾಗಲೇ ಬುಕ್ಕಿಂಗ್ ಪ್ರಾರಂಭವಾಗಿದೆ.

ಬೆಂಗಳೂರಿನಿಂದ ಹೊರಡುವ ಈ ರೈಲನ್ನು ಉತ್ತರ ಕರ್ನಾಟಕದ ಭಕ್ತರು ಸಹ ಹತ್ತಲು ಅನುಕೂಲವಾಗುವಂತೆ ಉತ್ತರ ಕರ್ನಾಟಕದ ಪ್ರಮುಖ ನಿಲ್ದಾಣಗಳಲ್ಲೂ ಅವಕಾಶ ಕಲ್ಪಿಸಲಾಗಿದೆ. ಈ ರೈಲು ಬೆಂಗಳೂರು, ಬಿರೂರ್, ಹಾವೇರಿ, ಹುಬ್ಬಳ್ಳಿ, ಬೆಳಗಾವಿ ಹಾಗೂ ರಾಯಭಾಗ ಮಾರ್ಗವಾಗಿ ಕಾಶಿ, ಅಯೋಧ್ಯ ಮತ್ತು ಪ್ರಯಾಗರಾಜ್‌ಗೆ ಸಂಚರಿಸಲಿದೆ.

ರಾಜ್ಯದ ಜನರನ್ನು ಕಡಿಮೆ ಖರ್ಚಿನಲ್ಲಿ ಕಾಶಿ ದರ್ಶನಕ್ಕೆ ಕಳುಹಿಸಬೇಕು ಎನ್ನುವುದು  ಮಜರಾಯಿ, ಹಜ್ ಮತ್ತು ವಕ್ಫ್ ಸಚಿವರಾದ ಶಶಿಕಲಾ ಅ ಜೊಲ್ಲೆ ಅವರ ಆಶಯವಾಗಿತ್ತು. ಇದಕ್ಕೆ ಮುಖ್ಯಮಂತ್ರಿಗಳು ಸಾತ್ ನೀಡಿದರು. ಕಾಶಿ ಯಾತ್ರೆಗೆ ಭಾರತ್ ಗೌರವ್ ರೈಲು ಯೋಜನೆ ಸೇವೆಯನ್ನು ರಾಜ್ಯದ ಜನತೆಗೆ ಒದಗಿಸುವ ನಿಟ್ಟಿನಲ್ಲಿ ಸಚಿವೆ ಶಶಿಕಲಾ ಅ ಜೊಲ್ಲೆ ಅವರು ಮತ್ತು ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರಾದ ಶ್ರೀಮತಿ ರೋಹಿಣಿ ಸಿಂಧೂರಿ, ಐಆರ್‌ಸಿಟಿಸಿ ಹಾಗೂ ರೈಲ್ವೇ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಕಳೆದ ಐದಾರು ತಿಂಗಳಿನಿಂದ ಹಲವಾರು ಸಭೆಗಳನ್ನು ನಡೆಸಿ ಕಾರ್ಯಕತಗೊಳಿಸಿದ್ದಾರೆ. ಆ ಮೂಲಕ ದೇಶದಲ್ಲೇ ಪ್ರಪ್ರಥಮ ಬಾರಿಗೆ ಕಾಶಿ ಯಾತ್ರೆಗೆ ರೈಲಿನಲ್ಲಿ ಪ್ಯಾಕೇಜ್ ಟೂರ್ ಒದಗಿಸಿದ ಕೀರ್ತಿಗೆ ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆ ಪ್ರಾಪ್ತವಾಗಿದೆ.

**ಐಆರ್‌ಸಿಟಿಸಿ ಸಹಭಾಗಿತ್ವದಲ್ಲಿ ವಿಶೇಷ ಪ್ಯಾಕೇಜ್:**

ಅತ್ಯಂತ ಕಡಿಮೆ ವೆಚ್ಚದಲ್ಲಿ ಕಾಶಿ ವಿಶ್ವನಾಥ ಹಾಗೂ ಅಯೋಧ್ಯ ಶ್ರೀರಾಮನ ದೈವ ಭೂಮಿಯ ವೈಭವ ಸವಿಯುವ ಅವಕಾಶ ಇದಾಗಿದೆ. 8 ದಿನಗಳ ಕಾಲದ ಈ ಟೂರ್ ಪ್ಯಾಕೇಜ್‌ನಲ್ಲಿ ಎಲ್ಲಾ ಸವಲತ್ತುಗಳನ್ನು ಒಳಗೊಂಡಿರಲಿದೆ. ಟ್ರೈನ್ ದರ, ಪ್ರವಾಸಿ ಸ್ಥಳಗಳಲ್ಲಿ ಅಗತ್ಯವಿರುವ ಬಸ್ ವ್ಯವಸ್ಥೆ, ಉಳಿದುಕೊಳ್ಳಲು ಹೋಟೆಲ್, ಮತ್ತು 8 ದಿನಗಳಲ್ಲಿ ಊಟ ಮತ್ತು ತಿಂಡಿ ವ್ಯವಸ್ಥೆ ಹಾಗೂ ವಿಮೆಯನ್ನು ಸಹ ಈ ಪ್ಯಾಕೇಜ್ ಒಳಗೊಂಡಿರಲಿದೆ.

**ಕರ್ನಾಟಕ ಸರಕಾರದಿಂದ 5 ಸಾವಿರ ರೂಪಾಯಿಗಳ ಸಹಾಯಧನ:**

ಐಆರ್‌ಸಿಟಿಸಿ ಸಹಭಾಗಿತ್ವದ ಈ



Downloaded From:www.kpscvaani.com



**ಭಾರತ್ ಗೌರವ್ ಕಾಶಿ ಯಾತ್ರಾ ಸೌಲಭ್ಯವನ್ನು ಪಡೆದ ಮೊದಲ ರಾಜ್ಯ ಕರ್ನಾಟಕ ಎನ್ನುವ ಖ್ಯಾತಿ ಪಡೆದಿರುವುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಟ್ವೀಟರ್‌ನಲ್ಲಿ ಹಂಚಿಕೊಂಡಿರುವುದು ಬಹಳ ಸಂತಸದ ವಿಷಯ. ಪ್ರಧಾನಿ ನರೇಂದ್ರ ಮೋದಿ ಅವರಿಂದ ಶ್ಲಾಘನೆಗೆ ಒಳಪಟ್ಟ ಕರ್ನಾಟಕ ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ ಮಹತ್ವಾಕಾಂಕ್ಷಿ ಯೋಜನೆಗೆ ಬಹಳಷ್ಟು ಉತ್ತಮ ಪ್ರತಿಕ್ರಿಯೆ ದೊರಕುತ್ತಿದೆ. ಮೊದಲ ಟ್ರೈನ್‌ನ ಯಾತ್ರಾರ್ಥಿಗಳು ಸಂತಸದಿಂದ ಯಾತ್ರೆಯನ್ನು ಕೈಗೊಂಡು ಕಾಶಿ ವಿಶ್ವನಾಥನ ದರ್ಶನ ಪಡೆದು ಪುನೀತರಾದುದನ್ನು ನನ್ನೊಂದಿಗೆ ಹಂಚಿಕೊಂಡಿದ್ದಾರೆ.**

**–ಶಶಿಕಲಾ ಅ ಜೊಲ್ಲೆ, ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು**

ಟೂರ್ ಪ್ಯಾಕೇಜ್ ತಗೆದುಕೊಳ್ಳುವ ಪ್ರತಿ ವ್ಯಕ್ತಿಗೂ 5 ಸಾವಿರ ರೂಪಾಯಿಗಳ ಸಹಾಯಧನವನ್ನು ಕರ್ನಾಟಕ ಸರ್ಕಾರ ನೀಡಲಿದೆ. ಈ ಪ್ಯಾಕೇಜ್‌ನ ದರ ಮೂಲತಃ 20 ಸಾವಿರ ರೂಪಾಯಿಗಳಾಗಿದ್ದು, ಪ್ರಯಾಣಿಕರು ಕೇವಲ 15,000 ರೂಪಾಯಿಗಳನ್ನು ನೀಡಿದರೆ ಸಾಕು. ಉಳಿದ 5000 ರೂಗಳನ್ನು ಕರ್ನಾಟಕ ಸರ್ಕಾರ ಸಹಾಯಧನದ ರೂಪದಲ್ಲಿ ನೀಡಲಿದೆ.

ಮೊದಲ ಟ್ರಿಪ್‌ನಲ್ಲಿ ಎಲ್ಲಾ ಆಸನಗಳು ಭರ್ತಿಯಾಗಿತ್ತು. ಎರಡನೇ ರೈಲು ನವೆಂಬರ್ 23 ರಂದು ಹೊರಡಲಿದೆ. ಕರ್ನಾಟಕ ಭಾರತ್ ಗೌರವ್ ಕಾಶಿ ದರ್ಶನ ರೈಲ್ವೇ ಪ್ಯಾಕೇಜ್‌ನ ಎರಡನೇ ಟ್ರಿಪ್‌ಗೆ ಸಿದ್ಧತೆ ನಡೆಸಿಕೊಳ್ಳುವಂತೆ ಅಧಿಕಾರಿಗಳಿಗೆ ಮುಜರಾಯಿ ಹಜ್ ಮತ್ತು ವಕ್ಫ್ ಸಚಿವರಾದ ಶಶಿಕಲಾ ಅ ಜೊಲ್ಲೆ ಅವರು ಸೂಚನೆ ನೀಡಿದ್ದಾರೆ.

ಪ್ರಯಾಣಿಕರ ಅನುಕೂಲಕ್ಕಾಗಿ 3 ಟಯರ್ ಎಸಿಯ ವ್ಯವಸ್ಥೆಯನ್ನು ಮಾಡಲಾಗಿದ್ದು, 14 ಬೋಗಿಗಳ ಮೇಲೂ ನಮ್ಮ ರಾಜ್ಯದ ಪ್ರಮುಖ ದೇವಸ್ಥಾನಗಳ ಛಾಯಾಚಿತ್ರಗಳ ಬ್ರಾಂಡಿಂಗ್ ಮಾಡಲಾಗಿದೆ. ನಮ್ಮ ರಾಜ್ಯದ ದೇವಸ್ಥಾನಗಳನ್ನು ಭಾರತದ ಉದ್ದಗಲಕ್ಕೂ ಸಂಚರಿಸಲಿರುವ ಈ ಟ್ರೈನ್ ಮೂಲಕ ಪ್ರಚಾರ ಮಾಡುವುದು ಕೂಡ ಸರ್ಕಾರದ ಉದ್ದೇಶವಾಗಿದೆ.

ಐಆರ್‌ಸಿಟಿಸಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು ಊಟ, ಉಪಹಾರ, ಯಾತ್ರಾ ಸ್ಥಳದಲ್ಲಿ ತಂಗುವ ವ್ಯವಸ್ಥೆ ಹಾಗೂ ಯಾತ್ರಾ ಸ್ಥಳಗಳಿಗೆ ಪ್ರಯಾಣಿಸಲು ಸ್ಥಳೀಯ ಸಾರಿಗೆ ವ್ಯವಸ್ಥೆ ಹಾಗೂ ತುರ್ತು ವೈದ್ಯಕೀಯ ಸೇವೆ ವ್ಯವಸ್ಥೆಗಳು ಯಾತ್ರಿಗಳಿಗೆ ಈ ಪ್ರವಾಸ ವೇಳೆ ದೊರಕಲಿದೆ.

ಜೀವನದಲ್ಲಿ ಒಮ್ಮೆಯಾದರೂ ಕಾಶಿ ಯಾತ್ರೆಯನ್ನು ಕೈಗೊಳ್ಳಬೇಕು ಎನ್ನುವುದು ಬಹುಪಾಲು ಹಿಂದುಗಳ ಆಸೆಯಾಗಿರುತ್ತದೆ. ಇದನ್ನು ಪೂರೈಸುವ ನಿಟ್ಟಿನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎನ್ನುವುದು ಸಚಿವರ ಆಶಯವಾಗಿತ್ತು. ತಮ್ಮ ಆಶಯಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಎಲ್ಲಾ ರೀತಿಯ ಸಹಕಾರ ನೀಡಿದ್ದಕ್ಕಾಗಿ ಸಚಿವರು ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

ಕಾಶಿಯಲ್ಲಿ ಕರ್ನಾಟಕ – ಭಾರತ್ ಗೌರವ್ ಕಾಶಿ ದರ್ಶನ ಯಾತ್ರಾರ್ಥಿಗಳನ್ನು ಕಾಶಿಯಲ್ಲಿ ಸ್ವಾಗತಿಸಿದ ಸಚಿವೆ ಶಶಿಕಲಾ ಅ ಜೊಲ್ಲೆ ಅವರು ಮೊದಲ ರೈಲು ಯಾತ್ರೆಯ ಬಗ್ಗೆ ಯಾತ್ರಾರ್ಥಿಗಳಿಂದ ಮಾಹಿತಿ ಪಡೆದರು. ಇದೇ ವೇಳೆ ಪ್ರವಾಸಿಗರಿಗೆ ಕಾಯ್ದಿರಿಸಲಾಗುವ ವಸತಿ, ಊಟ ಮತ್ತು ಇನ್ನಿತರೆ ಸೌಲಭ್ಯಗಳನ್ನು ಪರಿಶೀಲಿಸಿದರು. ಹಾಗೆಯೇ ಕಾಶಿಯಲ್ಲಿರುವ ಹನುಮಾನ್ ಘಾಟ್‌ನಲ್ಲಿರುವ ಕರ್ನಾಟಕ ರಾಜ್ಯ ಛತ್ರಕ್ಕೂ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇದಲ್ಲದೆ ಮೊದಲ ರೈಲು ಪ್ರಯಾಣದಲ್ಲಿದ್ದ ಕೆಲವು ಯಾತ್ರಾರ್ಥಿಗಳೊಂದಿಗೆ ಸಚಿವರು ದೂರವಾಣಿ ಮುಖಾಂತರ ಕೂಡ ಮಾತನಾಡಿದ್ದರು. ಸಚಿವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ ಪ್ರಯಾಣಿಕರು ಪ್ರಯಾಣ ಸುಖಕರವಾಗಿದ್ದು, ಅತ್ಯುತ್ತಮ ಸೌಲಭ್ಯ ಒದಗಿಸಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ತಮ್ಮನ್ನು ಸ್ವಾಗತಿಸಲು ಸಚಿವರೇ ಆಗಮಿಸಿರುವುದನ್ನು ಕಂಡು ಹರ್ಷಗೊಂಡ ಯಾತ್ರಿಕರು ಸಚಿವರೊಂದಿಗೆ ಸೆಲ್ಫಿ ತೆಗೆದುಕೊಂಡು ಸಂಭ್ರಮಿಸಿದರು.

ಪುಣ್ಯ ಕ್ಷೇತ್ರಗಳಿಗೆ ಕಡಿಮೆ ಖರ್ಚಿನಲ್ಲಿ ಪ್ರವಾಸ ಕೈಗೊಳ್ಳಲು ಅನುಕೂಲವಾಗುವಂತೆ ಪ್ಯಾಕೇಜುಗಳನ್ನು ರೂಪಿಸುವ ನಿಟ್ಟಿನಲ್ಲಿ ಮುಜರಾಯಿ ಇಲಾಖೆ ಮಹತ್ವದ ಹೆಜ್ಜೆಯನ್ನು ಇಟ್ಟಿರುವುದು ಯಾತ್ರಾರ್ಥಿಗಳಲ್ಲಿ ಸಂತಸವನ್ನುಂಟುಮಾಡಿದೆ.

ಮಹತ್ವಾಕಾಂಕ್ಷಿ ಯೋಜನೆ ಕರ್ನಾಟಕ – ಭಾರತ್ ಗೌರವ್ ಕಾಶಿ ದರ್ಶನ ರೈಲಿಗೆ ಬುಕ್ಕಿಂಗ್ ಈಗಾಗಲೇ ಪ್ರಾರಂಭವಾಗಿದ್ದು, ಐಆರ್‌ಸಿಟಿಸಿ ಹಾಗೂ ಐಟಿಎಂಎಸ್ ವೆಬ್‌ಸೈಟ್‌ಗಳ ಮೂಲಕ ಬುಕಿಂಗ್‌ಗೆ ಅವಕಾಶ ನೀಡಲಾಗಿದ್ದು, ಈಗಾಗಲೇ ಹಲವಾರು ಜನರು ಬುಕಿಂಗ್ ಮಾಡಿಕೊಳ್ಳುತ್ತಿದ್ದಾರೆ. ಈ ಕೆಳಗಿನ ಲಿಂಕ್‌ಗಳ ಮೂಲಕ ಬುಕಿಂಗ್ ಮಾಡಬಹುದಾಗಿದೆ.

**https://www.irctctourism.com/pacakage_description?packageCode=SZKBG01**

**http://itms.kar.nic.in/hrcehome/index.php**



Downloaded From:www.kpscvaani.com








# ಜನಮನ್ನಣೆಗೆ ಪಾತ್ರವಾದ ಕೃಷಿ ಮೇಳ

**ಈ ಬಾರಿಯ ಕೃಷಿ ಮೇಳವನ್ನು ಅಂದಾಜು ಹದಿನೇಳು ಲಕ್ಷಕ್ಕೂ ಹೆಚ್ಚು ಮಂದಿ ವೀಕ್ಷಣೆ ಮಾಡುವ ಮೂಲಕ ಜನಮನ್ನಣೆಗೆ ಪಾತ್ರವಾಯಿತು.**

ರಂಜನ್ ಗೌಡ

ರೈತರ ಪಾಲಿಗೆ ಜೀವನಾಡಿಯಂತಿರುವ ಕೃಷಿ ಮೇಳವು ಭರ್ಜರಿ ಯಶಸ್ಸು ಕಂಡಿತು. ಜಿಕೆವಿಕೆ ಆವರಣದಲ್ಲಿ ನವೆಂಬರ್ ಮೊದಲ ವಾರದಲ್ಲಿ ನಾಲ್ಕು ದಿನಗಳ ಕಾಲ ನಡೆದ ಮೇಳಕ್ಕೆ ಲಕ್ಷಾಂತರ ರೈತ ಬಂಧುಗಳು ಸಾಕ್ಷಿಯಾದರು. ನಾಡಿನ ಮೂಲೆ ಮೂಲೆಗಳಿಂದಲೂ ಈ ಮೇಳಕ್ಕೆ ಆಗಮಿಸಿದ ಜನರು ತಮಗೆ ಬೇಕಾದ ಅಗತ್ಯ ಮಾಹಿತಿಯನ್ನು ಪಡೆದುಕೊಂಡರು. ಕೃಷಿಯಲ್ಲಿ ಆವಿಷ್ಕಾರಗಳು ಎಂಬ ಥೀಮ್‌ನೊಂದಿಗೆ ಈ ವರ್ಷದ ಮೇಳವು ಆಹಾರ ಸಂಸ್ಕರಣೆ, ಅಂಗಾಂಶ ಕೃಷಿ ಬೆಳೆ ರಕ್ಷಣೆ, ನಿಖರವಾದ ಕೃಷಿ ಮತ್ತು ಮಾರುಕಟ್ಟೆ ಪೂರೈಕೆಯಂತಹ ಕ್ಷೇತ್ರಗಳಲ್ಲಿ ಪ್ರಮುಖ ಆಕರ್ಷಣೆಯಾಗಿತ್ತು.

ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು, ಬೃಹತ್ ಮತ್ತು ಸಣ್ಣ ಗಾತ್ರದ ಕೃಷಿ ಯಂತ್ರೋಪಕರಣ ತಯಾರಕರು, ಸರ್ಕಾರಿ, ಅರೇ ಸರ್ಕಾರಿ ಸಂಸ್ಥೆಗಳು, ಅಲ್ಲದೇ ಸರ್ಕಾರೇತರ ಸಂಸ್ಥೆಗಳು ತಾವು ತಯಾರಿಸಿರುವ ಕೃಷಿ ಯಂತ್ರೋಪಕರಣಗಳೊಂದಿಗೆ ಕೃಷಿ ಮೇಳದಲ್ಲಿ ಭಾಗವಹಿಸಿದ್ದವು.

ಈ ವರ್ಷದ ಕೃಷಿ ಮೇಳದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ, ರಾಜ್ಯ ಸರ್ಕಾರದ ಕೃಷಿ ಇಲಾಖೆ, ಜಲಾನಯನ ಅಭಿವೃದ್ಧಿ, ತೋಟಗಾರಿಕೆ, ರೇಷ್ಮೆ, ಅರಣ್ಯ, ಪಶುಸಂಗೋಪನೆ, ಮೀನುಗಾರಿಕೆ, ಕೃಷಿ ಮಾರುಕಟ್ಟೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಕರ್ನಾಟಕ ಹಾಲು ಮಹಾಮಂಡಳಿಗಳ ಸಂಯುಕ್ತ ಆಶ್ರಯದಲ್ಲಿ ಕೃಷಿ ವಿಶ್ವವಿದ್ಯಾನಿಲಯ (ಜಿಕೆವಿಕೆ)ದ ಆವರಣದಲ್ಲಿ ನಡೆಯಿತು. ನವೆಂಬರ್ 3 ರಿಂದ 6 ರವರೆಗೆ 4 ದಿನಗಳ ಕಾಲ "ಕೃಷಿಯಲ್ಲಿ ನವೋದ್ಯಮಗಳು" ಎಂಬ ಘೋಷವಾಕ್ಯದೊಂದಿಗೆ ಕೃಷಿ ಮೇಳವನ್ನು ಆಯೋಜಿಸಲಾಗಿತ್ತು.



Downloaded From:www.kpscvaani.com



**ಮೇಳದಲ್ಲಿ ಗಮನಸೆಳೆದ ಔಷಧೀಯ ಸಸ್ಯಗಳು:**

ಬೆಂಗಳೂರು ಕೃಷಿ ವಿವಿಯ ತಜ್ಞರು ಅಭಿವೃದ್ಧಿ ಪಡಿಸಿದ್ದ ಔಷಧೀಯ ಸಸ್ಯಗಳೂ ಸೇರಿದಂತೆ ಪಶ್ಚಿಮಘಟ್ಟ, ಮಲೆನಾಡು ಹಾಗೂ ಬಯಲು ಸೀಮೆಯಲ್ಲಿ ಅಪರೂಪವಾಗಿ ಲಭಿಸುವ ಔಷಧೀಯ ಸಸ್ಯಗಳು ಈ ಬಾರಿಯ ಕೃಷಿ ಮೇಳದಲ್ಲಿ ಗಮನ ಸೆಳೆದವು. ವನದಲ್ಲಿ 150 ಔಷಧ ಸಸ್ಯಗಳು ಹಾಗೂ 100 ಸುಗಂಧ ದ್ರವ್ಯ ಸಸ್ಯಗಳು ಸುವಾಸನೆ ಬೀರಿದವು. ಹಲವು ಔಷಧೀಯ ಸಸ್ಯಗಳು ರೋಗಕ್ಕೆ ರಾಮಬಾಣ ಎನಿಸಿವೆ. ಅವುಗಳನ್ನು ಜನರು ಒಂದೇ ಸೂರಿನಡಿ ನೋಡುವ ಅವಕಾಶ ಪಡೆದರು. ಮನೆಯ ಎದುರು ಅಥವಾ ಚಾವಣಿಯಲ್ಲಿ ಹೂವಿನ ಕುಂಡಗಳಲ್ಲಿಯೇ ಔಷಧೀಯ ಸಸ್ಯವನ್ನು ಬೆಳೆಸಬಹುದು. ಪ್ರತಿನಿತ್ಯ ಇವುಗಳ ಎಲೆ ಸೇವಿಸಿದರೆ ಆರೋಗ್ಯವಾಗಿ ಇರುವ ಜೊತೆಗೆ ರೋಗ ನಿರೋಧಕ ಶಕ್ತಿ ಹೆಚ್ಚಲಿದೆ ಎಂದು ತಜ್ಞರು ಮೇಳಕ್ಕೆ ಆಗಮಿಸಿದ ಜನರಿಗೆ ಮಾಹಿತಿ ನೀಡುತಿದ್ದರು.

ಸಕ್ಕರೆ ಕಾಯಿಲೆ ನಿಯಂತ್ರಿಸುವ, ರಕ್ತಸ್ರಾವ, ಜ್ವರ ನಿವಾರಕ, ಭೇದಿ ನಿಯಂತ್ರಣ, ಸೊಳ್ಳೆ ನಿರೋಧಕ, ಮೂತ್ರಕೋಶದ ಕಲ್ಲು, ಮೂಲವ್ಯಾಧಿ, ಮಲಬದ್ಧತೆ, ಹೊಟ್ಟೆ ನೋವು, ರಕ್ತದ ಒತ್ತಡ ನಿಯಂತ್ರಣ, ನಿದ್ರಾಹೀನತೆ, ನಿಶ್ಶಕ್ತಿ, ನಪುಂಸಕತೆ, ಜ್ವರ, ಜಂತುನಾಶಕ, ಕೆಮ್ಮು... ಹೀಗೆ ಹಲವು ಕಾಯಿಲೆ ನಿಯಂತ್ರಿಸುವ ಸಾಮರ್ಥ್ಯದ ಔಷಧದ ಗಿಡಗಳಿದ್ದವು. ಅಲ್ಲದೆ, ಸಕ್ಕರೆ ಗಿಡದ ಎಲೆ ಸೇವಿಸಿದರೆ ಸಕ್ಕರೆ ಕಾಯಿಲೆ, ಜೀರ್ಣಕ್ರಿಯೆ, ಚರ್ಮ ಆರೈಕೆ, ಬಾಯಿಹುಣ್ಣು ನಿಯಂತ್ರಿಸಬಹುದು. ದೊಡ್ಡಪತ್ರೆಯಿಂದ ಅಜೀರ್ಣ, ಕಾಲರಾ ಹಾಗೂ ಆಸ್ತಮಾ, ಹಿರೇಮದ್ದಿನ ಗಿಡದಿಂದ ನಿಶ್ಶಕ್ತಿ, ನಿದ್ರಾಹೀನತೆ, ಬಿಳಿಚಿತ್ರಮೂಲದ ಎಲೆ ಸೇವನೆಯಿಂದ ಚರ್ಮರೋಗ, ಅತಿಸಾರ ನಿಯಂತ್ರಣ ಸಾಧ್ಯ ಆಗಲಿದೆ. ಪೊದೆ ಕಾಳುಮೆಣಸನ್ನು ಅಡುಗೆಯಲ್ಲಿ ಬಳಸಬಹುದು. ಇದರಿಂದ ಕೆಮ್ಮು, ಜ್ವರ ನಿಯಂತ್ರಣಕ್ಕೆ ಬರುತ್ತದೆ. ರಂಗುಮಾಲೆ, ಚಿನ್ನಿಮರ, ಆಟಿ ಸೊಪ್ಪು, ನೀಲಿಗಿಡ... ಹೀಗೆ ನಾನಾ ರೀತಿಯ ಗಿಡಗಳನ್ನು ಪ್ರದರ್ಶನಕ್ಕೆ ಇಡಲಾಗಿತ್ತು.

ಸುಗಂಧ ದ್ರವ್ಯದ ಸಸ್ಯಗಳು: 'ಥೈಮ್'ನಿಂದ ಆಹಾರದಲ್ಲಿ ಪರಿಮಳ, 'ಸೇಜ್ ಸಸಿ'ಯಿಂದ ಸಲಾಡ್, ಆಹಾರ ಪದಾರ್ಥಗಳು, ಸುಗಂಧ ದ್ರವ್ಯ, ಕಾಂತಿವರ್ಧಕವನ್ನು, 'ಪನ್ನೀರು' ಸೊಪ್ಪಿನಿಂದ ಸೋಪು ತಯಾರಿಕೆ, 'ರೋಸ್ ಮೇರಿ'ಯನ್ನು ಖಾದ್ಯ ಪದಾರ್ಥಗಳ ತಯಾರಿಕೆಯಲ್ಲಿ ಬಳಸುತ್ತಿದ್ದು, ಮೇಳದಲ್ಲಿ ನೋಡಗರ ಕುತೂಹಲ ಹೆಚ್ಚಿಸಿತು. ಸಿಟ್ರೊನೆಲ್ಲಾ, ಪಾಮರೋಸಾ, ಸ್ಪ್ಯಾನಿಷ್ ಪುದಿನ, ಬರ್ಗಾಮಾಟ್ ಪುದಿನಗಳು ಔಷಧ ವನದಲ್ಲಿ ಕಂಪು ಬೀರಿದವು.

**65 ಸಾವಿರ ರೂ ಬೆಲೆಯ ಡಾಂಗ್ ತಾವ್ ಕೋಳಿ!**

ಸಣ್ಣನೆಯ ಕೊಕ್ಕು, ದಪ್ಪ ಕಾಲುಗಳ ಡಾಂಗ್ ತಾವ್ (ಡ್ರ್ಯಾಗನ್ ಬರ್ಡ್) ಹುಂಜದ ಬೆಲೆ ಕೇಳಿದರೆ ನೀವು ಹೌಹಾರುತ್ತೀರಿ. 5 ರಿಂದ 6 ಕೆ.ಜಿಯಷ್ಟು ತೂಗುವ ಇದರ ಮಾರುಕಟ್ಟೆ ದರ ಬರೋಬ್ಬರಿ 30 ಸಾವಿರ ರೂಗಳು. ಜೋಡಿಗೆ 65 ಸಾವಿರ ಬೆಲೆ ನಿಗದಿಯಾಗಿತ್ತು. ಕೃಷಿ ಮೇಳದಲ್ಲಿ ಸುಮಾರು 15 ಪ್ರಕಾರದ ವಿದೇಶಿ, ಫ್ಯಾನ್ಸಿ ಕೋಳಿಗಳು ನೋಡಗರ ಗಮನ ಸೆಳೆದವು.

ಕೊಲಂಬಿಯನ್ ಲೈವ್ ಬ್ರಹ್ಮ, ಅಮೆರಿಕನ್ ಬ್ರೀಡ್, ಪಾಲಿಶ್ ಕ್ಯಾಬ್, ಜಪಾನಿನ ಒನಗಧಾರಿ ತಳಿಯ ಕೋಳಿ 16–18 ಗರಿಗಳನ್ನು ಹೊಂದಿರುತ್ತದೆ. ಇದರ ಬಾಲ 12 ಮೀಟರ್‌ವರೆಗೆ ಬೆಳೆದರೆ ಒಂದಕ್ಕೆ 30 ಸಾವಿರ ರೂ ಬೆಲೆ

ಕರ್ನಾಟಕ ಸರ್ಕಾರ ರೈತ ಸ್ನೇಹಿ ಕಾರ್ಯಕ್ರಮಗಳನ್ನು ಹೆಚ್ಚು ಮಾಡಲಿದೆ. ಕಳೆದ ವರ್ಷಕ್ಕಿಂತ ಈ ವರ್ಷ 10 ಲಕ್ಷ ರೈತರಿಗೆ ಹೆಚ್ಚಿನ ಸಾಲವನ್ನು ನೀಡುವುದರಿಂದ ಹಿಡಿದು, ಅನೇಕ ಕಾರ್ಯಕ್ರಮಗಳನ್ನು ನಮ್ಮ ಸರ್ಕಾರ ರೂಪಿಸಿದೆ. ರೈತರು ಕೂಡ ವೈಜ್ಞಾನಿಕವಾಗಿ ಚಿಂತಿಸುವುದು, ಹೊಸ ತಳಿಗಳನ್ನು ಪ್ರಯೋಗ ಮಾಡುವುದು, ಉತ್ಪಾದನೆಯನ್ನು ಹೆಚ್ಚಿಸುವುದು ಹಾಗೂ ಸಮಗ್ರ ಕೃಷಿ ಕೈಗೊಳ್ಳಲು ಮುಂದಾಗಬೇಕು. ಹಾಗೂ ಇದಕ್ಕೆ ಕೃಷಿ ವಿವಿ ಮಾರ್ಗದರ್ಶಕವಾಗಬೇಕು. ನಮ್ಮ ಸರ್ಕಾರ ರೈತ ಮತ್ತು ರೈತರ ಮಕ್ಕಳ ಅಭಿವೃದ್ಧಿಗೆ ಬದ್ಧವಾಗಿ ಕೆಲಸ ಮಾಡುತ್ತಿದೆ.

–ಬಸವರಾಜ ಎಸ್ ಬೊಮ್ಮಾಯಿ, ಮುಖ್ಯಮಂತ್ರಿಗಳು






Downloaded From:www.kpscvaani.com



ಬರುತ್ತದೆ. ಇವುಗಳ ತಳಿ ವೃದ್ಧಿ ಮಾಡುವುದಕ್ಕೆ ಸಾಕಾಣಿಕೆ ಮಾಡಬಹುದು. ಪೋಲಿಷ್ ಕ್ಯಾಪ್ ಕೋಳಿಯ ತಲೆಯ ಭಾಗದ ಮೇಲೆ ಬಿಳಿ ಟೊಪ್ಪಿಗೆ ಇರುತ್ತದೆ. ಸಿರಾಮ್ ವಿಶ್ವದ ಅತಿ ಚಿಕ್ಕ ಕೋಳಿಯಾಗಿದೆ. ಫ್ಯಾನ್ಸಿ ಕೋಳಿಗಳಿಗೆ ಬೇರೆ ರಾಜ್ಯಗಳಲ್ಲಿ ಹೆಚ್ಚು ಬೇಡಿಕೆ ಇದೆ. ಇವುಗಳ ತಳಿ ಅಭಿವೃದ್ಧಿ ಮಾಡುವವರ ಸಂಖ್ಯೆ ಬಹಳ ಕಡಿಮೆ. ಆದರೆ ಇವು ಎಲ್ಲಾ ಹವಾಮಾನಕ್ಕೂ ಹೊಂದಿಕೊಳ್ಳುವಂತಹ ಕೋಳಿಗಳಾಗಿವೆ.

**ರೈತರ ಯಶೋಗಾಥೆ ಅನಾವರಣ**

120 ಸಾಧಕ ರೈತರನ್ನು ಕೃಷಿ ವಿಶ್ವವಿದ್ಯಾಲಯ ಗುರುತಿಸಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪ್ರಶಸ್ತಿ ನೀಡಿದೆ. ಹಾಸನ ಜಿಲ್ಲೆ ಹೊಳೆನರಸಿಪುರ ತಾಲ್ಲೂಕಿನ ಎಂ.ಕವಿತಾ ಅವರು 9 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಅಳವಡಿಸಿಕೊಂಡು ಯಶಸ್ಸು ಗಳಿಸಿದ್ದಾರೆ. ಅವರ ಜಮೀನಿನಲ್ಲಿ ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಹಾಗೂ ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ದಾಳಿಂಬೆ, ಚಕೋತಾ, ಮೂಸಂಬಿ, ನಿಂಬೆ, ಪಪ್ಪಾಯ, ಸಪೋಟ, ಸೀತಾಫಲ, ಬೆಣ್ಣೆಹಣ್ಣು, ಸೀಬೆ, ಪನ್ನೇರಳೆ, ಜಂಬು ನೇರಳೆ, ಅಂಜೂರ, ವಿವಿಧ ಬಗೆಯ ತರಕಾರಿಗಳು ಮತ್ತು ಹೂವಿನ ಬೆಳೆಗಳು ನಳನಳಿಸುತಿದ್ದವು.

**ಕೈಹಿಡಿದ ತರಕಾರಿ ಬೆಳೆ:**

ದೊಡ್ಡಬಳ್ಳಾಪುರ ಲಕ್ಷ್ಮೀದೇವರಪುರದ 'ವಿಕ್ರಮ್ ಅವರು 24 ಎಕರೆಯಲ್ಲಿ ತೋಟಗಾರಿಕಾ ಬೆಳೆಗಳಾದ ಮಾವು, ದ್ರಾಕ್ಷಿ, ಸೀಬೆ, ಸಪೋಟ, ನೇರಳೆ, ಹಲಸು, ಡ್ರ್ಯಾಗನ್ ಫ್ರೂಟ್, ನಿಂಬೆ, ದಾಳಿಂಬೆ, ಬಾಳೆ, ಪರಂಗಿ, ಮೂಸಂಬಿ, ಸೀತಾಫಲ, ಚಕೋತ, ಅಂಜೂರ, ನೆಲ್ಲಿ, ಕಿತ್ತಳೆ, ಅನಾನಸ್ ಬೆಳೆದು ಅವುಗಳಿಗೆ ವೈಜ್ಞಾನಿಕ ಮಾರುಕಟ್ಟೆ ಕಲ್ಪಿಸಿಕೊಂಡಿದ್ದಾರೆ. ಜತೆಗೆ ತರಕಾರಿ ಬೆಳೆಗಳಾದ ಸೌತೆಕಾಯಿ, ಕೊತ್ತಂಬರಿ, ಹೂಕೋಸು, ಆಲೂಗಡ್ಡೆ, ಟಮೋಟ, ಹೀರೇಕಾಯಿ, ಹಾಗಲಕಾಯಿ, ಬೂದುಗುಂಬಳ, ಮೂಲಂಗಿ, ಕುಂಬಳ, ನುಗ್ಗೆ, ಗಡ್ಡೆಕೋಸು ಮತ್ತು ಹೂವಿನ ಬೆಳೆಗಳಾದ ಚೆಂಡುಹೂವು, ಸೇವಂತಿಗೆ ಬೆಳೆಯುತ್ತಿದ್ದಾರೆ.

**ಕೋಳಿ ಸಾಕಣೆ: ಲಕ್ಷಾಂತರ ಆದಾಯ**

ಇನ್ನು ದೊಡ್ಡಬಳ್ಳಾಪುರ ತಾಲ್ಲೂಕಿನ ತಗಳವಾರದ ವೆಂಕಮ್ಮ ಅವರು ಕೋಳಿ ಸಾಕಣೆಯನ್ನೇ ಉಪ ಕಸುಬು ಮಾಡಿಕೊಂಡು ಲಕ್ಷಾಂತರ ರೂಪಾಯಿ ಆದಾಯಗಳಿಸುತ್ತಿದ್ದಾರೆ. ರಾಗಿ, ಜೋಳದ ಬೆಳೆ ಕೈಕೊಟ್ಟಾಗ ಕೋಳಿ ಸಾಕಣೆ ಅವರ ಕೈಹಿಡಿದಿದೆ. ಇವರು 15 ಸಾವಿರ ಕೋಳಿ ಸಾಕಣೆ ಮಾಡಿದ್ದು, ನಿತ್ಯ 6 ಸಾವಿರ ಮೊಟ್ಟೆ ಮಾರುತ್ತಿದ್ದಾರೆ. ಇದರಿಂದ ವಾರ್ಷಿಕ ರೂ 6 ಲಕ್ಷ ಆದಾಯ ಗಳಿಸುತ್ತಿದ್ದಾರೆ. ಫಾರಂ ತಳಿ ಕೋಳಿ ಜತೆಗೆ ನಾಟಿ ಕೋಳಿ ಸಾಕಣೆ ಆದಾಯ ಮೂಲವಾಗಿದೆ ಎಂದು ವೆಂಕಮ್ಮ ಅವರು ಹೇಳಿತ್ತಾರೆ. ಇವರು ಖಾಸಗಿ ಅರಣ್ಯವನ್ನು ಬೆಳೆಸಿದ್ದು, ಮಹೋಗನಿ, ಹುಣಸೆ, ಸಿಲ್ವರ್ ಓಕ್, ತೇಗ, ಹಲಸು, ಸುಬಾಬುಲ್, ನೇರಳೆ ಮರಗಳು ಬೃಹತ್ ಆಗಿ ಬೆಳೆದಿವೆ. ಭವಿಷ್ಯದಲ್ಲಿ ಈ ಮರಗಳು ಅವರಿಗೆ ಒಳ್ಳೆಯ ವರಮಾನ ನೀಡಲಿವೆ.

**ಕೃಷಿ ಮೇಳ: ಜಾನುವಾರು ಸ್ವಚ್ಛತೆಗೆ ಬಂತು ಯಂತ್ರ**

ಜಾನುವಾರುಗಳ ಸ್ವಚ್ಛತೆ, ಆರೋಗ್ಯ ಕಾಪಾಡಲು, ವಿಶ್ರಾಂತಿಗೆ ನೆರವಾಗಲು ಯಂತ್ರವೊಂದು ಬಂದಿದೆ. ಕೃಷಿ ಮೇಳದಲ್ಲಿ ಯಂತ್ರದ ಆವಿಷ್ಕಾರವು ಗಮನ ಸೆಳೆಯಿತು. ಜಾನುವಾರುಗಳು ಮೇವಿಗೆ ದಿನವಿಡೀ ಅಲೆದಾಡಿ ಕೊಟ್ಟಿಗೆಗೆ ಬಂದು ವಿರಮಿಸುತ್ತವೆ. ಅವುಗಳ ಮೈ, ಕಾಲು, ಕಿವಿ, ಹೊಟ್ಟೆ ಭಾಗದಲ್ಲಿ ಕೆಸರು, ಸೆಗಣಿ, ಗಂಜಲ ಮೆತ್ತಿಕೊಂಡಿರುವ ಕಾರಣಕ್ಕೆ ವಿಶ್ರಾಂತಿ ಸಾಧ್ಯವಾಗುವುದಿಲ್ಲ. ಈ ಯಂತ್ರದಿಂದ ಕ್ಷಣದಲ್ಲಿ ಹಸುಗಳ ಮೈ ಸ್ವಚ್ಛ ಆಗಲಿದೆ. ಟರ್ಕಿ ದೇಶದ ತಜ್ಞರು ಜಾನುವಾರುಗಳ ಮೈ ಸ್ವಚ್ಛಗೊಳಿಸುವ ರಬ್ಬಿಂಗ್ ಯಂತ್ರ ಅಭಿವೃದ್ಧಿಪಡಿಸಿ 'ಇ ಬ್ರಷ್' ಹಾಗೂ 'ಎಂ ಬ್ರಷ್' ಎಂಬ ಹೆಸರಿನಲ್ಲಿ ಮಾರುಕಟ್ಟೆಗೆ ಪರಿಚಯಿಸಿದ್ದಾರೆ.

**ಕೃಷಿ ಮೇಳಕ್ಕೆ ಸಂಭ್ರಮದ ತೆರೆ: 17 ಲಕ್ಷ ಜನರಿಂದ ವೀಕ್ಷಣೆ**

ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದ ನಂತರ ಮಾತನಾಡಿದ ಕುಲಪತಿ ಡಾ.ಎಸ್.ವಿ.ಸುರೇಶ್, 'ಮೇಳಕ್ಕೆ ನಾಲ್ಕು ದಿನಗಳಲ್ಲಿ ಸುಮಾರು 17 ಲಕ್ಷ ಜನರು ಭೇಟಿ ನೀಡಿದ್ದರು. ಸುಮಾರು 9 ಕೋಟಿ ರೂಗೂ ಹೆಚ್ಚಿನ ವಹಿವಾಟು ನಡೆದಿದೆ' ಎಂದು ಹೇಳಿದರು. 'ಮುಂದಿನ ದಿನಗಳಲ್ಲಿ ರೈತಸ್ನೇಹಿ ಸಂಶೋಧನೆಗಳನ್ನು ಕೃಷಿಕರ ಹೊಲಗಳಲ್ಲಿಯೂ ಕೈಗೊಳ್ಳುವ ಮೂಲಕ ನಮ್ಮ ಆವರಣದಿಂದ ಹೊರಗೂ ಕೃಷಿ ಕಾರ್ಯ ಚಟುವಟಿಕೆ ನಡೆಸಲಾಗುವುದು' ಎಂದು ಹೇಳಿದರು. 'ವಿವಿಧ ಪ್ರಶಸ್ತಿಗಳನ್ನು ಪಡೆದ ಪ್ರಗತಿಪರ ರೈತರು, ತಂತ್ರಜ್ಞಾನಗಳು ಮತ್ತು ಆವಿಷ್ಕಾರಗಳನ್ನು ಇತರೆ ರೈತರಿಗೂ ತಲುಪಿಸುವ ಮೂಲಕ ಕೃಷಿ ವಿಶ್ವವಿದ್ಯಾಲಯದ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸಬೇಕು' ಎಂದು ಮನವಿ ಮಾಡಿದರು.

ಮೇಳದಲ್ಲಿ ಸಾವಯವ ಕೃಷಿ ಪದ್ಧತಿ, ರೋಗ ನಿರ್ವಹಣೆ, ಸಮಗ್ರ ಪೋಷಕಾಂಶಗಳು, ಹನಿ ಹಾಗೂ ತುಂತುರು ನೀರಾವರಿ ಪದ್ಧತಿ, ಮಳೆನೀರು ಸಂಗ್ರಹ, ಸಿರಿಧಾನ್ಯ ಹಾಗೂ ಅವುಗಳ ಮಹತ್ವ ಇವೇ ಮುಂತಾದ ವಿಷಯಗಳ ಕುರಿತು ತಜ್ಞರಿಂದ ರೈತರಿಗೆ ಮಾಹಿತಿಯನ್ನು ನೀಡಲಾಯಿತು.

ಕೃಷಿಯಲ್ಲಿ ಡ್ರೋನ್ ಬಳಕೆ, ಕೊಯ್ಲೋತ್ತರ ತಾಂತ್ರಿಕತೆ, ಕೃಷಿ ಉತ್ಪನ್ನ ಸಂಸ್ಕರಣೆ, ಬಿತ್ತನೆ ಬೀಜ ಪರೀಕ್ಷೆ, ಆಟೋಮೇಟೆಡ್ ಕೃಷಿ ಯಂತ್ರೋಪಕರಣ, ಕೃಷಿಯಲ್ಲಿ ನೂತನ ಮಾಹಿತಿ ತಂತ್ರಜ್ಞಾನ ಇವೇ ಮುಂತಾದ ಕೃಷಿ ತಂತ್ರಜ್ಞಾನಗಳನ್ನು ರೈತರಿಗೆ ಪರಿಚಯಿಸುವ ನಿಟ್ಟಿನಲ್ಲಿ ಪ್ರಾತ್ಯಕ್ಷಿಕೆಯನ್ನು ಪ್ರದರ್ಶಿಸಲಾಗಿತ್ತು. ರಾಜ್ಯದ ಕೆಲವು ಕಡೆ ಹಸು ಮತ್ತು ದನಗಳಿಗೆ ಚರ್ಮಗಂಟು ರೋಗ ಕಾಣಿಸಿಕೊಂಡಿರುವ ಕಾರಣ ಈ ಬಾರಿಯ ಮೇಳದಲ್ಲಿ ಹಸುಗಳ ಪ್ರದರ್ಶನವನ್ನು ಏರ್ಪಡಿಸಲಾಗಿರಲಿಲ್ಲ.


Downloaded From:www.kpscvaani.com




# ಕನ್ನಡದ ರತ್ನನಿಗೆ 'ಕರ್ನಾಟಕ ರತ್ನ' ಪ್ರಶಸ್ತಿ



ಧಾರಿಣಿ

ವಿಧಾನಸೌಧದ ಮೆಟ್ಟಿಲುಗಳ ಮೇಲೆ ನವೆಂಬರ್ 1 ರಂದು ಡಾ.ಪುನೀತ್ ರಾಜ್‌ಕುಮಾರ್‌ಗೆ ಮರಣೋತ್ತರವಾಗಿ ರಾಜ್ಯದ ಸರ್ವೋಚ್ಛ ನಾಗರಿಕ ಗೌರವವಾದ **'ಕರ್ನಾಟಕ ರತ್ನ'** ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಪುನೀತ್ ಅವರ ತಂದೆ, ನಟಸಾರ್ವಭೌಮ ಡಾ. ರಾಜ್‌ಕುಮಾರ್ ಅವರಿಗೆ **'ಕರ್ನಾಟಕ ರತ್ನ'** ಪ್ರಶಸ್ತಿಯನ್ನು ವಿಧಾನಸೌಧದ ಮೆಟ್ಟಿಲುಗಳ ಮೇಲೆಯೇ ಪ್ರದಾನ ಮಾಡಲಾಗಿತ್ತು. 30 ವರ್ಷಗಳ ನಂತರ ಇದೇ ಪ್ರಶಸ್ತಿಗೆ ಪುನೀತ್ ಭಾಜನರಾಗಿದ್ದಾರೆ. ಇಡೀ ಕರ್ನಾಟಕವೇ ಮೆಚ್ಚಿದ ರಾಜಕುಮಾರನಾದ ಪುನೀತ್ ರಾಜ್‌ಕುಮಾರ್‌ಗೆ ಮರಣೋತ್ತರವಾಗಿ ನೀಡಲಾದ ಪ್ರಶಸ್ತಿ ಸಮಾರಂಭವನ್ನು ಅಸಂಖ್ಯಾತ ಜನರು ಕಣ್ತುಂಬಿಕೊಂಡರು.

ಪುನೀತ್ ರಾಜ್‌ಕುಮಾರ್ ಅವರು ಕೇವಲ ನಟನಾಗಿ ಮಾತ್ರ ಜನಮನ ಗೆದ್ದವರಲ್ಲ. ಅವರು ಅತಿ ಚಿಕ್ಕ ವಯಸ್ಸಿನಲ್ಲೇ ಅನೇಕ ಸಾಮಾಜಿಕ ಕೆಲಸಗಳನ್ನು ಮಾಡುವ ಮೂಲಕ ಯುವ ಜನತೆಗೆ ಮಾದರಿಯಾಗಿದ್ದರು. ಹಾಗಾಗಿ ಅವರು ಕಲಾಕ್ಷೇತ್ರ ಮತ್ತು ಸಮಾಜಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಅವರಿಗೆ ಸರ್ಕಾರವು **'ಕರ್ನಾಟಕ ರತ್ನ'** ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



Downloaded From:www.kpscvaani.com



> ಪುನೀತ್ ರಾಜ್‌ಕುಮಾರ್‌ಗೆ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡುವ ಅವಕಾಶ ನನಗೆ ದೊರಕಿದುದು ನನ್ನ ಸೌಭಾಗ್ಯ, ಹಾಗೂ ಸರ್ಕಾರದ ಭಾಗ್ಯ ಕೂಡ. ರಾಜ್ಯದೆಲ್ಲಡೆ ಪುನೀತ್‌ಗೆ ಅಭಿಮಾನಿಗಳ ಅಪಾರ ಬಳಗವೇ ಇದೆ. ಕನ್ನಡ ಜನರಿಗೆ ನಿಮ್ಮ ಮೇಲೆ ಇರುವ ಪ್ರೀತಿ ಮತ್ತು ಅಭಿಮಾನಕ್ಕಾಗಿಯಾದರೂ ಪುನೀತ್ ಮತ್ತೆ ನಮ್ಮ ಕರುನಾಡಲ್ಲಿ ಹುಟ್ಟಿ ಬರಲಿ ಎಂದು ಆಶಿಸುತ್ತೇನೆ. ಅಪ್ಪು ನಮ್ಮ ನಡುವೆಯೇ ಇದ್ದಾರೆ. ಎಲ್ಲರ ಮನದಲ್ಲಿ ನೆಲೆಸಿದ್ದಾರೆ. ಕರ್ನಾಟಕದ ರತ್ನನೊಬ್ಬನಿಗೆ ಕರ್ನಾಟಕ ರತ್ನ ಪ್ರಶಸ್ತಿ ನೀಡಿರುವುದು ನಾಡಿನ ಹೆಮ್ಮೆ.
>
> –ಬಸವರಾಜ ಎಸ್ ಬೊಮ್ಮಾಯಿ

ಅಭಿಮಾನಿಗಳಿಂದ ಪುನೀತ್ ಅವರಿಗೆ ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿ ನೀಡಬೇಕು ಎಂಬ ಒತ್ತಾಯ ಕೇಳಿಬಂತು. ಅದಕ್ಕೆ ಮುಖ್ಯಮಂತ್ರಿ ಅವರು ಕೂಡ ಅಷ್ಟೇ ಶೀಘ್ರವಾಗಿ ಸಮ್ಮತಿಯನ್ನು ಸೂಚಿಸಿದರು. ಪುನೀತ್ ಅಗಲಿ ಒಂದು ವರ್ಷ ಕಳೆದ ಹಿನ್ನೆಲೆಯಲ್ಲಿ ರಾಜ್ ಕುಟುಂಬದವರು ಹಮ್ಮಿಕೊಂಡಿದ್ದ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಅವರು ಪುನೀತ್ ಅವರಿಗೆ ನವೆಂಬರ್ 1 ರಂದು ಮರಣೋತ್ತರವಾಗಿ 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ನೀಡಲಾಗುವುದೆಂದು ಘೋಷಣೆ ಮಾಡಿದರು.

ಘೋಷಣೆ ಮಾಡಿದಂತೆ ಅಂದು ವಿಧಾನಸೌಧದ ಮೆಟ್ಟಿಲ ಮೇಲೆ ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಅಶ್ವಿನಿ ಅವರಿಗೆ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು 'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಪ್ರದಾನ ಮಾಡಿ



ಗೌರವಿಸಿದರು. ಕರುನಾಡಿನ ಯುವರತ್ನ, ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರಿಗೆ ಕನ್ನಡ ರಾಜ್ಯೋತ್ಸವದ ದಿನದಂದು ಮರಣೋತ್ತರವಾಗಿ ನಾಡಿನ ಅತ್ಯುನ್ನತ ನಾಗರಿಕ ಪ್ರಶಸ್ತಿ ಸಂದಿರುವುದು ಅಭಿಮಾನಿಗಳಿಗೆ ಅತ್ಯಂತ ಸಂತೋಷವನ್ನುಂಟುಮಾಡಿತು.

'ಕರ್ನಾಟಕ ರತ್ನ' ಪ್ರಶಸ್ತಿಯನ್ನು ಯಾವುದೇ ಕ್ಷೇತ್ರದಲ್ಲಿ ಅಸಾಧಾರಣ ಕೊಡುಗೆಯನ್ನು ನೀಡಿದ ವ್ಯಕ್ತಿಗೆ ನೀಡಿ ಗೌರವಿಸಲಾಗುತ್ತದೆ. 1991 ರಿಂದ ಆರಂಭಿಸಲಾದ ಈ ಪ್ರಶಸ್ತಿಯನ್ನು ಮೊದಲ ಬಾರಿಗೆ 1992 ರಲ್ಲಿ ರಾಷ್ಟ್ರಕವಿ ಕುವೆಂಪು ಮತ್ತು ಡಾ. ರಾಜ್‌ಕುಮಾರ್ ಅವರಿಗೆ ನೀಡಿ ಗೌರವಿಸಲಾಯಿತು. ಇದುವರೆವಿಗೆ 8 ಸಾಧಕರಿಗೆ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಲಾಗಿದ್ದು, ಪುನೀತ್ ರಾಜ್‌ಕುಮಾರ್ ಈ ಪ್ರಶಸ್ತಿ ಪಡೆದ 9 ನೇ ವ್ಯಕ್ತಿಯಾಗಿದ್ದಾರೆ. 2009 ರಲ್ಲಿ ಡಾ.ಡಿ. ವೀರೇಂದ್ರ ಹೆಗ್ಗಡೆ ಅವರಿಗೆ ನೀಡಿದ 13 ವರ್ಷಗಳ ನಂತರ ಕರ್ನಾಟಕ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಕರ್ನಾಟಕ ರತ್ನ ಪ್ರಶಸ್ತಿಯು ಆಕರ್ಷಣೀಯ ಪ್ರಶಸ್ತಿ ಫಲಕ, ಪ್ರಶಸ್ತಿ ಪತ್ರ, ಹಾಗೂ ಕರ್ನಾಟಕ ಸರ್ಕಾರದ ಲಾಂಛನವುಳ್ಳ 50 ಗ್ರಾಂ ತೂಕವುಳ್ಳ ಚಿನ್ನದ ಪದಕವನ್ನು ಹೊಂದಿರುತ್ತದೆ.

ಸರ್ಕಾರದವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಪ್ರಶಸ್ತಿ ಸಮಾರಂಭವನ್ನು ಅದ್ದೂರಿಯಾಗಿ ಏರ್ಪಡಿಸಿತ್ತು. ಆದರೆ ಮಳೆಯ ಕಾರಣ ಸಮಾರಂಭವನ್ನು ಬೇಗ ಮುಗಿಸಬೇಕಾಗಿ ಬಂತು. ಒಂದು ರೀತಿಯಲ್ಲಿ ಪುನೀತ್‌ಗೆ ವರುಣರಾಯನು ಆಶೀರ್ವದಿಸಿದಂತಿತ್ತು. ಅಲ್ಲದೆ ಇನ್ನೊಂದು ಸೋಜಿಗದ ಸಂಗತಿಯೆಂದರೆ ಡಾ.ರಾಜ್‌ಕುಮಾರ್ ಅವರಿಗೆ ಈ ಪ್ರಶಸ್ತಿಯನ್ನು ನೀಡುವ ಸಂದರ್ಭದಲ್ಲೂ ಮಳೆ ಬಂದಿತ್ತು ಎಂದು ರಾಜ್‌ಕುಮಾರ್ ಕುಟುಂಬದವರು ನೆನಪಿಸಿಕೊಂಡರು. ಮಳೆ ಸುರಿಯುತಿದ್ದರೂ ಕೂಡ ಅಭಿಮಾನಿಗಳು ತಮ್ಮ ಸ್ಥಳವನ್ನು ಬಿಟ್ಟು ಕದಲಲ್ಲಿ. ಮಳೆಯಲ್ಲಿ ನೆನೆಯುತ್ತಲೇ ಪುನೀತ್ ರಾಜ್‌ಕುಮಾರ್‌ಗೆ ಹಾಕುತ್ತಿದ್ದ ಜೈಕಾರ ಮುಗಿಲು ಮುಟ್ಟಿತ್ತು. ವಿಧಾನಸೌಧ ಮತ್ತು ಹೈಕೋರ್ಟ್ ನಡುವಿನ ರಸ್ತೆ ತುಂಬಾ ಪುನೀತ್ ಅಭಿಮಾನಿಗಳಿಂದ ತುಂಬಿ ತುಳುಕಿತ್ತು.



Downloaded From:www.kpscvaani.com



ಸಮಾರಂಭದಲ್ಲಿ ತಮಿಳು ಚಿತ್ರರಂಗದ ಖ್ಯಾತ ನಟ ರಜನಿಕಾಂತ್, ತೆಲುಗು ಚಿತ್ರರಂಗದ ಖ್ಯಾತ ನಟ ಜೂನಿಯರ್ ಎನ್‌ಟಿಆರ್, ಇನ್ಫೋಸಿಸ್ ಫೌಂಡೇಶನ್ ಮುಖ್ಯಸ್ಥೆಯಾದ ಸುಧಾಮೂರ್ತಿ, ಪುನೀತ್ ಸಹೋದರರಾದ ನಟ ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಸುನಿಲ್ ಕುಮಾರ್, ಆರ್.ಅಶೋಕ್, ಡಾ.ಸುಧಾಕರ್, ವಿ ಸೋಮಣ್ಣ, ಬೈರತಿ ಬಸವರಾಜ್, ಬಿ.ಸಿ.ನಾಗೇಶ್, ಮುನಿರತ್ನ ಅವರು ಸೇರಿದಂತೆ ರಾಜ್ಯ ಸರ್ಕಾರದ ಸಚಿವರುಗಳು, ಶಾಸಕರು, ಹಿರಿಯ ಅಧಿಕಾರಿಗಳು, ಡಾ.ರಾಜ್ ಕುಟುಂಬದ ಸದಸ್ಯರು ಹಾಗೂ ಅಪಾರ ಅಭಿಮಾನಿಗಳು ನೆರೆದಿದ್ದರು.

ಸಮಾರಂಭದಲ್ಲಿ ಮಾತನಾಡಿದ ಖ್ಯಾತ ನಟ ರಜನಿಕಾಂತ್ ಅವರು ಅಪ್ಪು ದೇವರ ಮಗು ಎಂದು ಹೇಳಿದರು. ಒಬ್ಬ ನಟ ಕೇವಲ ಕ್ಯಾಮರಾದಿಂದ ಜನರ ಮನ ಗೆಲ್ಲಲು ಸಾಧ್ಯವಿಲ್ಲ. ಆತ ನಿಜ ಜೀವನದಲ್ಲಿ ಹೇಗೆ ಬಾಳುತ್ತಾನೆ, ತನ್ನ ಚಿತ್ರಗಳಲ್ಲಿ ಯಾವ ಸಂದೇಶ ನೀಡುತ್ತಾನೆ, ಎಷ್ಟು ಪ್ರೀತಿ ಹಂಚುತ್ತಾನೆ ಎಂಬುದು ಮುಖ್ಯವಾಗುತ್ತದೆ. ಅಪ್ಪು ಡಾ. ರಾಜ್‌ಕುಮಾರ್ ಅವರ ಮಗನಾಗಿರುವುದಕ್ಕೆ ಇಷ್ಟೊಂದು ಅಭಿಮಾನಿಗಳಿರುವುದಲ್ಲ. ಆತನ ಮಾನವೀಯ ಗುಣ, ಧಾರಾಳತನ, ಹೃದಯ ಶ್ರೀಮಂತಿಕೆಯೇ ಆತನ ಅಭಿಮಾನಿ ಬಳಗವನ್ನು ಹೆಚ್ಚಾಗಿಸಿದೆ. ಎಡಗೈಯಲ್ಲಿ ಕೊಟ್ಟಿದ್ದು, ಬಲಗೈಗೆ ಗೊತ್ತಾಗದಂತೆ ಅವರು ದಾನ ಧರ್ಮ ಮಾಡಿದ್ದಾರೆ. ಅಪ್ಪು ದೇವರ ಮಗು, ಹಾಗಾಗಿ ನಮ್ಮ ಜೊತೆ ಸ್ವಲ್ಪ ಕಾಲ ಇದ್ದು ಮತ್ತೆ ದೇವರ ಬಳಿಗೆ ಹೋಗಿ ಸೇರಿಕೊಂಡಿದ್ದಾನೆ ಎಂದು ಹೇಳಿದರು.

ತೆಲುಗಿನ ಖ್ಯಾತ ನಟ ಜೂನಿಯರ್ ಎನ್‌ಟಿಆರ್ ಅವರು ಮಾತನಾಡಿ, ಅಪ್ಪು ಅವರ ನಗುವಿನಲ್ಲಿದ್ದ ಶ್ರೀಮಂತಿಕೆಯನ್ನು ನಾನು ಎಲ್ಲಿಯೂ ನೋಡಿಲ್ಲ. ಅದಕ್ಕೆ ಅವರನ್ನು ನಾನು ನಗುವಿನ ಒಡೆಯ ಎನ್ನುತ್ತೇನೆ. ಇಡೀ ಕರ್ನಾಟಕ ರಾಜ್ಯವೇ ಮೆಚ್ಚಿರುವ ರಾಜಕುಮಾರನೀತ. ಅವರೊಬ್ಬ ಉತ್ತಮ ಮಾನವೀಯ ಮೌಲ್ಯಗಳ ಪ್ರತೀಕ. ನಾನು ಈ ವೇದಿಕೆಗೆ ಬಂದಿರುವುದು ನನ್ನ ಸ್ಥಾನದಿಂದಲ್ಲ, ನಾನು ಪುನೀತನ ಆತ್ಮೀಯ ಗೆಳೆಯನಾಗಿ ಬಂದಿದ್ದೇನೆ ಎಂದಾಗ ಅಭಿಮಾನಿಗಳ ಹರ್ಷೋದ್ಗಾರ ಮೊಳಗಿತು.

ಅಂತೂ ಭಾರಿ ಮಳೆಯ ನಡುವೆಯೂ ಪ್ರಶಸ್ತಿ ಸಮಾರಂಭವು ಯಶಸ್ವಿಯಾಗಿ ಜರುಗಿತು. ಸಮಾರಂಭವನ್ನು ಕಣ್ತುಂಬಿಕೊಳ್ಳಲು ಮಳೆಯನ್ನು ಲೆಕ್ಕಿಸದೆ ಅಭಿಮಾನಿಗಳು ನಿಂತಿದ್ದರೆ, ಗಣ್ಯರು ಕೂಡ ಮಳೆಯಲ್ಲೇ ಪುನೀತ್ ಅವರ ವ್ಯಕ್ತಿತ್ವವನ್ನು ಗುಣಗಾನ ಮಾಡಿದರು. ಇನ್ಫೋಸಿಸ್ ಫೌಂಡೇಶನ್ ಮುಖ್ಯಸ್ಥೆಯಾದ ಸುಧಾಮೂರ್ತಿ ಅವರು ಸರ್ಕಾರದ ಪರವಾಗಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರನ್ನು ಸನ್ಮಾನಿಸಿದರು.

ಪ್ರಶಸ್ತಿ ಸಮಾರಂಭದ ಕಾರ್ಯಕ್ರಮಕ್ಕೂ ಮೊದಲು ಖ್ಯಾತ ಚಲನಚಿತ್ರ ಗಾಯಕರಾದ ವಿಜಯ್ ಪ್ರಕಾಶ್ ಅವರು ಪುನೀತ್ ರಾಜ್‌ಕುಮಾರ್ ಅವರ ಸಿನಿಮಾದ ಹಾಡುಗಳನ್ನು ಹೇಳಿ ನೆರದಿದ್ದ ಜನರನ್ನು ರಂಜಿಸಿದರು. ■

**ಈವರೆಗೆ ಕರ್ನಾಟಕ ರತ್ನ ಪ್ರಶಸ್ತಿಗೆ ಭಾಜನರಾದ ಗಣ್ಯರು**

| ಕ್ರ.ಸಂ | ಪ್ರಶಸ್ತಿಗೆ ಭಾಜನರಾದ ಗಣ್ಯರು | ಕ್ಷೇತ್ರ | ವರ್ಷ |
|---|---|---|---|
| 1. | ರಾಷ್ಟ್ರಕವಿ ಕುವೆಂಪು | ಸಾಹಿತ್ಯ | 1992 |
| 2. | ಡಾ.ರಾಜ್‌ಕುಮಾರ್ | ಚಲನಚಿತ್ರ | 1992 |
| 3. | ಶ್ರೀ ಎಸ್. ನಿಜಲಿಂಗಪ್ಪ | ರಾಜಕೀಯ | 1999 |
| 4. | ಪ್ರೊ.ಸಿ.ಎನ್.ಆರ್.ರಾವ್ | ವಿಜ್ಞಾನ | 2000 |
| 5. | ಪಂ.ಭೀಮಸೇನ್ ಜೋಶಿ | ಸಂಗೀತ | 2004 |
| 6. | ಡಾ.ಶ್ರೀ ಶ್ರೀ ಶ್ರೀ ಶಿವಕುಮಾರ್ ಸ್ವಾಮೀಜಿಗಳು | ಸಮಾಜಸೇವೆ | 2006 |
| 7. | ಡಾ.ದೇ.ಜವರೇಗೌಡ | ಸಾಹಿತ್ಯ | 2008 |
| 8. | ಡಾ.ಡಿ.ವೀರೇಂದ್ರ ಹೆಗ್ಗಡೆ | ಸಮಾಜ ಸೇವೆ, ಮತ್ತು ಗ್ರಾಮೀಣ ಅಭಿವೃದ್ಧಿ | 2009 |

> ಕರ್ನಾಟಕ ರತ್ನ ಪ್ರಶಸ್ತಿಯನ್ನು ಅಪ್ಪ ಮತ್ತು ಮಗ ಇಬ್ಬರೂ ಪಡೆದಿರುವುದು ಈ ಪ್ರಶಸ್ತಿಯ ಪ್ರಮುಖ ವಿಶೇಷತೆಯಾಗಿದೆ. ಹಾಗೆಯೇ ಡಾ.ರಾಜ್‌ಕುಮಾರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದ ಸ್ಥಳದಲ್ಲೇ ಅಂದರೆ ವಿಧಾನಸೌಧದ ಮೆಟ್ಟಿಲುಗಳ ಮೇಲೆಯೇ 30 ವರ್ಷಗಳ ನಂತರ ಮರಣೋತ್ತರವಾಗಿ ಡಾ.ಪುನೀತ್ ರಾಜ್‌ಕುಮಾರ್ ಅವರಿಗೂ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.



Downloaded From:www.kpscvaani.com



## ನವೆಂಬರ್ 1 ರಿಂದ ಮರು ಜಾರಿಗೊಂಡ

# ಯಶಸ್ವಿನಿ ಯೋಜನೆ

**ಕೆ.ಟಿ.ರಮ್ಯ / ಎಸ್.ಮಂಜುಳ**

**ರಾಜ್ಯದೆಲ್ಲೆಡೆಯಿಂದ ರೈತರು ಮತ್ತು ಸಹಕಾರ ಸದಸ್ಯರು ಬೇಡಿಕೆ ಸಲ್ಲಿಸಿದ ಹಿನ್ನಲೆಯಲ್ಲಿ ಯಶಸ್ವಿನಿ ಯೋಜನೆಯನ್ನು ಸರ್ಕಾರವು ಮರು ಜಾರಿಗೊಳಿಸಿದೆ.**

ಯಶಸ್ವಿನಿ ಯೋಜನೆಯನ್ನು ಸರ್ಕಾರವು ನವೆಂಬರ್ 1 ರಿಂದ ರಾಜ್ಯದಲ್ಲಿ ಮತ್ತೆ ಮರು ಜಾರಿಗೊಳಿಸಿರುವುದರಿಂದ ರೈತಾಪಿ ಮತ್ತು ಸಹಕಾರಿ ವರ್ಗದ ಬಡ ಕುಟುಂಬಗಳಿಗೆ ತುಂಬಾ ಅನುಕೂಲವಾಗಲಿದೆ. ವಿವಿಧ ಕಾರಣಗಳಿಂದ ಸ್ಥಗಿತಗೊಂಡಿದ್ದ ಈ ಯೋಜನೆಯನ್ನು ಮರು ಆರಂಭಿಸುವಂತೆ ರಾಜ್ಯದೆಲ್ಲಡೆಯಿಂದ ಬೇಡಿಕೆ ಬಂದ ಹಿನ್ನೆಲೆಯಲ್ಲಿ ಸರ್ಕಾರವು 2022–23 ನೇ ಸಾಲಿನ ಆಯವ್ಯಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಯೋಜನೆಗಾಗಿ 300 ಕೋಟಿ ರೂ.ಗಳನ್ನು ಕಾಯ್ದಿರಿಸಿದರು.

ಈ ಹಿಂದೆ ಸಹಕಾರ ಇಲಾಖೆಯಲ್ಲಿ ಯಶಸ್ವಿನಿ ಸಹಕಾರ ಆರೋಗ್ಯ ರಕ್ಷಣಾ ಯೋಜನೆಯನ್ನು 2003 ರಲ್ಲಿ ಪ್ರಾರಂಭಿಸಲಾಗಿತ್ತು. 2017–18 ರವರೆಗೆ ಜಾರಿಯಲ್ಲಿದ್ದ ಈ ಯೋಜನೆಗೆ ಹೊರ ರಾಜ್ಯಗಳು, ಹೊರರಾಷ್ಟ್ರಗಳೂ ಆಕರ್ಷಿತಗೊಂಡು, ಇಂತಹುದೇ ಯೋಜನೆಯನ್ನು ಆರಂಭಿಸಿದ್ದವು. ಆದರೆ ಕೇಂದ್ರ ಸರ್ಕಾರದ ತೀರ್ಮಾನದನ್ವಯ ಆಯುಷ್ಮಾನ್ ಭಾರತ್ ಯೋಜನೆಯೊಂದಿಗೆ ವಿಲೀನ ಮಾಡಲಾಗಿತ್ತು. ಹಾಗಾಗಿ ದಿನಾಂಕ 31–05–2018 ರಿಂದ ಈ ಯೋಜನೆಯು ಸಹಕಾರ ಇಲಾಖೆಯಲ್ಲಿ ಸ್ಥಗಿತಗೊಂಡಿತ್ತು.

ಯಶಸ್ವಿನಿ ಸಹಕಾರ ಆರೋಗ್ಯ ರಕ್ಷಣಾ ಯೋಜನೆಯು ಕರ್ನಾಟಕ ರಾಜ್ಯದ ಒಂದು ಹೆಮ್ಮೆಯ ಯೋಜನೆಯಾಗಿದ್ದು, ಸಹಕಾರ ಸಂಘಗಳ ಸದಸ್ಯರ ಅನುಕೂಲಕ್ಕಾಗಿ ಜಾರಿಗೊಂಡಿರುವ ಒಂದು ವಿಶೇಷ ಯೋಜನೆಯಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶದ ಎಲ್ಲಾ ಸಹಕಾರ ಸದಸ್ಯರಿಗೂ ಅನ್ವಯವಾಗಲಿದ್ದು, ಇದರಲ್ಲಿ ಹೆಚ್ಚಿನ ಸದಸ್ಯರು ಗ್ರಾಮೀಣ ಪ್ರದೇಶದ ರೈತರುಗಳೇ ಆಗಿರುತ್ತಾರೆ.

ಈಗ ಮರು ಪರಿಷ್ಕರಣೆ ಮಾಡಿ ಜಾರಿ ಮಾಡಲಾಗುತ್ತಿರುವ ಈ ಯೋಜನೆಯಡಿ ಯಾವೆಲ್ಲ ಸೌಲಭ್ಯಗಳಿವೆ, ಪಡೆಯುವ ಪ್ರಕಿಯೆ ಹೇಗೆ? ಈ ಕುರಿತ ಸಂಪೂರ್ಣ ಮಾಹಿತಿಯನ್ನು ಇಲ್ಲಿ ಒದಗಿಸಲಾಗಿದೆ.

### ಏನಿದು ಯಶಸ್ವಿನಿ ಯೋಜನೆ?

ಕರ್ನಾಟಕ ರಾಜ್ಯದ ಗ್ರಾಮೀಣ ಸಹಕಾರಿಗಳಿಗಾಗಿಯೇ ರೂಪಗೊಂಡಿರುವ ಒಂದು 'ಸ್ವಯಂ–ನಿಧಿ ಶಸ್ತ್ರಚಿಕಿತ್ಸಾ ಯೋಜನೆ' ಯೇ ಯಶಸ್ವಿನಿ ಗ್ರಾಮೀಣ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ. ಈ ಯೋಜನೆಯಡಿ ಗ್ರಾಮೀಣ ಸಹಕಾರಿಯೊಬ್ಬರು ನಿಗದಿತ ಪ್ರಮಾಣದಲ್ಲಿ ಒಂದು ವರ್ಷದ ಅವಧಿಯಲ್ಲಿ ಯೋಜನೆಯಲ್ಲಿ ಒಳಗೊಂಡ ಯಾವುದೇ ಶಸ್ತ್ರಚಿಕಿತ್ಸೆಯನ್ನು ನಿಗದಿತ ಮಿತಿಯೊಳಗೆ, ಷರತ್ತು ಮತ್ತು ನಿಯಮಗಳು ಒಳಗೊಂಡಂತೆ ಅಂಗೀಕೃತ ಯಾವುದೇ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಚಿಕಿತ್ಸೆ ಪಡೆಯಬಹುದು.

### ಯೋಜನೆಯ ಫಲಾಭವಿಯಾಗಲು ಇರಬೇಕಾದ ಅರ್ಹತೆಗಳೇನು?

ಈ ಯೋಜನೆಯ ಫಲಾನುಭವಿಯಾಗಲು ಕನಿಷ್ಟ 3 ತಿಂಗಳು ಮುಂಚಿತ ಅರ್ಹ ಗ್ರಾಮೀಣ ಸಹಕಾರ ಸಂಘವೊಂದರ ಸದಸ್ಯರಾಗಿರಬೇಕು. ಅಲ್ಲದೇ ಗ್ರಾಮೀಣ ಸಹಕಾರ





Downloaded From:www.kpscvaani.com



## ನವೆಂಬರ್ 1 ರಿಂದ ಮರು ಜಾರಿಗೊಂಡ

# ಯಶಸ್ವಿನಿ ಯೋಜನೆ

**ರಾಜ್ಯದೆಲ್ಲೆಡೆಯಿಂದ ರೈತರು ಮತ್ತು ಸಹಕಾರ ಸದಸ್ಯರು ಬೇಡಿಕೆ ಸಲ್ಲಿಸಿದ ಹಿನ್ನಲೆಯಲ್ಲಿ ಯಶಸ್ವಿನಿ ಯೋಜನೆಯನ್ನು ಸರ್ಕಾರವು ಮರು ಜಾರಿಗೊಳಿಸಿದೆ.**

ಕೆ.ಟಿ.ರಮ್ಯ / ಎಸ್.ಮಂಜುಳ

ಯಶಸ್ವಿನಿ ಯೋಜನೆಯನ್ನು ಸರ್ಕಾರವು ನವೆಂಬರ್ 1 ರಿಂದ ರಾಜ್ಯದಲ್ಲಿ ಮತ್ತೆ ಮರು ಜಾರಿಗೊಳಿಸಿರುವುದರಿಂದ ರೈತಾಪಿ ಮತ್ತು ಸಹಕಾರಿ ವರ್ಗದ ಬಡ ಕುಟುಂಬಗಳಿಗೆ ತುಂಬಾ ಅನುಕೂಲವಾಗಲಿದೆ. ವಿವಿಧ ಕಾರಣಗಳಿಂದ ಸ್ಥಗಿತಗೊಂಡಿದ್ದ ಈ ಯೋಜನೆಯನ್ನು ಮರು ಆರಂಭಿಸುವಂತೆ ರಾಜ್ಯದೆಲ್ಲಡೆಯಿಂದ ಬೇಡಿಕೆ ಬಂದ ಹಿನ್ನೆಲೆಯಲ್ಲಿ ಸರ್ಕಾರವು 2022–23 ನೇ ಸಾಲಿನ ಆಯವ್ಯಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಯೋಜನೆಗಾಗಿ 300 ಕೋಟಿ ರೂ.ಗಳನ್ನು ಕಾಯ್ದಿರಿಸಿದರು.

ಈ ಹಿಂದೆ ಸಹಕಾರ ಇಲಾಖೆಯಲ್ಲಿ ಯಶಸ್ವಿನಿ ಸಹಕಾರ ಆರೋಗ್ಯ ರಕ್ಷಣಾ ಯೋಜನೆಯನ್ನು 2003 ರಲ್ಲಿ ಪ್ರಾರಂಭಿಸಲಾಗಿತ್ತು. 2017–18 ರವರೆಗೆ ಜಾರಿಯಲ್ಲಿದ್ದ ಈ ಯೋಜನೆಗೆ ಹೊರ ರಾಜ್ಯಗಳು, ಹೊರರಾಷ್ಟ್ರಗಳೂ ಆಕರ್ಷಿತಗೊಂಡು, ಇಂತಹುದೇ ಯೋಜನೆಯನ್ನು ಆರಂಭಿಸಿದ್ದವು. ಆದರೆ ಕೇಂದ್ರ ಸರ್ಕಾರದ ತೀರ್ಮಾನದನ್ವಯ ಆಯುಷ್ಮಾನ್ ಭಾರತ್ ಯೋಜನೆಯೊಂದಿಗೆ ವಿಲೀನ ಮಾಡಲಾಗಿತ್ತು. ಹಾಗಾಗಿ ದಿನಾಂಕ 31–05–2018 ರಿಂದ ಈ ಯೋಜನೆಯು ಸಹಕಾರ ಇಲಾಖೆಯಲ್ಲಿ ಸ್ಥಗಿತಗೊಂಡಿತ್ತು.

ಯಶಸ್ವಿನಿ ಸಹಕಾರ ಆರೋಗ್ಯ ರಕ್ಷಣಾ ಯೋಜನೆಯು ಕರ್ನಾಟಕ ರಾಜ್ಯದ ಒಂದು ಹೆಮ್ಮೆಯ ಯೋಜನೆಯಾಗಿದ್ದು, ಸಹಕಾರ ಸಂಘಗಳ ಸದಸ್ಯರ ಅನುಕೂಲಕ್ಕಾಗಿ ಜಾರಿಗೊಂಡಿರುವ ಒಂದು ವಿಶೇಷ ಯೋಜನೆಯಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶದ ಎಲ್ಲಾ ಸಹಕಾರ ಸದಸ್ಯರಿಗೂ ಅನ್ವಯವಾಗಲಿದ್ದು, ಇದರಲ್ಲಿ ಹೆಚ್ಚಿನ ಸದಸ್ಯರು ಗ್ರಾಮೀಣ ಪ್ರದೇಶದ ರೈತರುಗಳೇ ಆಗಿರುತ್ತಾರೆ.

ಈಗ ಮರು ಪರಿಷ್ಕರಣೆ ಮಾಡಿ ಜಾರಿ ಮಾಡಲಾಗುತ್ತಿರುವ ಈ ಯೋಜನೆಯಡಿ ಯಾವೆಲ್ಲ ಸೌಲಭ್ಯಗಳಿವೆ, ಪಡೆಯುವ ಪ್ರಕಿಯೆ ಹೇಗೆ? ಈ ಕುರಿತ ಸಂಪೂರ್ಣ ಮಾಹಿತಿಯನ್ನು ಇಲ್ಲಿ ಒದಗಿಸಲಾಗಿದೆ.

### ಏನಿದು ಯಶಸ್ವಿನಿ ಯೋಜನೆ?

ಕರ್ನಾಟಕ ರಾಜ್ಯದ ಗ್ರಾಮೀಣ ಸಹಕಾರಿಗಳಿಗಾಗಿಯೇ ರೂಪಗೊಂಡಿರುವ ಒಂದು 'ಸ್ವಯಂ–ನಿಧಿ ಶಸ್ತ್ರಚಿಕಿತ್ಸಾ ಯೋಜನೆ' ಯೇ ಯಶಸ್ವಿನಿ ಗ್ರಾಮೀಣ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ. ಈ ಯೋಜನೆಯಡಿ ಗ್ರಾಮೀಣ ಸಹಕಾರಿಯೊಬ್ಬರು ನಿಗದಿತ ಪ್ರಮಾಣದಲ್ಲಿ ಒಂದು ವರ್ಷದ ಅವಧಿಯಲ್ಲಿ ಯೋಜನೆಯಲ್ಲಿ ಒಳಗೊಂಡ ಯಾವುದೇ ಶಸ್ತ್ರಚಿಕಿತ್ಸೆಯನ್ನು ನಿಗದಿತ ಮಿತಿಯೊಳಗೆ, ಷರತ್ತು ಮತ್ತು ನಿಯಮಗಳು ಒಳಗೊಂಡಂತೆ ಅಂಗೀಕೃತ ಯಾವುದೇ ಆಸ್ಪತ್ರೆಗಳಲ್ಲಿ ನಗದು ರಹಿತವಾಗಿ ಚಿಕಿತ್ಸೆ ಪಡೆಯಬಹುದು.

### ಯೋಜನೆಯ ಫಲಾಭವಿಯಾಗಲು ಇರಬೇಕಾದ ಅರ್ಹತೆಗಳೇನು?

ಈ ಯೋಜನೆಯ ಫಲಾನುಭವಿಯಾಗಲು ಕನಿಷ್ಟ 3 ತಿಂಗಳು ಮುಂಚಿತ ಅರ್ಹ ಗ್ರಾಮೀಣ ಸಹಕಾರ ಸಂಘವೊಂದರ ಸದಸ್ಯರಾಗಿರಬೇಕು. ಅಲ್ಲದೇ ಗ್ರಾಮೀಣ ಸಹಕಾರ



Downloaded From:www.kpscvaani.com

ಸಂಘ/ಬ್ಯಾಂಕುಗಳೊಡನೆ ವ್ಯವಹರಿಸುತ್ತಿರುವ ಗ್ರಾಮೀಣ ಸ್ತ್ರೀಶಕ್ತಿಯ ಸ್ವ-ಸಹಾಯ ಗುಂಪಿನ ಸದಸ್ಯರು ಮತ್ತು ಅವರ ಕುಟುಂಬದ ಎಲ್ಲ ಸದಸ್ಯರು ಯೋಜನೆಯ ಫಲಾನುಭವಿಯಾಗಬಹುದು.

## ಪಾವತಿಸಬೇಕಾದ ವಂತಿಗೆ ಹಣ ಎಷ್ಟು?

ಫಲಾನುಭವಿಯಾಗ ಬಯಸುವ ಪ್ರತಿಯೊಬ್ಬರೂ ವರ್ಷಕ್ಕೆ ನಿಗದಿತ ಪ್ರಮಾಣದ ವಂತಿಗೆ ಹಣ ಪಾವತಿಸಬೇಕು. ಗ್ರಾಮೀಣ ಪ್ರದೇಶದ ಸಹಕಾರಿ ಸಂಘಗಳ/ಸ್ವ-ಸಹಾಯ ಗುಂಪುಗಳ ಗರಿಷ್ಠ ನಾಲ್ಕು ಜನರ ಕುಟುಂಬಕ್ಕೆ ತಲಾ ವಾರ್ಷಿಕ 500 ರೂಗಳ ವಂತಿಗೆ ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ 20 ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ 100 ರೂ. ಪಾವತಿಸಬೇಕು. ನಗರ ಪ್ರದೇಶದ ಸಹಕಾರ ಸಂಘಗಳ ಗರಿಷ್ಠ ನಾಲ್ಕು ಮಂದಿ ಸದಸ್ಯರ ಕುಟುಂಬ ಒಂದಕ್ಕೆ ವಾರ್ಷಿಕ 1000 ರೂ, ವಂತಿಗೆ ನಿಗದಿ ಪಡಿಸಲಾಗಿದೆ. ನಾಲ್ಕು ಮಂದಿಗಿಂತ ಹೆಚ್ಚಿನ ಸದಸ್ಯರು ಇರುವ ಕುಟುಂಬಗಳಿಗೆ ಹೆಚ್ಚುವರಿ ಸದಸ್ಯರಿಗೆ ತಲಾ 200 ರೂ ವಂತಿಗೆ ಪಾವತಿಸಿ ನೋಂದಾಯಿಸಬಹುದು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ.



## ನೋಂದಣಿ ಯಾವಾಗ?

2022-23 ನೇ ಸಾಲಿಗೆ ನೋಂದಣಿ ಪ್ರಕ್ರಿಯೆಯು ನವೆಂಬರ್ 1 ರಿಂದ ಪ್ರಾರಂಭವಾಗಿದೆ. ಈ ಯಶಸ್ವಿನಿ ಯೋಜನೆಯ ಅವಧಿ 1-1-2023 ರಿಂದ 31-12-2023 ರವರೆಗೆ ಜಾರಿಯಲ್ಲಿರುತ್ತದೆ.

## ಈ ಯೋಜನೆ ಯಾರೆಲ್ಲರಿಗೆ ಅನ್ವಯಿಸುತ್ತದೆ?

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಎಲ್ಲಾ ಗ್ರಾಮೀಣ ಸ್ವ-ಸಹಾಯ ಗುಂಪುಗಳ ಸದಸ್ಯರು ಹಾಗೂ ಅವರ ಕುಟುಂಬ ವರ್ಗದವರಿಗೂ ಈ ಯೋಜನೆ ಅನ್ವಯಿಸುತ್ತದೆ. ಗ್ರಾಮೀಣ ಪ್ರದೇಶದಲ್ಲಿರುವ ಸಹಕಾರಿ ಸಂಘದ ಸದಸ್ಯರು, ಸಹಕಾರಿ ಬ್ಯಾಂಕುಗಳಲ್ಲಿ ಹಣಕಾಸಿನ ವಹಿವಾಟು ಹೊಂದಿರುವ ಸ್ವ-ಸಹಾಯ ಗುಂಪಿನ ಸದಸ್ಯರು ಕೂಡ ಯೋಜನೆಯ ಸೌಲಭ್ಯ ಪಡೆಯಬಹುದು. ನಗರ/ಪಟ್ಟಣ ಪ್ರದೇಶದಲ್ಲಿ ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.



ಮದುವೆಯಾಗಿರುವ ಹೆಣ್ಣು ಮಗಳು ಹಾಗೂ ಅವಳ ಮಕ್ಕಳು ತಂದೆ/ತಾಯಿ/ಅಣ್ಣ/ತಮ್ಮ ಕುಟುಂಬದಲ್ಲಿಯೇ ಅಂದರೆ ಪ್ರಧಾನ ಅರ್ಜಿದಾರರ ಕುಟುಂಬದಲ್ಲಿಯೇ ಯಾವುದೇ ಕಾರಣಕ್ಕೆ ವಾಸವಾಗಿದ್ದರೆ ಅವರ ಪಾಲಿನ ವಂತಿಗೆ ಹಣ ಪಾವತಿಸಿದ್ದರೆ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ. ಆದಾಗ್ಯೂ 2022-23 ನೇ ಸಾಲಿನ ಯೋಜನೆಯ ಅವಧಿಯಲ್ಲಿ ಮದುವೆಯಾದ ಹೆಣ್ಣು ಮಗಳು ತಂದೆ/ತಾಯಿ/ಅಣ್ಣ/ತಮ್ಮ ಇವರ ಜೊತೆ ವಾಸವಾಗಿರದೇ ಸಂಘದ ಕಾರ್ಯವ್ಯಾಪ್ತಿ ಹೊರಗೆ ವಾಸವಿದ್ದರೆ ಅಂತಹ ಸಂದರ್ಭದಲ್ಲಿ ಈ ಯೋಜನೆ ಸೌಲಭ್ಯವನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ, ಅವಳೇ ಸಹಕಾರ ಸಂಘದ ಸದಸ್ಯೆಯಾಗಿ ಮೂರು ತಿಂಗಳು ಕಳೆದಿದ್ದಲ್ಲಿ ಯಶಸ್ವಿನಿ ಯೋಜನೆಯ ಸೌಲಭ್ಯ ಪಡೆಯಬಹುದು.

2022-23 ನೇ ಸಾಲಿನಲ್ಲಿ ಮದುವೆಯಾಗದ ಹೆಣ್ಣುಮಕ್ಕಳಿಗೆ ಪ್ರಧಾನ ಅರ್ಜಿದಾರರು ವಂತಿಗೆ ಪಾವತಿಸಿದ್ದು, ಆನಂತರ ಮದುವೆಯಾಗಿದ್ದಲ್ಲಿ ಅಂತಹ



Downloaded From:www.kpscvaani.com



ಮದುವೆಯಾದ ಹೆಣ್ಣು ಮಗಳು ಪ್ರಸಕ್ತ ಸಾಲಿನಲ್ಲಿ ಯಶಸ್ವಿನಿ ಯೋಜನೆಯಡಿಯಲ್ಲಿ ಚಿಕಿತ್ಸೆ ಪಡೆಯಲು ಅರ್ಹರಿರುತ್ತಾರೆ.

ನವಜಾತ ಶಿಶುವಿನ ತಾಯಿ ಹೆಸರು ಯಶಸ್ವಿನಿ ಕಾರ್ಡ್‌ನಲ್ಲಿದ್ದರೆ 30 ದಿನಗಳವರೆಗೆ ತಾಯಿ ಹೆಸರು ಇರುವ ಯಶಸ್ವಿನಿ ಕಾರ್ಡಿನ ಆಧಾರದ ಮೇಲೆ ಈ ಯೋಜನೆಯಡಿಯಲ್ಲಿ ಬರುವ ಸೌಲಭ್ಯವನ್ನು ನವಜಾತ ಶಿಶುವೂ ಸಹ ಪಡೆಯಬಹದು.

### ಏನಿದು ಯೂನಿಕ್ ಐಡಿ?

ಯಶಸ್ವಿನಿ ಯೋಜನೆಯಡಿ ನೋಂದಣಿ ಯಾಗುವ ಸದಸ್ಯರಿಗೆ ಯೂನಿಕ್ ಐಡಿ ಸಂಖ್ಯೆಯಿರುವ ಕಾರ್ಡ್ ಒಂದನ್ನು ನೀಡಲಾಗುತ್ತದೆ. ಈ ಕಾರ್ಡಿನಲ್ಲಿ ಪ್ರಾಥಮಿಕ ಸದಸ್ಯರ ಸಹಕಾರ ಸಂಘದ ಸದಸ್ಯತ್ವದ ವಿವರಗಳು ಮತ್ತು ಅವರ ಕುಟುಂಬ ಸದಸ್ಯರ ವಿವರಗಳು, ವಾರ್ಷಿಕ ವಂತಿಗೆ ಪಾವತಿಸಿರುವ ವಿವರ ಹಾಗೂ ಭಾವಚಿತ್ರದ ವಿವರಗಳ ಮಾಹಿತಿಯು ಸಂಗ್ರಹಣೆ ಆಗಿರುತ್ತದೆ. ಹಾಗೆಯೇ ಇದರಲ್ಲಿ ಕುಟುಂಬದ ವಾರ್ಷಿಕ ವೈದ್ಯಕೀಯ ವೆಚ್ಚದ ಮಿತಿಯನ್ನು ಸಹ ಕಾರ್ಡಿನಲ್ಲಿ ನಮೂದಿಸಲಾಗಿರುತ್ತದೆ.

### ಯೋಜನೆಯಲ್ಲಿ ಯಾವ ಚಿಕಿತ್ಸೆಗಳು ದೊರೆಯಲಿವೆ?

ಯಶಸ್ವಿನಿ ಯೋಜನೆಯಡಿಯಲ್ಲಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು, ಕಿವಿ, ಮೂಗು, ಗಂಟಲು ವ್ಯಾಧಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಿಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಸ್ತ್ರೀಯರಿಗೆ ಸಂಬಂಧಿಸಿದ ಖಾಯಿಲೆಗಳು ಹಾಗೂ ಈ ಯೋಜನೆಯಡಿ ಇತರೆ ಅನುಸೂಚಿತ ಸಾಮಾನ್ಯ ರೋಗಗಳಿಗೆ ಸಂಬಂಧಿಸಿದ ಚಿಕಿತ್ಸಾ ಸೌಲಭ್ಯಗಳನ್ನು ರಾಜ್ಯದ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು. ಅಲ್ಲದೆ ಪ್ರಾರಂಭಿಕವಾಗಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ 1650 ಖಾಯಿಲೆಗಳಿಗೆ ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಗೆ ಅಳವಡಿಸಿಕೊಳ್ಳಲಾಗಿದೆ.

### ಫಲಾನುಭವಿಗಳಿಗೆ ದೊರೆಯುವ ಸೌಲಭ್ಯಗಳಾವುವು?

ಸದಸ್ಯರು ಯಶಸ್ವಿನಿ ಕಾರ್ಡ್ ಪಡೆದ ಹದಿನೈದು ದಿನಗಳ ನಂತರ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ. ಯಶಸ್ವಿನಿ ಸದಸ್ಯರು ಜನರಲ್ ವಾರ್ಡ್‌ನಲ್ಲಿ ಸೌಲಭ್ಯ ಪಡೆಯುವಲ್ಲಿ ಅರ್ಹತೆ ಹೊಂದಿದ್ದು, ಆಸ್ಪತ್ರೆಯಲ್ಲಿ ಒದಗಿಸಿರುವ ಚಿಕಿತ್ಸಾ ಸೌಲಭ್ಯದಲ್ಲಿ ಔಷಧಿ ವೆಚ್ಚ, ಆಸ್ಪತ್ರೆ ವೆಚ್ಚ, ಶಸ್ತ್ರಚಿಕಿತ್ಸೆಯ ವೆಚ್ಚ, ಆಪರೇಶನ್ ಥಿಯೇಟರ್ ಬಾಡಿಗೆ, ಅರೆವಳಿಕೆ ತಜ್ಞರ ಫೀ, ಸರ್ಜನ್ ಫೀ, ಕನ್ಸಲ್‌ಟೆಂಟ್ ಫೀ, ಬೆಡ್ ಚಾರ್ಜ್, ನರ್ಸ್ ಫೀ ಇತ್ಯಾದಿ ವೆಚ್ಚಗಳು ಒಳಗೊಂಡಿರುತ್ತದೆ. ಟ್ರಸ್ಟ್‌ನಿಂದ ಅಂಗೀಕೃತವಾದ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ಯಶಸ್ವಿನಿ ಫಲಾನುಭವಿಗಳು ಹೊರರೋಗಿ ಚಿಕಿತ್ಸೆಗೆ (ಒಪಿಡಿ) ಗರಿಷ್ಠ ರೂ 200 ಗಳ (ಮೂರು ತಿಂಗಳ ಅವಧಿಗೆ) ಮತಿ ನಿಗಧಿಪಡಿಸಿದ್ದು, ಇದಕ್ಕಿಂತ ಹೆಚ್ಚಿನ ಶುಲ್ಕವನ್ನು ಸದಸ್ಯರಿಗೆ ವಿಧಿಸುವಂತಿಲ್ಲ. ಈ ಪೈಕಿ 100 ರೂ ಗಳನ್ನು ಯಶಸ್ವಿನಿ ಟ್ರಸ್ಟ್‌ನ ವತಿಯಿಂದ ಪಾವತಿಸಲಾಗುತ್ತದೆ.

ಯಶಸ್ವಿನಿ ಯೋಜನೆಯಲ್ಲಿ ಫಲಾನುಭವಿ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮತಿ ರೂ 5.00 ಲಕ್ಷಕ್ಕೆ ನಿಗಧಿಪಡಿಸಿದ್ದು, ರಾಜ್ಯದ ಯಾವುದೇ ಯಶಸ್ವಿನಿ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ನಗದುರಹಿತ ಚಿಕಿತ್ಸೆ ಪಡೆಯಲು ಅವಕಾಶವಿರುತ್ತದೆ.

### ಯಾರಿಗೆ ಈ ಸೌಲಭ್ಯ ದೊರಕುವುದಿಲ್ಲ ?

ಪ್ರಧಾನ ಅರ್ಜಿದಾರರು ಮತ್ತು ಅವನ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ ನೌಕರರಾಗಿ ಅಥವಾ ಖಾಸಗಿ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವೇತನ ಪಡೆಯುತ್ತಿದ್ದಲ್ಲಿ ಈ ಯೋಜನೆಗೆ ಅರ್ಹರಿರುವುದಿಲ್ಲ. ಪ್ರಧಾನ ಅರ್ಜಿದಾರರು ಅಥವಾ ಅವನ ಕುಟುಂಬದ ಸದಸ್ಯರು ಯಾವುದೇ ವಿಮಾ ಯೋಜನೆಯಡಿಯಲ್ಲಿ ಸದಸ್ಯರಾಗಿದ್ದಲ್ಲಿ ಅಂತಹವರು ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಅರ್ಹರಿರುವುದಿಲ್ಲ. ಹಾಗೆಯೇ ಸಮಾಪನಗೊಂಡ ಅಥವಾ ನಿಷ್ಕ್ರಿಯಗೊಂಡ ಸಹಕಾರ ಸಂಘಗಳ ಸದಸ್ಯರು ಮತ್ತು ನೌಕರರ ಸಹಕಾರ ಸಂಘಗಳ ಸದಸ್ಯರಿಗೆ ಈ ಯೋಜನೆ ಅನ್ವಯಿಸುವುದಿಲ್ಲ.

ಸಹಕಾರಿಗಳ ಮತ್ತು ರೈತರ ಬೇಡಿಕೆಯಂತೆ ಮರು ಜಾರಿ ಮಾಡಿರುವ ಈ ಯಶಸ್ವಿನಿ ಯೋಜನೆಯಡಿ ನಗದು ರಹಿತ ಅಗತ್ಯ ವೈದ್ಯಕೀಯ ಚಿಕಿತ್ಸೆಯನ್ನು ಸುಲಭವಾಗಿ ಪಡೆದುಕೊಂಡು ರಾಜ್ಯದ ಎಲ್ಲಾ ಸಹಕಾರಿಗಳು ಮತ್ತು ರೈತರು ಆರೋಗ್ಯಯುತ ಜೀವನ ನಡೆಸುವಂತಾಗಲಿ ಎಂಬುದು ಸರ್ಕಾರದ ಆಶಯವಾಗಿದೆ. ■





Downloaded From:www.kpscvaani.com




# ಜನೌಷಧಿ ಪರಿಯೋಜನೆಯಲ್ಲಿ ಎರಡನೇ ಸ್ಥಾನದಲ್ಲಿರುವ ಕರ್ನಾಟಕ

ರಾಜ್ಯದಲ್ಲಿ ಬಡ, ಹಿಂದುಳಿದ ಮತ್ತು ಮಧ್ಯಮವರ್ಗದವರಿಗೆ ರಿಯಾಯಿತಿ ದರದಲ್ಲಿ ಔಷಧಗಳು ಮತ್ತು ಶಸ್ತ್ರಚಿಕಿತ್ಸೆಯ ಪರಿಕರಗಳನ್ನು ಒದಗಿಸುವ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ ಅತ್ಯುತ್ತಮವಾಗಿ ಜಾರಿಯಾಗಿದ್ದು, ಈವರೆಗೆ 1052 ಜನೌಷಧ ಮಳಿಗೆಗಳನ್ನು ತೆರೆಯಲಾಗಿದೆ.

ಇಡೀ ದೇಶದಲ್ಲಿ ಉತ್ತರ ಪ್ರದೇಶದ ನಂತರ ಕರ್ನಾಟಕ ಎರಡನೇ ಸ್ಥಾನದಲ್ಲಿದ್ದು, ಕೇರಳ ಮೂರನೇ ಸ್ಥಾನದಲ್ಲಿದೆ. ಗ್ರಾಮೀಣ ಭಾಗದಲ್ಲಿ ಇನ್ನೂ ಹೆಚ್ಚಿನ ಮಳಿಗೆಗಳನ್ನು ತೆರೆಯಲು ಸರ್ಕಾರ ಕಾರ್ನೋನ್ಮುಖವಾಗಿದ್ದು, ಅಗತ್ಯ ಕ್ರಮಗಳನ್ನು ವಹಿಸಲಾಗುತ್ತಿದೆ.

ಇದರ ಜೊತೆ ರಾಜ್ಯದಲ್ಲಿ ಹೊಸದಾಗಿ ಮತ್ತೆ 500 ಮಳಿಗೆಗಳನ್ನು ತೆರೆಯುವ ಉದ್ದೇಶ ಹೊಂದಲಾಗಿದ್ದು, ಸರ್ಕಾರಿ ಆಸ್ಪತ್ರೆಗಳಲ್ಲಿ ಸುಮಾರು 40 ಹೊಸ ಮಳಿಗೆಗಳಿಗೆ ಅನುಮತಿ ನೀಡುವಂತೆ ಬಿಪಿಪಿಐಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ವರ್ಷದ ಫೆಬ್ರವರಿ ನಂತರ ಸುಮಾರು 300 ಮಳಿಗೆಗಳನ್ನು ತೆರೆಯಲಾಗಿದ್ದು, ಬೇಡಿಕೆಗಳಿಗೆ ಅನುಗುಣವಾಗಿ ಮಳಿಗೆ ತೆರೆಯಲು ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಜನೌಷಧಿ ಮಳಿಗೆಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಹೊಸದಾಗಿ ಪ್ರಸ್ತಾವನೆ ಸಲ್ಲಿಸಿರುವುದನ್ನು ಹೊರತುಪಡಿಸಿ ಸರ್ಕಾರಿ ಆಸ್ಪತ್ರೆಗಳಲ್ಲಿ ಸುಮಾರು 200 ಔಷಧ ಮಳಿಗೆಗಳಿವೆ. ಉತ್ತರ ಕರ್ನಾಟಕ, ಹಳೆ ಮೈಸೂರು ಭಾಗದಿಂದಲೂ ಜನೌಷಧಿ ಮಳಿಗೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತೆರೆಯಲು ಒತ್ತಡವಿದೆ. ಮಂಡ್ಯ ಜಿಲ್ಲೆಯ ಕೆ.ಎಂ.ದೊಡ್ಡಿ ಗ್ರಾಮದಲ್ಲೂ ಜನೌಷಧಿ ಮಳಿಗೆ ತೆರೆದಿರುವುದು ವಿಶೇಷವಾಗಿದ್ದು, ಬೇಡಿಕೆಗೆ ಅನುಗುಣವಾಗಿ ಹೊಸ ಮಳಿಗೆಗಳಿಗೆ ಮಂಜೂರಾತಿ ನೀಡಲಾಗುತ್ತಿದೆ.

**ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆಯಲ್ಲಿ ಬಡ ಜನರ ಅನುಕೂಲಕ್ಕಾಗಿ ಜನೌಷಧಿ ಮಳಿಗೆಗಳನ್ನು ಸ್ಥಾಪಿಸುವಲ್ಲಿ ರಾಜ್ಯವು ಎರಡನೇ ಸ್ಥಾನವನ್ನು ಪಡೆದಿದೆ.**

ರಾಜ್ಯದಲ್ಲಿ ಜನರಿಕ್ ಔಷಧಿಗಳು ಬ್ರಾಂಡೆಡ್ ಆಗಿದ್ದು, ಮಾರುಕಟ್ಟೆಗಿಂತ ಶೇ.50 ರಿಂದ 80 ರಷ್ಟು ಅಗ್ಗದ ದರದಲ್ಲಿ ದೊರೆಯುತ್ತಿವೆ. ಎನ್.ಎ.ಬಿ.ಎಲ್ ಪ್ರಯೋಗಾಲಯದಲ್ಲಿ ಜನೌಷಧಿಯಲ್ಲಿ ಮಾರಾಟ ಮಾಡಲಾಗುವ ಔಷಧಿಗಳನ್ನು ಪರೀಕ್ಷಿಸಿ ಸಾರ್ವಜನಿಕ ಉಪಯೋಗಕ್ಕೆ ಜನೌಷಧಿ ಕೇಂದ್ರಗಳಲ್ಲಿ ದೊರೆಯುವಂತೆ ಮಾಡಲಾಗುತ್ತಿದೆ. ಒಟ್ಟು 1451 ಔಷಧಗಳು ಮತ್ತು 240 ಶಸ್ತ್ರಚಿಕಿತ್ಸೆ ಪರಿಕರಗಳು, ದುಬಾರಿ ವೆಚ್ಚದ ಕ್ಯಾನ್ಸರ್ ಔಷಧಗಳು ಸಹ ಇಲ್ಲಿ ದೊರೆಯುತ್ತಿವೆ. ಹಾಗಾಗಿ ರಾಜ್ಯದಾದ್ಯಂತ ಜನೌಷಧಿಯ ಮಳಿಗೆಗಳಿಗೆ ಬೇಡಿಕೆ ಹೆಚ್ಚಾಗಿದೆ. ಗುಣಮಟ್ಟದ ಔಷಧಿಗಳನ್ನು ಅತ್ಯಂತ ಕಡಿಮೆ ದರದಲ್ಲಿ ಜನೌಷಧಿ ಮಳಿಗೆಗಳಲ್ಲಿ ಒದಗಿಸಲಾಗುತ್ತಿರುವುದಕ್ಕೆ ಸಾರ್ವಜನಿಕರು ಸರ್ಕಾರವನ್ನು ಪ್ರಶಂಸಿಸುತ್ತಿದ್ದಾರೆ. ಸರ್ಕಾರ ಕೂಡ ಬೇಡಿಕೆ ಇರುವ ಕಡೆಗಳಲ್ಲಿ ಜನೌಷಧಿ ಮಳಿಗೆ ತೆರೆಯಲು ಮುಂದಾಗಿದೆ.

ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಜನೌಷಧಿ ಕೇಂದ್ರ ಪ್ರಾರಂಭಿಸಲು ಉದ್ದೇಶ ಹೊಂದಿರುವ ಫಾರ್ಮಸಿ ಪದವೀಧರರಿಂದ ಮಳಿಗೆಗಳನ್ನು ತೆರೆಯಲು ಹೆಚ್ಚಿನ ಬೇಡಿಕೆ ಬರುತ್ತಿದೆ. ಸ್ವಾಯತ್ತ ಸಂಸ್ಥೆಗಳಿಗೆ 120 ಚದರ ಅಡಿ ಸ್ಥಳವನ್ನು ಉಚಿತವಾಗಿ ನೀಡಲಾಗುತ್ತಿದೆ. ಬ್ಯೂರೋ ಆಫ್ ಫಾರ್ಮಸಿ ಪಬ್ಲಿಕ್ ಸೆಕ್ಟರ್ ಯೂನಿಟ್ಸ್ ಆಫ್ ಇಂಡಿಯಾ [ಬಿಪಿಪಿಐ] ವತಿಯಿಂದ ಜನೌಷಧಿ ಮಳಿಗೆ ಪ್ರಾರಂಭಿಸವ ಪ್ರತಿ ಮಳಿಗೆಗೆ ಮಾಸಿಕ ಖರೀದಿ ವಹಿವಾಟಿಗೆ ತಕ್ಕಂತೆ ಮಾಸಿಕ ಶೇ 15 ರಂತೆ 15,000 ರೂ ಗಳನ್ನು ಮೀರದಂತೆ ಒಟ್ಟಾರೆ ರೂ 2.50 ಲಕ್ಷಗಳವರೆಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ. ■



Downloaded From:www.kpscvaani.com




# ಬೆಂಗಳೂರು ಮಹಾನಗರಕ್ಕೆ ೯೦ ಮೀಟರ್ ಏರಿಯಲ್ ಲ್ಯಾಡರ್

**ಐವತ್ತು ಮೀಟರ್ ಎತ್ತರದ ಏರಿಯಲ್ ಲ್ಯಾಡರ್ ಅನ್ನು ಹೊಂದಿದ್ದ ಅಗ್ನಿಶಾಮಕ ದಳಕ್ಕೆ ಈಗ ತೊಂಬತ್ತು ಮೀಟರ್ ಎತ್ತರದ ಲ್ಯಾಡರ್ ಸೇರ್ಪಡೆ ಆಗಿದೆ.**

ಎನ್. ನಾಗರತ್ನಮ್ಮ

ನಮ್ಮ ರಾಜ್ಯದ ಪೊಲೀಸ್ ಇಲಾಖೆ ಆಡಳಿತದಡಿಯಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ವಿಭಾಗವು ಪ್ರಥಮ ಬಾರಿಗೆ 1942ರಲ್ಲಿ ಬೆಂಗಳೂರು ದಕ್ಷಿಣ ಮತ್ತು ಉತ್ತರ ವಿಭಾಗಗಳಲ್ಲಿ ತನ್ನ ಕಾರ್ಯವನ್ನು ಆರಂಭಿಸಿತು. ತದನಂತರ ನವೆಂಬರ್ 05, 1965 ರಂದು ಪ್ರತ್ಯೇಕವಾದ ಡೈರಕ್ಟರೇಟ್ ಆಫ್ ಫೈರ್ ಅಂಡ್ ಎಮರ್ಜೆನ್ಸಿ ಅಸ್ತಿತ್ವಕ್ಕೆ ಬಂದಿತು. ಈಗ ಪ್ರತಿ ಜಿಲ್ಲೆಯಲ್ಲಿಯೂ ಅಗ್ನಿಶಾಮಕ ದಳ ಕಾರ್ಯ ನಿರ್ವಹಿಸುತ್ತಿದೆ.

ಬೃಹತ್ ಕಟ್ಟಡಗಳಲ್ಲಿ ಅಗ್ನಿ ಅಪಘಾತದಿಂದ ಉಂಟಾಗುವ ಸಾರ್ವಜನಿಕರ ಪ್ರಾಣ ಹಾನಿ ಮತ್ತು ಆಸ್ತಿ–ಪಾಸ್ತಿಗಳ ನಷ್ಟ, ಕಟ್ಟಡದಲ್ಲಿರುವವರನ್ನು ಸುರಕ್ಷಿತವಾಗಿ ರಕ್ಷಿಸಲು ಅಗ್ನಿಶಾಮಕ ದಳಕ್ಕೆ ಈಗ ಸೇರ್ಪಡೆಯಾಗಿರುವ 90 ಮೀಟರ್ ಏರಿಯಲ್ ಲ್ಯಾಡರ್ ದೊಡ್ಡ ಶಕ್ತಿಯಾಗಿ ಪರಿಣಮಿಸಿದೆ. ಈವರೆಗೆ ಅಗ್ನಿಶಾಮಕ ದಳದಲ್ಲಿ 50 ಮೀಟರ್ ಎತ್ತರದ ಏರಿಯಲ್ ಲ್ಯಾಡರ್ ಇತ್ತು. ಅಗ್ನಿಶಾಮಕ ದಳಕ್ಕೆ ಇನ್ನು ಹೆಚ್ಚಿನ ಶಕ್ತಿಯನ್ನು ನೀಡುವ ಉದ್ದೇಶದಿಂದ ಸರ್ಕಾರವು 90 ಮೀಟರ್ ಎತ್ತರದ ಏರಿಯಲ್ ಲ್ಯಾಡರ್ ಫ್ಲಾಟ್ ಫಾರಂ ವಾಹನವನ್ನು ನೀಡಿದ್ದು, ಅದನ್ನು ಇತ್ತೀಚೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸೌಧದ ಮುಂಭಾಗ ಲೋಕಾರ್ಪಣೆ ಮಾಡಿದರು.

ಭಾರತದಲ್ಲಿ ಮುಂಬೈ ಮಹಾನಗರ ಮಾತ್ರ 90 ಮೀಟರ್ ಏರಿಯಲ್ ಲ್ಯಾಡರ್ ವಾಹನವನ್ನು ಹೊಂದಿತ್ತು. ಇದೀಗ ಬೆಂಗಳೂರು ಮಹಾನಗರವು ಕೂಡ ಈ ಸೌಕರ್ಯವನ್ನು ಹೊಂದಿದ ನಗರವಾಗಿದೆ. ವಿಶಿಷ್ಟ ತಂತ್ರಜ್ಞಾನವುಳ್ಳ



Downloaded From:www.kpscvaani.com



90 ಮೀಟರ್ ಏರಿಯಲ್ ಲ್ಯಾಡರ್ ವಾಹನವು 90 ಮೀಟರ್ ಎತ್ತರಕ್ಕೆ ತಲುಪಿ ಅಗ್ನಿಶಮನ ಮತ್ತು ರಕ್ಷಣಾ ಕಾರ್ಯಗಳನ್ನು ಕೈಗೊಳ್ಳುವ ವಿಶೇಷ ವಾಹನವಾಗಿದ್ದು, ಇದನ್ನು ತಯಾರಿಸಿ ಸರಬರಾಜುಗೊಳಿಸುವ ಸಂಸ್ಥೆಗಳು ಇಡೀ ವಿಶ್ವದಲ್ಲಿ ಕೆಲವೇ ಕೆಲವು ಸಂಸ್ಥೆಗಳು ಮಾತ್ರ ಈ ರೀತಿಯ ಏರಿಯಲ್ ಲ್ಯಾಡರ್ ಫ್ಲಾಟ್ ಫಾರಂ ವಾಹನಗಳನ್ನು ತಯಾರಿಸುತ್ತಿದ್ದು, ಅವುಗಳ ಪೈಕಿ ಬ್ರಾಂಟೋ ಸ್ಕೈ ಲಿಫ್ಟ್ ಫಿನ್‌ಲ್ಯಾಂಡ್ ಸಂಸ್ಥೆಯವರಿಂದ ರೂ.32 ಕೋಟಿಗಳ ವೆಚ್ಚದಲ್ಲಿ ಖರೀದಿಸಲಾಗಿದೆ.

**ವಾಹನದ ವೈಶಿಷ್ಟ್ಯತೆಗಳು :**

ಈ ವಾಹನವು ವೋಲ್ವೋ ಯುರೊ-6 ಮಾದರಿಯಾಗಿದ್ದು, 500 ಕೆಜಿ ರಕ್ಷಣಾ ಕೇಜ್ ಸಾಮರ್ಥ್ಯ ಹೊಂದಿದೆ. 50 ಟನ್ ತೂಕದ ವಾಹನವು 4 ಮೀಟರ್ ಎತ್ತರ, 2.5 ಮೀ. ಅಗಲ ಹಾಗೂ 16.5 ಮೀ ಉದ್ದವಾಗಿದೆ. ಈ ಲ್ಯಾಡರ್ 360 ಡಿಗ್ರಿ ಕೋನದಲ್ಲಿ ತಿರುಗುವ ವಿಶೇಷತೆಯನ್ನು ಹೊಂದಿರುವ ಜೊತೆಗೆ ಪ್ರತಿ ನಿಮಿಷಕ್ಕೆ 3,800 ಲೀ. ನೀರನ್ನು ಹೊರಹಾಕುವ ಸಾಮರ್ಥ್ಯವನ್ನು ಹೊಂದಿದೆ.

ಈ ವಾಹನವು ವಿಶೇಷವಾದ ಅಗ್ನಿಶಮನ ಮತ್ತು ರಕ್ಷಣಾ ವಾಹನವಾಗಿದ್ದು, ವೊಲ್ವೋ ಚಾರ್ಸಿ ಮೇಲೆ ಹೈಡ್ರಾಲಿಕ್ ಲ್ಯಾಡರ್ ಹಾಗೂ ಇನ್ನಿತರೆ ರಕ್ಷಣಾ ಉಪಕರಣಗಳನ್ನು ಅಳವಡಿಸಲಾಗಿದೆ. ಸುರಕ್ಷತೆಯಿಂದ ಹಾಗೂ ಸಮರ್ಪಕವಾಗಿ 90 ಮೀಟರ್ ಎತ್ತರದಲ್ಲಿ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಲ್ಯಾಡರ್ ಅನ್ನು ಆಧುನಿಕ ತಂತ್ರಜ್ಞಾನದ ವಿನ್ಯಾಸದೊಂದಿಗೆ ತಯಾರಿಸಿ ನುರಿತ ತಂತ್ರಜ್ಞರಿಂದ ನಿಖರವಾಗಿ ಅಳವಡಿಸಲಾಗಿದೆ.

ಅತಿ ಎತ್ತರದಲ್ಲಿ ಕಾರ್ಯ ನಿರ್ವಹಿಸುವಾಗ ಗಾಳಿಯ ಒತ್ತಡ ಹಾಗೂ ಲ್ಯಾಡರ್‌ನ ಭಾರವನ್ನು ತಡೆಯಲು ನಾಲ್ಕು ಜಾಕ್‌ಗಳನ್ನು ವಿನ್ಯಾಸಗೊಳಿಸಿದ್ದು, ಇದು ವಾಹನದ ಸಂಪೂರ್ಣ ಭಾರವನ್ನು ತಡೆಯುತ್ತದೆ. ಈ ವಾಹನದಲ್ಲಿ ಲ್ಯಾಡರ್‌ಗೆ ಮೂರು ಬೂಮ್‌ಗಳಿದ್ದು, ಮೊದಲನೇ ಮತ್ತು ಎರಡನೆಯ ಬೂಮ್‌ಗಳು ಮಾತ್ರ ಟೆಲಿಸ್ಕೋಪಿಕ್ ವಿಸ್ತರಣೆಯೊಂದಿಗೆ ನೇರ ಚಲನೆಯನ್ನು ಒದಗಿಸುತ್ತದೆ.

ಬೂಮ್‌ನ ಹೆಚ್ಚಿನ ಬಾಳಿಕೆ ಹಾಗೂ ಕಾರ್ಯ ಸಾಮರ್ಥ್ಯವನ್ನು ಹೆಚ್ಚಿಸಲು ವಿಶಿಷ್ಟ ಪ್ಲಾಸ್ಮಾ ವೆಲ್ಡಿಂಗ್ ವಿಧಾನದಲ್ಲಿ ಬೆಸುಗೆ ಹಾಕಲಾಗಿರುತ್ತದೆ. ಎತ್ತರದಲ್ಲಿ ಕಾರ್ಯನಿರ್ವಹಿಸುವಾಗ ತೊಟ್ಟಿಲ ಸುರಕ್ಷತೆಗಾಗಿ ವಿಂಡ್ ಸ್ಪೀಡ್ ಮೀಟರ್ ಮತ್ತು ಸೆನ್ಸಾರ್‌ಗಳನ್ನು ಅಳವಡಿಸಲಾಗಿರುತ್ತದೆ. ಸದರಿ ಲ್ಯಾಡರ್‌ನ್ನು ಟರ್ನ್ ಟೇಬಲ್‌ನಿಂದ ಮತ್ತು ತೊಟ್ಟಿಲಿನಿಂದ ಜಾಯ್ ಸ್ಟಿಕ್‌ನಿಂದ ಚಾಲನೆ ಮಾಡ ಬಹುದಾಗಿರುತ್ತದೆ. ಟರ್ನ್ ಟೇಬಲ್‌ನಿಂದ ತೊಟ್ಟಿಲಿಗೆ ಸಂವಹನ ನಡೆಸಲು ಇಂಟರ್‌ಕಾಂ ವ್ಯವಸ್ಥೆ ಮಾಡಲಾಗಿದೆ.

ಈ ವಾಹನದ ವೈಶಿಷ್ಟತೆಯಾದ ಲ್ಯಾಡರ್‌ನ್ನು ವಿಸ್ತರಿಸಲು ಹೈಡ್ರಾಲಿಕೆ ಪಂಪ್ ಮುಖಾಂತರ ಕಾರ್ಯಗತಗೊಳಿಸಲಾಗುತ್ತದೆ. ಒಂದು ವೇಳೆ ಹೈಡ್ರಾಲಿಕ್ ಪಂಪ್ ವಿಫಲವಾದಾಗ ಜನರೇಟರ್‌ನ ಸಹಾಯದಿಂದ ಕಾರ್ಯನಿರ್ವಹಿಸಬಹುದು. ಒಂದು ವೇಳೆ ಈ ಮೇಲಿನ ಎರಡು ವ್ಯವಸ್ಥೆ ವಿಫಲವಾದಾಗ ಹಸ್ತಚಾಲಿತ ವ್ಯವಸ್ಥೆಯಿಂದಲೂ ಕಾರ್ಯನಿರ್ವಹಿಸಬಹುದು. ವಾಹನದ ಕೆಳಮಟ್ಟದಿಂದ ತೊಟ್ಟಿಲಿಗೆ 10 ಬಾರ್ ಒತ್ತಡದಲ್ಲಿ ನಿಮಿಷಕ್ಕೆ ಸುಮಾರು 5,500 ರಿಂದ 6,000 ಲೀಟರ್ ನೀರನ್ನು ರವಾನಿಸಲು ವಾಹನದ ಮಧ್ಯಭಾಗದಲ್ಲಿ ಪಂಪನ್ನು ಅಳವಡಿಸಲಾಗಿದೆ.



**ಈ ಲ್ಯಾಡರ್‌ನ ಉಪಯೋಗಗಳು :**

ಬಹುಮಹಡಿ ಕಟ್ಟಡಗಳಲ್ಲಿ ಸಂಭವಿಸುವ ಅಗ್ನಿ ದುರಂತದ ಸಂದರ್ಭದಲ್ಲಿ ಕೆಳಗಿನಿಂದ ಕಟ್ಟಡದ ಎತ್ತರದವರೆಗೆ ನೀರನ್ನು ಒತ್ತಡದಿಂದ ರವಾನಿಸಿ ಬೆಂಕಿಯನ್ನು ನಂದಿಸಬಹುದು. ಬಹುಮಹಡಿ ಕಟ್ಟಡಗಳಲ್ಲಿ ಸಿಲುಕಿರುವ ಜನರನ್ನು ತ್ವರಿತವಾಗಿ ರಕ್ಷಣೆ ಮಾಡಲು ಉಪಯೋಗಿಸಬಹುದಾಗಿದೆ. ರಕ್ಷಣಾ ಕಾರ್ಯನಿರತ ಅಗ್ನಿಶಾಮಕರಿಗೆ ಹಾಗೂ ಕಟ್ಟಡದಲ್ಲಿ ಸಿಲುಕಿರುವವರಿಗೆ ಉಸಿರಾಟದ ಆಮ್ಲಜನಕವನ್ನು ಪೂರೈಸಬಹುದಾಗಿದೆ. ಬಹುಮಹಡಿ ಕಟ್ಟಡಗಳನ್ನು ಒತ್ತಾಯ ಪೂರ್ವಕ ಪ್ರವೇಶಿಸಲು ಉಪಯೋಗಿಸುವ ರಕ್ಷಣಾ ಉಪಕರಣಗಳಿಗೆ ಅಗತ್ಯ ಹೈಡ್ರಾಲಿಕ್-ವಿದ್ಯುತ್ ಶಕ್ತಿಯನ್ನು ಈ ವಾಹನದ ತೊಟ್ಟಿಲಿನಿಂದ ಪಡೆಯಬಹುದಾಗಿದೆ.



Downloaded From:www.kpscvaani.com

# ವಿದೇಶಕ್ಕೆ ಲಗ್ಗೆಯಿಟ್ಟಿರುವ ನುಗ್ಗೆ ಪುಡಿ



ಭೀಮನಗೌಡ ಪಿ ಮಂಡಲಮರಿ

**ಔಷಧಿಯ ತಯಾರಿಕೆಗಾಗಿ ತಾವರಗೇರಾ ಪಟ್ಟಣದ ನಂದಿ ಆರ್ಗಾನಿಕ್ ಫಾರಂನಿಂದ ನುಗ್ಗೆ ಸೊಪ್ಪಿನ ಪುಡಿಯನ್ನು ವಿದೇಶಕ್ಕೆ ರಫ್ತು ಮಾಡಲಾಗುತ್ತಿದೆ.**

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ತಾವರಗೇರಾ ಪಟ್ಟಣದ ಹೊರ ವಲಯದ ಕನ್ನಾಳ ಕ್ರಾಸ್ ಹತ್ತಿರ ಇರುವ ನಂದಿ ಆರ್ಗಾನಿಕ್ ಫಾರಂನ ಬಸಯ್ಯ ಹಿರೇಮಠ ಎಂಬುವವರು ತಮ್ಮ 75 ಎಕರೆ ಸ್ವಂತ ಜಮೀನಿನಲ್ಲಿ ನುಗ್ಗೆ ಗಿಡಗಳನ್ನು ಹಾಕಿದ್ದು, ಅದರಿಂದ ವಿವಿಧ ರೋಗಗಳ ಔಷಧಿಗಾಗಿ ನುಗ್ಗೆ ಪುಡಿಯನ್ನು ತಯಾರಿಸುತ್ತಿದ್ದಾರೆ.

ನುಗ್ಗೆಯು ಹಲವು ರೋಗಗಳಿಗೆ ರಾಮಬಾಣವಾಗಿರುವುದರಿಂದ ನಂದಿ ಆರ್ಗಾನಿಕ್ ಫಾರಂನಲ್ಲಿ ನುಗ್ಗೆ ಸೊಪ್ಪು, ನುಗ್ಗೆ ಕಾಯಿ, ನುಗ್ಗೆ ಗಿಡಗಳ ತೊಗಟೆ(ಸಿಪ್ಪೆ)ಯನ್ನು ನೆರಳಲ್ಲಿ ಒಣಗಿಸಿ ನೈಸರ್ಗಿಕವಾಗಿ ಪುಡಿಯನ್ನು ತಯಾರಿಸುತ್ತಿದ್ದಾರೆ. ಇದರಿಂದ ದೇಹಕ್ಕೆ ಪೌಷ್ಠಿಕಾಂಶ ದೊರೆಯುವುದಲ್ಲದೆ ಮಧುಮೇಹ, ಮಂಡಿ ನೋವು, ಸೊಂಟನೋವು, ನರಗಳ ದೌರ್ಬಲ್ಯ, ಕಣ್ಣು ಮತ್ತು ಉರಿ ಮೂತ್ರ, ಕ್ಯಾನ್ಸರ್, ಹಿಮೊಗ್ಲೋಬಿನ್ ಮಟ್ಟ ನಿಯಂತ್ರಣದಲ್ಲಿಟ್ಟು ಸಮತೋಲವನ್ನು ಕಾಪಾಡುತ್ತದೆ. ಹಲವು ರೋಗಗಳಿಗೆ ನುಗ್ಗೆ ಪುಡಿ ರಾಮಬಾಣವಾಗಿದೆ. ಈ ಪುಡಿಯನ್ನು ತಯಾರಿಸಲು ವಿದೇಶದ ಯಂತ್ರೋಪಕರಣಗಳನ್ನು ಇವರು ಬಳಕೆ ಮಾಡುತ್ತಿದ್ದಾರೆ. ಔಷಧಿಗಾಗಿ ಉಪಯೋಗಿಸುತ್ತಿರುವುದರಿಂದ ಇವರು ನುಗ್ಗೆ ಗಿಡಗಳಿಗೆ ಸಾವಯವ ನೈಸರ್ಗಿಕ ಗೊಬ್ಬರವನ್ನೆ ಹಾಕಿ ಬೆಳೆಸುತಿದ್ದಾರೆ.

**ನುಗ್ಗೆ ಪುಡಿ(ಪೌಡರ್) ವಿದೇಶಕ್ಕೆ ಲಗ್ಗೆ :** ಇವರ ನಂದಿ ಆರ್ಗಾನಿಕ್ ಫಾರಂನಲ್ಲಿ ನುಗ್ಗೆ ಸೊಪ್ಪು, ನುಗ್ಗೆ ಕಾಯಿ, ನುಗ್ಗೆ ಗಿಡಗಳ ತೊಗಟೆ(ಸಿಪ್ಪೆ)ಯನ್ನು ನೆರಳಲ್ಲಿ ಒಣಗಿಸಿ ನೈಸರ್ಗಿಕವಾಗಿ ಪುಡಿಯನ್ನು ತಯಾರಿಸಿ, ಈ ಪುಡಿಯನ್ನು ಫ್ರಾನ್ಸ್, ಕೋರಿಯಾ, ಸೌತ್ ಆಫ್ರಿಕಾ, ಯುಎಸ್ಎ, ಯುರೋಪ್, ಕೆನಡಾ, ದುಬೈ ಸೇರಿದಂತೆ ಹಲವು ದೇಶಗಳಿಗೆ ಈಗಾಗಲೇ ನುಗ್ಗೆ ಪುಡಿಯನ್ನು ರಫ್ತು ಮಾಡಲಾಗುತ್ತಿದೆ. ಇದರಿಂದಾಗಿ ತಮಗೆ ಪ್ರತಿ ವರ್ಷ ನೂರಾರು ಬಿಲಿಯನ್ ಡಾಲರ್‌ನಷ್ಟು ವಹಿವಾಟು ಆಗುತ್ತಿದೆ ಎಂದು ಬಸಯ್ಯ ಹಿರೇಮಠ ಅವರು ಹೇಳುತ್ತಾರೆ.

**ಜೀವಾಮೃತ:** ನಂದಿ ಆರ್ಗಾನಿಕ್ ಫಾರಂನಲ್ಲಿ ಬಿಡುವ ಸಿಕ್ಕಾಗ ಸ್ವತ ಬಸಯ್ಯ ಹಿರೇಮಠ ಅವರೇ ಗಿಡಗಳಿಗೆ ಬೇಕಾಗುವ ಜೀವಾಮೃತವನ್ನು ತಯಾರಿಸಿಕೊಳ್ಳುತ್ತಾರೆ. ಇದಕ್ಕಾಗಿ ತೋಟದಲ್ಲಿ ಹತ್ತಾರು ಜವಾರಿ ಹಸುಗಳನ್ನು ಸಾಕಾಣಿಕೆ ಮಾಡಿದ್ದು, ಅವುಗಳ ಮೂತ್ರ(ಗೋಮೂತ್ರ) ಸೇರಿದಂತೆ ಇನ್ನಿತರ ವಸ್ತುಗಳಿಂದ ಜೀವಾಮೃತವನ್ನು ಸ್ವತ ತಾವೇ ತಯಾರಿಸುತ್ತಾರೆ.

ನಂದಿ ಆರ್ಗಾನಿಕ್ ಫಾರಂ ನಿಂದಲೇ ಸ್ಥಳಿಯವಾಗಿ ಪ್ರತಿ ವರ್ಷ 24 ಕೋಟಿ ರೂ ವಹಿವಾಟು ಆಗುತ್ತಿದೆ. ಈ ಔಷಧಿ ಕೇಂದ್ರವನ್ನು ಅಭಿವೃದ್ಧಿ ಪಡಿಸಲು ಸುಮಾರು 8 ಕೋಟಿ ರೂಗಳ ವೆಚ್ಚವನ್ನು ಭರಿಸಲಾಗಿದೆಯಂತೆ.

**ಹಲವು ಜನರಿಗೆ ಉದ್ಯೋಗ :** ನಂದಿ ಆರ್ಗಾನಿಕ್ ಫಾರಂ ಕೇಂದ್ರದಲ್ಲಿ ಸುಮಾರು 10 ರಿಂದ 15 ಜನರು ಪ್ರತಿನಿತ್ಯ ಕೆಲಸ ಮಾಡುತ್ತಿದ್ದಾರೆ. ಈ ಪುಡಿಯನ್ನು ಕೊಪ್ಪಳ ಜಿಲ್ಲಾಧಿಕಾರಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಮಕ್ಕಳ ಪೌಷ್ಠಿಕ ಆಹಾರಕ್ಕಾಗಿ ಶಿಫಾರಸ್ಸು ಮಾಡಿದ್ದಾರೆ. ಇವರ ಸಾಧನೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರ, ಭಾರತ ಸರ್ಕಾರ ಸೇರಿದಂತೆ ದೇಶ, ವಿದೇಶಗಳಲ್ಲಿ ಹತ್ತು ಹಲವು ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

ಈ ಕುರಿತು ಆಸಕ್ತಿ ಹೊಂದಿರುವವರು ಬಸಯ್ಯ ಹಿರೇಮಠ ಅವರನ್ನು ದೂರವಾಣಿ ಸಂಖ್ಯೆ 9845020948 ರಲ್ಲಿ ಸಂಪರ್ಕಿಸಬಹುದು.



Downloaded From:www.kpscvaani.com

# ಕೃಷಿ ಚಟುವಟಿಕೆಯೊಂದಿಗೆ ಸಾವಯವ ಗೊಬ್ಬರದ ಘಟಕದವರೆಗೆ...

ಸಂಬಂಧಿಕರಿಬ್ಬರು ತಮಗಿರುವ ಅತ್ಯಲ್ಪ ಕೃಷಿ ಭೂಮಿಯನ್ನು ಸಾಗುವಳಿ ಮಾಡುತ್ತಾ ಉತ್ತಮ ಬದುಕನ್ನು ಕಟ್ಟಿಕೊಂಡಿರುವ ಜೊತೆಗೆ 'ನರ್ಸರಿ' ಹಾಗೂ 'ಗೊಬ್ಬರ' ಘಟಕವನ್ನು ಆರಂಭಿಸಿರುವುದು ವಿಶೇಷ.

ಗಣಪತಿ ಹಾಸ್ಪುರ

ಕೃಷಿ ಕಾಯಕದಲ್ಲಿಯೇ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಬಹುಪಾಲು ಕೃಷಿಕರು ಕೃಷಿಯೇತರ (ಯಾವುದೇ ಕೃಷಿಗೂ ಸಂಬಂಧವೇ ಇಲ್ಲದ) ಉದ್ಯೋಗದಲ್ಲಿ ತಮ್ಮನ್ನು ಅರ್ಪಿಸಿಕೊಂಡವರೇ ಅಧಿಕ. ಅದು ಸ್ವಂತ ವ್ಯಾಪಾರ ಆಗಿರಬಹುದು, ಅಥವಾ ಖಾಸಗಿ ಕಂಪನಿಯೋ, ಸರಕಾರಿ ಕಛೇರಿಗಳಲ್ಲಿಯೋ ಕೆಲಸ ನಿರ್ವಹಿಸುತ್ತಿರಬಹುದು. ಹಾಗಾಗಿ ಗ್ರಾಮೀಣ ಪ್ರದೇಶದಲ್ಲಿ ನೆಲೆಸಿ ತಮಗಿರುವ ಕೃಷಿ ಭೂಮಿಯನ್ನು ಸಾಗುವಳಿ ಮಾಡುತ್ತಾ.... ಕೃಷಿಗೆ ಸಂಬಂಧಿಸಿದ ಕಸುಬಿನಲ್ಲಿ ತೊಡಗಿರುವವರ ಸಂಖ್ಯೆ ವಿರಳ. ಅಂಥಹ ವಿರಳರಲ್ಲಿ ಈ ಕೃಷಿಕರ ಸಾಧನೆ ಭಿನ್ನವಾಗಿ ಕಾಣುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ದೊಡ್ನಳ್ಳಿ ಸಮೀಪದ ಬೀಳೂರು ನಿವಾಸಿ ಸುರೇಶ ಹೆಗಡೆ ಹಾಗೂ ಸಿದ್ದಾಪುರ ತಾಲೂಕಿನ ಹೆಗ್ಗರಣಿಯ ಗಣಪತಿ ಭಟ್ ಅವರೇ ಈ ಸಾಹಸದ ಉದ್ಯಮವನ್ನು ಆರಂಭಿಸಿರುವ ಕೃಷಿಕರು. ಬಹುಶಃ ಇವರು ಕೃಷಿ ಕಸುಬಿನಲ್ಲಿ ಮಾತ್ರ ತಮ್ಮನ್ನು ತೊಡಗಿಸಿಕೊಂಡಿದ್ದರೆ, ಹಲವು ರೈತರಲ್ಲಿ ಒಬ್ಬರಾಗಿ ಇರುತ್ತಿದ್ದರೇನೋ? ಆದರೆ ಈ ಉತ್ಸಾಹಿ ಕೃಷಿಕರಿಬ್ಬರೂ ತಮ್ಮ ಕೃಷಿ ಚಟುವಟಿಕೆಯೊಂದಿಗೆ ಕೃಷಿ ಸಮುದಾಯಕ್ಕೆ ಬೇಕಾಗುವ ಘನ ಕಾರ್ಯದಲ್ಲಿ ತೊಡಗಿಸಿಕೊಂಡ ಪರಿಣಾಮ, ಇಂದು ಸಾವಿರಾರು ಕೃಷಿಕರು ಇವರನ್ನೇ ಪ್ರತಿಕ್ಷಣ ನೆನೆಯುವಂತಾಗಿದೆ.

ಈ ಸ್ಪರ್ಧಾತ್ಮಕ ದಿನದಲ್ಲಿ ಉದ್ಯಮ ನಡೆಸುವುದು ಕಷ್ಟವಾಗಿರುವಾಗ ಅದರಲ್ಲಿಯೂ ಕೃಷಿಗೆ ಸಂಬಂಧಿಸಿದ ಉದ್ಯಮ ಮುನ್ನಡೆಸುವುದು ಅಷ್ಟು ಸುಲಭವಲ್ಲ. ಆದಾಗ್ಯೂ ಇವರು ಕೃಷಿ ಉದ್ಯಮಗಳ ಕಲ್ಪನೆಯಲ್ಲಿ ಸಿದ್ಧವಾಗುತ್ತಿರುವ "ಭೂ ಚೈತನ್ಯ" ಎಂಬ ಸಾವಯವ ಗೊಬ್ಬರದ ಉದ್ಯಮವನ್ನು ಆರಂಭಿಸಿ ಇತರರಿಗೂ ಪ್ರೇರಣೆ ನೀಡುವಂತೆ ಯಶಸ್ವಿಯಾಗಿದ್ದಾರೆ.



"ನಮ್ಮ ನರ್ಸರಿಯಿಂದ ಗಿಡಗಳನ್ನು ಖರೀದಿಸಲು ಬೇರೆ ಬೇರೆ ಊರು, ತಾಲೂಕಿನಿಂದ ಜನರು ಬರುತ್ತಾರೆ. ಐವತ್ತು ಅಡಿಕೆ ಸಸಿಗಳನ್ನು ಖರೀದಿಸುವವರು ಒಂದಿಷ್ಟು ಸಿಲ್ವರ್ ಓಕ್ ಗಿಡವನ್ನೋ, ಲವಂಗದ ಗಿಡವನ್ನೋ, ಅಥವಾ ಇನ್ಯಾವುದೇ ಗಿಡವನ್ನು "ಉಚಿತ"ವಾಗಿ ಕೊಡಿ ಅಂತ ಕೇಳ್ತಾರೆ. ವರುಷದ ಕೊನೆಗೆ ಉಚಿತವಾಗಿ ನೀಡಿದ ಗಿಡಗಳ ಮೌಲ್ಯವನ್ನು ಲೆಕ್ಕಚಾರ ಮಾಡಿದರೆ ಅದರ ಮೊತ್ತವೇ ಅಧಿಕವಾಗಿರುತ್ತದೆ. ಹಾಗಾಗಿ ನಾವೀಗ ನರ್ಸರಿಯಲ್ಲಿ ಕೇವಲ ಅಡಿಕೆ ಮತ್ತು ಕಾಳು ಮೆಣಸಿನ ಕುಡಿಗಳನ್ನು ಮಾತ್ರ ಬೆಳೆಸುತ್ತಿದ್ದೇವೆ ಎಂದು ಗಣಪತಿ ಭಟ್ ಮತ್ತು ಸುರೇಶ ಹೆಗಡೆ ಅವರು ತಮ್ಮ ಅನುಭವದ ಬುತ್ತಿಯನ್ನು ತೆರೆದಿಡುತ್ತಾರೆ."



Downloaded From:www.kpscvaani.com

**ಆರಂಭವಾಗಿದ್ದು ಹೇಗೆ?**

ಈ ಕೃಷಿಕರಿಗೆ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು, ಕೃಷಿಗೆ ಪರ್ಯಾಯವಾಗಿ ಏನಾದರೊಂದು ಉದ್ಯೋಗವನ್ನು ಮಾಡಬೇಕೆಂಬ ಆಸೆ ಟಿಸಿಲೊಡೆದಿತ್ತು. ಹಾಗೇ ಶುರುವಾದ ಇವರ ಕನಸಿನ ಬೀಜ 'ನರ್ಸರಿ' ಉದ್ಯಮವಾಗಿ (2013 ರಲ್ಲಿ) ಚಿಗುರೊಡೆದಿತ್ತು. ಅದನ್ನು "ಮಲೆನಾಡು ನರ್ಸರಿ" ಎಂಬ ಹೆಸರಿನಲ್ಲಿ ಆರಂಭಿಸಿದರು. ಸುತ್ತ ಮುತ್ತಲಿನ ಹಳ್ಳಿಗಳನ್ನು ಓಡಾಡಿ ಯಾವ ಯಾವ ಗಿಡಗಳನ್ನು ಜನಸಾಮಾನ್ಯರು ಖರೀದಿ ಮಾಡುತ್ತಾರೆ, ಯಾವ ಸಮಯದಲ್ಲಿ ಯಾವೆಲ್ಲ ಗಿಡಗಳಿಗೆ ಬೇಡಿಕೆ ಇರುತ್ತದೆ ಎಂಬುದನ್ನು ಕೂಲಂಕುಶವಾಗಿ ತಿಳಿದುಕೊಂಡರು. ಆಮೇಲೆ ಸುಮಾರು 20 ಸಾವಿರ ಅಡಿಕೆ ಸಸಿ, ಹಾಗೂ 20 ಸಾವಿರದಷ್ಟು ಕಾಳು ಮೆಣಸಿನ ಕುಡಿ, ಸಿಲ್ವರ್ ಓಕ್, ತೆಂಗು, ಲವಂಗ.... ಹೀಗೆ ವಿಭಿನ್ನ ಬಗೆಯ ಗಿಡಗಳನ್ನು ಸಿದ್ಧಮಾಡಿ ನರ್ಸರಿಯಲ್ಲಿ ಇಟ್ಟುಕೊಂಡರು. ಇವರ ನರ್ಸರಿಯಲ್ಲಿ ಹಿಪ್ಲಿಗೆ ಮೆಣಸಿನ ಕುಡು ಕಸಿ ಮಾಡಿದ್ದು ಲಭ್ಯವಿದೆ. ಇದರಿಂದ ಗಿಡಗಳನ್ನು ಒಯ್ದವರೇ ನಾಲ್ಕಾರು ಮಂದಿಗೆ ತಿಳಿಸುತ್ತಿದ್ದರು. ಹಾಗಾಗಿ **'ಮಲೆನಾಡು ನರ್ಸರಿ'** ಬಹು ಬೇಗನೆ ಪ್ರಸಿದ್ಧವಾಯಿತು.

ಇವರ ನರ್ಸರಿಯಲ್ಲಿ ಒಳ್ಳೆಯ ಗುಣಮಟ್ಟದ ಗಿಡಗಳು ಸಿಗುವುದರಿಂದ ಸ್ಥಳೀಯರಲ್ಲದೇ ಹೊರಗಿನ ಜನರೂ ಸಹಾ ವಿಶ್ವಾಸದಿಂದ ಇವರಲ್ಲಿ ಗಿಡಗಳನ್ನು ಖರೀದಿ ಮಾಡಲು ಬರುತಿದ್ದಾರೆ. ನಿರೀಕ್ಷೆ ಮಿರಿ ನರ್ಸರಿಯ ಗಿಡಗಳ ವ್ಯಾಪಾರ ಆಗುತ್ತಿದೆ. ನರ್ಸರಿ ಆರಂಭಿಸಿ ಆರು ವರ್ಷಗಳಾಗಿದ್ದು, ಗಿಡಗಳನ್ನು ಪೂರೈಸಲು ಸಾಧ್ಯವಾಗದಷ್ಟು ಬೇಡಿಕೆಗಳು ರೈತಾಪಿ ಜನರಿಂದ ಬರುತ್ತಿವೆ ಎಂದು ಗಣಪತಿ ಭಟ್ ಹೇಳುತ್ತಾರೆ.

**ಮೌಲ್ಯ ಅರ್ಥವಾಗುತ್ತಿಲ್ಲ!**

ನಮ್ಮ 'ಮಲೆನಾಡು ನರ್ಸರಿ'ಯು ಶಿರಸಿಯಿಂದ ಕೇವಲ ಹದಿಮೂರು ಕಿ.ಮೀ. ದೂರದಲ್ಲಿ ಮುಖ್ಯ ರಸ್ತೆಯ ಪಕ್ಕದಲ್ಲಿಯೇ ಇದೆ. ಕೃಷಿಕರು ಯಾವುದೇ ಸಮಯದಲ್ಲಿ ಬಂದರೂ, ಗಿಡಗಳನ್ನು ನೀಡಿದ್ದೇವೆ. ಹಗಲು ಇರುಳೆನ್ನದೆ ಜವಾಬ್ದಾರಿ ಮತ್ತು ಆಸಕ್ತಿಯಿಂದ ನಾವು ನಾನಾ ರೀತಿಯ ಗಿಡಗಳನ್ನು ಬೆಳೆಸಿದ್ದೇವೆ. ನಮ್ಮ ನರ್ಸರಿಯಲ್ಲಿ ಇರುವಂತಹ ಗಿಡಗಳಿಗೆ ಅದರದ್ದೇ ಆದ ಮೌಲ್ಯವೂ ಇದೆ. ಆದರೆ ಗಿಡಗಳನ್ನು ಕೊಂಡುಕೊಳ್ಳಲು ಬರುವ ಅನೇಕರಿಗೆ ಗಿಡಗಳ ಮೌಲ್ಯವೇ ಅರ್ಥವಾಗುವುದಿಲ್ಲ ಎಂದು ಸುರೇಶ ಹೆಗಡೆ ಬೇಸರ ವ್ಯಕ್ತಪಡಿಸುತ್ತಾರೆ.

**ಇಲಾಖೆಯವರ ಸಹಕಾರ**

ಇವರ ನರ್ಸರಿಗೆ ಕೃಷಿ ತೋಟಗಾರಿಕಾ ಇಲಾಖೆಯವರು ಸಂಪೂರ್ಣ ಸಹಕಾರ ನೀಡುತ್ತಿದ್ದಾರೆ. ಅದರಲ್ಲಿಯೂ ಕೃಷಿ ವಿಜ್ಞಾನಿ ಡಾ॥ ವಿ. ಎಂ. ಹೆಗಡೆ ಅವರ ಮಾರ್ಗದರ್ಶನದಲ್ಲಿಯೇ ನರ್ಸರಿ ಹಾಗೂ ಗೊಬ್ಬರ ಘಟಕವನ್ನು ನಡೆಸುತ್ತಿದ್ದಾರೆ. ಕಳೆದ ಮೂರು ವರುಷಗಳಿಂದ ನರ್ಸರಿಯಲ್ಲಿ ಕೇವಲ ಕಾಳು ಮೆಣಸು ಮತ್ತು ಅಡಿಕೆ ಸಸಿಗಳನ್ನು ಮಾತ್ರ ಸಿದ್ಧಮಾಡಲಾಗುತ್ತಿದೆ.

**ಸಾವಯವ ಗೊಬ್ಬರದ ಉದ್ಯಮ**

ಇವರು ಕೇವಲ ಸಸಿಗಳನ್ನು ಮಾತ್ರ ಬೆಳೆಸುತ್ತಿಲ್ಲ. ಗಿಡಗಳನ್ನು ಬೆಳೆಸಲು ಬೇಕಾಗುವ ಫಲವತ್ತಾದ ಸಾವಯವ ಗೊಬ್ಬರವನ್ನು ಸಹಾ ಸಿದ್ಧ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಇವತ್ತಿನ ಕಾಲಘಟ್ಟದಲ್ಲಿ ಈ ಗೊಬ್ಬರವನ್ನು ವ್ಯವಸ್ಥಿತವಾಗಿ ಸಿದ್ಧಪಡಿಸಿ, ಸ್ಪರ್ಧಾತ್ಮಕ ದರದಲ್ಲಿ ನೀಡಿ, ಘಟಕವನ್ನು ಲಾಭದಾಯಕವಾಗಿ ನಡೆಸುವುದು ಅಷ್ಟು ಸುಲಭವಲ್ಲ. ಈ ಗೊಬ್ಬರ ಉದ್ಯಮವನ್ನು ನಡೆಸಲು ಸಾಕಷ್ಟು ಬಂಡವಾಳದ ಜೊತೆ ಕಠಿಣ ಪರಿಶ್ರಮವೂ ಬೇಕು. ಇನ್ನು ಸಂಘ– ಸಂಸ್ಥೆಗಳು, ಕಂಪನಿಗಳು ತಯಾರಿಸುವ ಗೊಬ್ಬರಕ್ಕಿಂತಲೂ ಹೆಚ್ಚು ಗುಣಮಟ್ಟ ಕಾಯ್ದುಕೊಂಡು, ದರದ ಪೈಪೋಟಿಯನ್ನು ಎದುರಿಸುವ ಧೈರ್ಯ, ಛಲವೂ ಇರಬೇಕಾಗುತ್ತದೆ. ಅದೆಲ್ಲವನ್ನು ಹಂತ ಹಂತವಾಗಿ ಎದುರಿಸಿಕೊಂಡು ಬಂದಿರುವ ಈ ಕೃಷಿ ಉದ್ಯಮಿಗಳು ತಯಾರಿಸುತ್ತಿರುವ "ಭೂ ಚೈತನ್ಯ" ಎಂಬ ಸಾವಯವ ಗೊಬ್ಬರ ಉತ್ಕೃಷ್ಟವಾಗಿದೆ ಎಂದು ಅದನ್ನು ಬಳಕೆ ಮಾಡುತ್ತಿರುವ ಕೃಷಿಕರೇ ಸರ್ಟಿಫಿಕೇಟ್ ನೀಡುತ್ತಾರೆ.

ನರ್ಸರಿಯನ್ನು ಆರಂಭಿಸಿದ ಮೇಲೆ ಬೇರೆ ಬೇರೆ ಊರುಗಳಿಗೆ ಸಂಚಾರ ಮಾಡಿದ ಸಂದರ್ಭದಲ್ಲಿ ಇವರಿಗೆ ಗೊಬ್ಬರ ತಯಾರಿಸಬೇಕೆಂಬ ಆಲೋಚನೆಯೂ ಹೊಳೆದಿತ್ತು. ರಾಜ್ಯದ ವಿವಿಧ ಭಾಗಗಳಲ್ಲಿ ತಯಾರಿಸುವ ಗೊಬ್ಬರ ತಯಾರಿಸುವ ಘಟಕಗಳಿಗೆ ಖುದ್ದು ಭೇಟಿ ಮಾಡಿ, ಹಲವು ಮಾಹಿತಿಗಳನ್ನು ಪಡೆದುಕೊಂಡರು. ಸಾವಯವ ಗೊಬ್ಬರ ತಯಾರಿಸಲು ಅವಶ್ಯವಾಗಿ ಬೇಕಾಗುವ ಕಚ್ಚಾ ಸಾಮಗ್ರಿಗಳು ಎಲ್ಲೆಲ್ಲಿ ಸಿಗುತ್ತದೆ, ಯಾವ ಸಮಯದಲ್ಲಿ ತಂದು ದಾಸ್ತಾನು ಮಾಡಬೇಕು, ಅವನ್ನು ಯಾವ ಪ್ರಮಾಣದಲ್ಲಿ ಹಾಕಿಕೊಂಡು ಮಿಶ್ರಣ ಮಾಡಬೇಕು.... ಹೀಗೆ ಅದರ ಸಾಧಕ–ಬಾಧಕ ವಿಚಾರ ವಿನಿಮಯ ಮಾಡಿಕೊಂಡು, ಹತ್ತು ವರುಷದ ಹಿಂದೆ ಪ್ರಾಯೋಗಿಕವಾಗಿ "ಭೂ ಚೈತನ್ಯ" ಎಂಬ ಸಾವಯವ ಗೊಬ್ಬರದ ಘಟಕವನ್ನು ಪ್ರಾರಂಭಿಸಿದರು. ತಾವು ಸಿದ್ಧಮಾಡಿದ ಗೊಬ್ಬರವನ್ನು ಮೊದಲಿಗೆ ಮಾರುಕಟ್ಟೆಗೆ ನೀಡದೇ ಸ್ವತಃ ತಮ್ಮ ಅಡಿಕೆ ತೋಟಗಳಿಗೆ ಹಾಕಿ ಪ್ರಯೋಗ ಮಾಡಿದರು. ಸುಮಾರು ಎರಡು ವರುಷಗಳ ಕಾಲ ತಾವೇ ಗೊಬ್ಬರದ ಫಲಾನುಭವಿಗಳಾಗಿದ್ದರು. ಸ್ವತಃ ಪ್ರಯೋಗ ಮಾಡಿದ ನಂತರವೇ ಗೊಬ್ಬರವನ್ನು ಮಾರಾಟ ಮಾಡುತ್ತಿದ್ದಾರೆ.

ಇವರು ತಯಾರಿಸುವ ಈ ಭೂ ಚೈತನ್ಯ ಗೊಬ್ಬರದಲ್ಲಿ ಸಂಸ್ಕರಿಸಿದ 'ಶುಗರ್ ಕೇನ್', 'ಕೋಕ್ ಫಿಟ್', 'ಬೇವಿನ ಹಿಂಡಿ', 'ಹರಳು ಹಿಂಡಿ', 'ಟ್ರೈಕೋಡ್ರಮಾ'.... ಇತ್ಯಾದಿಗಳನ್ನು ತಜ್ಞರಾದ ಡಾ॥ ವಿ. ಎಂ. ಹೆಗಡೆ ಅವರು ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿಯೇ ಮಿಶ್ರಣ ಮಾಡಿ, ಅವರ ಮಾರ್ಗದರ್ಶನದಲ್ಲಿಯೇ ಈ ಗೊಬ್ಬರವನ್ನು ಸಿದ್ಧ ಮಾಡುತ್ತಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲದೆ ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು.... ಹೀಗೆ ಬೇರೆ ಬೇರೆ ಜಿಲ್ಲೆಯವರು, ಮತ್ತು ಗೋವಾದ ಕೆಲವು ರೈತರು ಸಹಾ ಇವರಿಂದ ಗೊಬ್ಬರವನ್ನು ಖರೀದಿಸುತ್ತಿದ್ದಾರೆ.

ಯಾವುದೇ ವ್ಯಕ್ತಿ ಒಂದು ಕೆಲಸ ಮಾಡುವುದೇ ಆರ್ಥಿಕವಾಗಿ ಸದೃಢ ಆಗಬೇಕು, ನಮ್ಮ ಸಂಸಾರದ ನೌಕೆ ಸುಗಮವಾಗಿ ನಡೆಯಬೇಕು ಎಂಬ ಆಶಯದಿಂದ. ಅಂತೆಯೇ ಇವರು ಕೃಷಿಯೊಂದಿಗೆ ಒಂದು ಉದ್ಯೋಗ ನಡೆಸಬೇಕು ಎಂಬ ಉದ್ದೇಶವನ್ನು ಇಟ್ಟುಕೊಂಡೇ 'ನರ್ಸರಿ' ಹಾಗೂ 'ಗೊಬ್ಬರ' ಘಟಕವನ್ನು ಆರಂಭಿಸಿದರು. ಆರಂಭದ ದಿನಗಳಲ್ಲಿ ನೂರೆಂಟು ವಿಘ್ನಗಳು ಕಾಡಿದರೂ, ಅವೆಲ್ಲವನ್ನು ಎದುರಿಸಿಕೊಂಡು ಧೈರ್ಯದಿಂದ ಮುನ್ನಡೆಸಿಕೊಂಡು ಬರಲಾಗಿ ಇವರ ಎರಡೂ ಉದ್ಯಮಗಳು ಇಂದು ಚೆನ್ನಾಗಿಯೇ ನಡೆಯುತ್ತಿದೆ. ಜೊತೆಗೆ ಲಾಭದಲ್ಲಿಯೇ ಇವೆ. ಉದ್ಯಮ ಯಶಸು ಕಾಣಲು ಇವರ ಪ್ರಾಮಾಣಿಕ ವ್ಯವಹಾರವೇ ಕಾರಣ ಎಂದರೆ ತಪ್ಪಾಗಲಾರದು.

ಇವರನ್ನು ಸಂಪರ್ಕಿಸಲು ಇಚ್ಛಿಸುವವರು ದೂರವಾಣಿ ಸಂಖ್ಯೆ 9449111105 ಅಥವಾ 9481463954 ಕ್ಕೆ ಕರೆ ಮಾಡಬಹುದು. ■



Downloaded From:www.kpscvaani.com





# ಮಾನಸಿಕ ರೋಗದ ಬಗ್ಗೆ ಸಮಾಜದಲ್ಲಿ ತಪ್ಪು ಕಲ್ಪನೆ

**ಸಮಾಜದಲ್ಲಿ ಈ ರೋಗದ ಬಗ್ಗೆ ಇರುವ ತಪ್ಪು ಕಲ್ಪನೆಯೇ ಜನರು ತಮ್ಮ ಮಾನಸಿಕ ಖಾಯಿಲೆಯ ಬಗ್ಗೆ ಹೇಳಿಕೊಳ್ಳಲು ಹಿಂಜರಿಯುವುದಕ್ಕೆ ಕಾರಣ.**

ಡಾ. ಎನ್. ಎಸ್. ದಿವ್ಯಾಶ್ರೀ

**ಮಾ**ನಸಿಕ ಸ್ವಾಸ್ಥ್ಯದ ಬಗೆಗಿನ ಪಿಡುಗು ಮನುಷ್ಯನ ನಾಗರೀಕತೆಯ ಉಗಮದಷ್ಟೇ ಹಳೆಯದಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ವರದಿ ಪ್ರಕಾರವಾಗಿ ಪ್ರಪಂಚದಾದ್ಯಂತ 450 ಮಿಲಿಯನ್ ಜನಸಂಖ್ಯೆ ಒಂದಲ್ಲ ಒಂದು ಮಾನಸಿಕ ಅನಾರೋಗ್ಯದಿಂದ ಬಳಲುತ್ತಿದೆಯಾದರೂ ಅದರಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ ತುಂಬಾ ಕಡಿಮೆ. ಬಹುಪಾಲು ಜನರು ತಮ್ಮ ಮಾನಸಿಕ ಅನಾರೋಗ್ಯದ ಬಗ್ಗೆ ಹೇಳಲು ಹಿಂಜರಿಯುತ್ತಾರೆ. ಇದಕ್ಕೆ ಮುಖ್ಯವಾಗಿ ಮಾನಸಿಕ ರೋಗಗಳ ಬಗೆಗೆ ಸಮಾಜದಲ್ಲಿರುವ ಕಳಂಕ, ಅಜ್ಞಾನ ಹಾಗೂ ತಪ್ಪು ಕಲ್ಪನೆಯು ಕಾರಣವಾಗಿದೆ.

ಹಾಗಾಗಿ ಮಾನಸಿಕ ರೋಗಿಯ ಬಗ್ಗೆ ಜನರಲ್ಲಿ ಇರುವ ತಪ್ಪು ಕಲ್ಪನೆಯನ್ನು ಹೋಗಲಾಡಿಸುವ ಉದ್ದೇಶದಿಂದ ಬೆಂಗಳೂರು ಮೆಡಿಕಲ್ ಕಾಲೇಜಿನ ಮನೋವೈದ್ಯಕೀಯ ವಿಭಾಗದ ಹಿರಿಯ ವೈದ್ಯರಾದ ಡಾ. ಎನ್.ಎಸ್. ದಿವ್ಯಾಶ್ರೀ ಅವರು ಕರ್ನಾಟಕ ರಾಜ್ಯ ಮಾನಸಿಕ ಆರೋಗ್ಯ ಪ್ರಾಧಿಕಾರದ ಸಹಯೋಗದಲ್ಲಿ ಮಾನಸಿಕ ಖಾಯಿಲೆಗೆ ಒಳಗಾದವರು ಏನೆಲ್ಲಾ ಅನುಭವಿಸುತ್ತಾರೆ ಹಾಗೂ ಅವರನ್ನು ಹೇಗೆ ಈ ರೋಗದಿಂದ ಹೊರತರುವುದು ಎಂಬ ವಿಷಯದಲ್ಲಿ ಅರಿವು ಮೂಡಿಸುವಂತಹ ಲೇಖನವನ್ನು ವಾರ್ತಾ ಜನಪದಕ್ಕೆ ನೀಡಿದ್ದಾರೆ.

ಜನರಿಗೆ ಮಾನಸಿಕ ಆರೋಗ್ಯ ಮತ್ತು ಅನಾರೋಗ್ಯದ ಬಗ್ಗೆ ಇರುವ ಋಣಾತ್ಮಕ ನಂಬಿಕೆಗಳು ಹಾಗೂ ವರ್ತನೆಗಳ ಸಮೂಹವನ್ನೇ ಕಳಂಕ/ ಪಿಡುಗು ಎನ್ನುತ್ತೇವೆ. ಇದು ವ್ಯಕ್ತಿಯನ್ನು ಇತರರಿಂದ ಪ್ರತ್ಯೇಕಿಸುವ ಅಪಖ್ಯಾತಿ ಹಾಗೂ ಅವಮಾನದ ಸಂಕೇತ ಎಂದು ವಿವರಿಸಲಾಗಿದೆ. ಇದು ಸಾಮಾನ್ಯ ಜನರಿಗೆ ಮಾನಸಿಕ ರೋಗಿಗಳ ಕುರಿತು ಭಯ, ತಿರಸ್ಕಾರ, ಪ್ರತ್ಯೇಕತೆ ಹಾಗೂ ತಾರತಮ್ಯವನ್ನು ಹುಟ್ಟುಹಾಕುತ್ತದೆ. ಇದು ಮಾನಸಿಕ ಅಸ್ವಸ್ಥರನ್ನು ಸಮಾಜದೊಂದಿಗೆ ಬೆರೆಯದಂತೆ, ಹಾಗೂ ಅವರನ್ನು ಪ್ರತ್ಯೇಕವಾಗಿ ಕಾಣುವಂತೆ ಮಾಡುತ್ತದೆ. ಇದರಿಂದಾಗಿ ಮಾನಸಿಕ ಅಸ್ವಸ್ಥರು ಸಮಾಜದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಲು ಅಗತ್ಯವಿರುವ ಸಂಪನ್ಮೂಲಗಳಾದ ಶೈಕ್ಷಣಿಕ, ಉದ್ಯೋಗ, ಆರ್ಥಿಕ, ಕುಟುಂಬ ಹಾಗೂ ಸಮುದಾಯದ ಸಹಕಾರ, ಗುಣಮಟ್ಟದ ಆರೋಗ್ಯಸೇವೆ ಮುಂತಾದವುಗಳಿಂದ ವಂಚಿತರಾಗುತ್ತಿದ್ದಾರೆ. ಇದು ದೀರ್ಘ



Downloaded From:www.kpscvaani.com



ಕಾಲದಲ್ಲಿ ಸಮಾಜದಲ್ಲಿನ ಅಸಮಾನತೆಗೆ ಕಾರಣವಾಗುತ್ತಿದೆ ಹಾಗೂ ಮಾನಸಿಕ ಅಸ್ವಸ್ಥರ ಮೇಲೆ ಋಣಾತ್ಮಕ ಪರಿಣಾಮವನ್ನು ಬೀರುತ್ತಿದೆ.

ನಮ್ಮೀ ಸಮಾಜದಲ್ಲಿ ಮಾನಸಿಕ ರೋಗ ಹಾಗೂ ರೋಗಿಗಳ ಬಗ್ಗೆ ಋಣಾತ್ಮಕ ವರ್ತನೆಗಳು ತೀವ್ರವಾಗಿದೆ. ಮಾನಸಿಕ ರೋಗಿಗಳನ್ನು 'ಹುಚ್ಚ', 'ಮೆಂಟಲ್' ಎಂಬಿತ್ಯಾದಿ ರೀತಿಯಾಗಿ ಕರೆದು ಗೇಲಿ ಮಾಡುವುದು, ಕಲ್ಲು ಹೊಡೆಯುವುದು ಸಾಮಾನ್ಯವಾಗಿದೆ. ಅವರುಗಳೂ ನಮ್ಮಂತೆಯೇ ಮನುಷ್ಯರೂ ಎಂಬ ಭಾವನೆ ಜನರ ಮನಸ್ಸಿನಲ್ಲಿ ಮೂಡದೆ, ಅವರನ್ನು ಪ್ರತ್ಯೇಕವಾಗಿ ಕಾಣಲಾಗುತ್ತಿದೆ. ಇದು ಮಾನಸಿಕ ಅಸ್ವಸ್ಥರ ಚಿಕಿತ್ಸೆ ಹಾಗೂ ಪುನರ್ವಸತಿಗೆ ಪ್ರಮುಖ ತಡೆಗೋಡೆಯಾಗಿದೆ. ಇದರಿಂದ ಅವರ ಪ್ರಗತಿಗೆ ಹಿನ್ನಡೆಯಾಗಿದೆ.

ಮಾನಸಿಕ ಅಸ್ವಸ್ಥತೆಯ ಬಗ್ಗೆ ಅನೇಕ ನಂಬಿಕೆಗಳು ಹಾಗೂ ವರ್ತನೆಗಳು ರೂಪುಗೊಳ್ಳಲು ಹಲವಾರು ಕಾರಣಗಳಿವೆ. ಅವುಗಳೆಂದರೆ,

- ಮಾನಸಿಕ ಅಸ್ವಸ್ಥತೆಯ ಬಗ್ಗೆ ಇರುವ ತಿಳುವಳಿಕೆಯ ಕೊರತೆ
- ಮಾನಸಿಕ ರೋಗಿಗಳೊಂದಿಗಿನ ಸಂವಹನ ಮತ್ತು ಒಡನಾಟದ ಕೊರತೆ
- ಮಾನಸಿಕ ರೋಗ ಲಕ್ಷಣಗಳ ಬಗೆಗಿನ ತಪ್ಪುಗ್ರಹಿಕೆ (ಅವರು ಬೇಕೆಂತಲೇ ಈ ರೀತಿ ವರ್ತಿಸುತ್ತಾರೆ ಎಂಬ ತಪ್ಪು ಕಲ್ಪನೆ)
- ಮಾನಸಿಕ ರೋಗ ಉಳ್ಳವರು ದುರ್ಬಲರು, ಅಶಕ್ತರು, ಹೇಡಿಗಳು ಹಾಗೂ ಸೋಮಾರಿಗಳು ಎಂಬ ಕಲ್ಪನೆ
- ಮಾನಸಿಕ ರೋಗದ ಬಗ್ಗೆ ನಮ್ಮ ಸಂಸ್ಕೃತಿಯಲ್ಲಿರುವ ಮೂಢನಂಬಿಕೆಗಳು ಹಾಗೂ ಕಟ್ಟುಕಥೆಗಳು
- ಮಾಧ್ಯಮಗಳಲ್ಲಿ ಸಿಗುವ ತಪ್ಪು ಮಾಹಿತಿಗಳು

ಮಾನಸಿಕ ಖಾಯಿಲೆ ಬಗೆಗಿನ ಈ ಪಿಡುಗು 5 ರೀತಿಯಾಗಿರುತ್ತವೆ. ಮೊದಲನೆಯದು ಸಾರ್ವಜನಿಕ ಕಳಂಕ (Public Stigma) –ಅಂದರೆ ಮಾನಸಿಕ ರೋಗಿಗಳ ಹಾಗೂ ಅವರ ಮನೆಯವರ ಬಗೆಗೆ ಸಾಮಾನ್ಯ ಜನರಿಗಿರುವಂತಹ ಅಪನಂಬಿಕೆಗಳು ಮತ್ತು ಅವರೊಂದಿಗೆ ವರ್ತಿಸುವ ರೀತಿ ಎರಡನೆಯದು ಸ್ವಯಂ ಕಳಂಕ (Self-Stigma)– ಅಂದರೆ ಮಾನಸಿಕ ರೋಗಿಯು ತನ್ನ ಬಗೆಗೆ ಅನುಭವಿಸುವಂತಹ ಕೀಳರಿಮೆ ಹಾಗೂ ಆತ್ಮವಿಶ್ವಾಸದ ಕೊರತೆ.

ಮೂರನೆಯದು ಸಾಂಸ್ಥಿಕ ಕಳಂಕ (InstitutionalStigma)– ಇದು ಸರಕಾರದ ಮತ್ತು ಎನ್. ಜಿ. ಒ. ಗಳ ನೀತಿಗಳನ್ನು ಒಳಗೊಂಡಿರುತ್ತದೆ (ಮಾನಸಿಕ ಆರೋಗ್ಯ ಹಾಗೂ ರೋಗಗಳಿಗೆ ಸರಕಾರದ ಬಜೆಟ್‌ನಲ್ಲಿ ಕಡಿಮೆ ಹಣ ವಿನಿಯೋಗ, ಮಾನಸಿಕ ರೋಗಗಳಿಗೆ ಸರಿಯಾದ ಆರೋಗ್ಯ ವಿಮೆ ಇಲ್ಲದಿರುವುದು) ನಾಲ್ಕನೆಯದು ಸಂಘದಿಂದ ಕಳಂಕ (Stigma by Association)– ಅಂದರೆ ಮಾನಸಿಕ ರೋಗಿಗಳೊಂದಿಗೆ ಒಡನಾಡುವವರ (ಸಂಬಂಧಿಕರು, ಮಾನಸಿಕ ಆರೋಗ್ಯ ಸೇವೆ ಒದಗಿಸುವವರು) ಬಗೆಗಿನ ಋಣಾತ್ಮಕ ಭಾವನೆಗಳು ಹಾಗೂ ವರ್ತನೆಗಳು (ಉದಾಹರಣೆಗೆ ಕೀಳರಿಮೆಯ ಭಾವನೆ ಹಾಗೂ ಮಾನಸಿಕ ಯಾತನೆ). ಕೊನೆಯ ಹಾಗೂ ಐದನೆಯ ರೀತಿಯ ಖಾಯಿಲೆಯೇ ದುಪ್ಪಟ್ಟು ಕಳಂಕ (Double Stigma)– ಅಂದರೆ ಮಾನಸಿಕ ರೋಗಿಯು ಒಂದಕ್ಕಿಂತ ಹೆಚ್ಚು ಬಗೆಯ ಕಳಂಕವನ್ನು ಎದುರಿಸುವುದು (ಮಾನಸಿಕ ರೋಗ ಹಾಗೂ ದೈಹಿಕ ಅಂಗವೈಕಲ್ಯ)

ಮಾನಸಿಕ ರೋಗಕ್ಕೆ ಒಳಗಾಗಿರುವವರಲ್ಲಿ ಆತ್ಮವಿಶ್ವಾಸ ಕುಂಠಿತಗೊಳ್ಳುವುದರ ಜೊತೆಗೆ ಭವಿಷ್ಯದ





Downloaded From:www.kpscvaani.com



ಬಗೆಗಿನ ಭರವಸೆಯ ಕೊರತೆ ಉಂಟಾಗುತ್ತದೆ. ಇವರಗೆ ಸಮಾಜದಲ್ಲಿ ಬೆರೆಯಲು ಸಾಧ್ಯವಾಗದ ಕಾರಣ ಒಂಟಿತನದಿಂದ ಮಾನಸಿಕ ರೋಗವು ಉಲ್ಬಣಗೊಂಡು ಅವರು ಆತ್ಮಹತ್ಯೆಗೆ ಪ್ರಯತ್ನಿಸುವ ಸಾಧ್ಯತೆಗಳಿರುತ್ತದೆ. ಸರಿಯಾದ ಸಮಯದಲ್ಲಿ ಚಿಕಿತ್ಸೆ ತೆಗೆದುಕೊಳ್ಳಲು ವಿಳಂಬ ಮಾಡಿದರೆ ರೋಗದಿಂದ ಚೇತರಿಕೆ ವಿಳಂಬವಾಗುವುದರಿಂದ ಚಿಕಿತ್ಸೆಯ ಅನುಸರಣೆಯು ಕಡಿಮೆಯಾಗುವ ಸಾಧ್ಯತೆಗಳಿರುತ್ತದೆ. ಇಂತಹ ಸಮಯದಲ್ಲಿ ಕುಟುಂಬ ಮತ್ತು ಸಮಾಜದಿಂದ ತಿರಸ್ಕರಿಸಲ್ಪಡುವ ಇವರು ಸಮಾಜದಲ್ಲಿ ಬೆದರಿಸುವಿಕೆ, ನಿಂದನೆ ಮತ್ತು ಹಿಂಸೆಗೆ ಗುರಿಯಾಗುತ್ತಾರೆ. ಸಮಾಜ ಸಂಬಂಧಗಳಲ್ಲಿ ವೈಮನಸ್ಸು ಮೂಡುವುದರಿಂದ ಉದ್ಯೋಗ/ಶಿಕ್ಷಣ ಹಾಗೂ ಸಾಮಾಜಿಕ ಚಟುವಟಿಕೆಯಿಂದ ದೂರ ಉಳಿಯುತ್ತಾರೆ. ಇದು ಒಂದು ರೀತಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ.

**ರೋಗ ತಡೆಗಟ್ಟುವ ವಿಧಾನಗಳು**


- ಜನಸಾಮಾನ್ಯರಿಗೆ ಮಾನಸಿಕ ರೋಗಗಳ ಬಗೆಗಿನ ತಿಳುವಳಿಕೆ ಕೊಡುವುದು
- ಮಾನಸಿಕ ಆರೋಗ್ಯ ಹಾಗೂ ಅನಾರೋಗ್ಯದ ಬಗ್ಗೆ ಮುಕ್ತವಾಗಿ ಮಾತನಾಡುವುದು
- ಮಾನಸಿಕ ರೋಗಗಳ ಬಗೆಗೆ ವೈಯುಕ್ತಿಕ ಅಭಿಪ್ರಾಯ ವ್ಯಕ್ತಪಡಿಸುವುದು
- ಮಾನಸಿಕ ರೋಗಿಗಳ ಬಗ್ಗೆ ಸಹಾನುಭೂತಿ
- ಸಮಾನತೆಯನ್ನು ಪ್ರೋತ್ಸಾಹಿಸುವುದು
- ಮಾನಸಿಕ ಸ್ವಾಸ್ಥ್ಯದ ಸಾಮಾಜಿಕ ಅಭಿಯಾನಗಳನ್ನು ಹಮ್ಮಿಕೊಳ್ಳುವುದು
- ಮಾಧ್ಯಮಗಳಲ್ಲಿ ಹೆಚ್ಚಿನ ಒತ್ತು ನೀಡುವುದು
- ರೋಗಿಗಳ ಪುನರ್ವಸತಿ ಹಾಗೂ ಸಬಲೀಕರಣ

ಇದಕ್ಕೆ ಅನುಗುಣವಾಗಿ ಮಾನಸಿಕ ಆರೋಗ್ಯ ರಕ್ಷಣಾ ಕಾಯಿದೆ (Mental Health Care Act) 2017 ಜಾರಿಗೆ ಬಂತು. ಈ ಕಾಯಿದೆಯ ವಿಭಾಗ 30 ಮಾನಸಿಕ ಆರೋಗ್ಯ ಹಾಗೂ ಅನಾರೋಗ್ಯಗಳ ಬಗ್ಗೆ ಅರಿವು ಮೂಡಿಸುವುದು ಹಾಗೂ ಇದಕ್ಕೆ ಅಂಟಿಕೊಂಡಿರುವ ಕಳಂಕವನ್ನು ಕಡಿಮೆ ಮಾಡಲು ಸರಕಾರ ತೆಗೆದುಕೊಳ್ಳಬೇಕಾದಂತಹ ಕ್ರಮಗಳನ್ನು ವಿವರಿಸುತ್ತದೆ. ಅವುಗಳು ಈ ಕೆಳಗಿನಂತಿವೆ

- ಮಾನಸಿಕ ಸ್ವಾಸ್ಥ್ಯ ಹಾಗೂ ಕಾಯಿದೆಯ ನಿಬಂಧನೆಗಳ ಬಗ್ಗೆ ಸಾಮಾಜಿಕ ಮಾಧ್ಯಮಗಳು (ದೂರದರ್ಶನ, ರೇಡಿಯೋ, ಪತ್ರಿಕೆ) ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಪ್ರಚಾರ ನೀಡುವುದು.
- ಮಾನಸಿಕ ರೋಗಗಳಿಗೆ ಅಂಟಿಕೊಂಡಂತಹ ಕಳಂಕವನ್ನು ಕಡಿಮೆ ಮಾಡಲು ವಿವಿಧ ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದು. ಅವುಗಳಿಗೆ ಬೇಕಾದಂತಹ ಧನಸಹಾಯ ಒದಗಿಸುವುದು.
- ಸರಕಾರಿ ಅಧಿಕಾರಿಗಳು ಹಾಗೂ ಕರ್ಮಚಾರಿಗಳಿಗೆ ಮಾನಸಿಕ ಸ್ವಾಸ್ಥ್ಯ ಹಾಗೂ ಈ ಕಾಯಿದೆಯ ಬಗ್ಗೆ ಅರಿವು ಮೂಡಿಸಲು ನಿಯಮಿತ ಮಧ್ಯಂತರಗಳಲ್ಲಿ ತರಬೇತಿ ಶಿಬಿರಗಳನ್ನು ಹಮ್ಮಿಕೊಳ್ಳುವುದು.

ಮಾನಸಿಕ ಖಾಯಿಲೆ ಯಾರಿಗೆ ಬೇಕಾದರೂ ಆಗಬಹುದು. ಅವುಗಳು ದೈಹಿಕ ಖಾಯಿಲೆಗಳಂತೆಯೇ ಒಂದು ರೋಗವೇ ಹೊರತು ಯಾವುದೇ ಶಾಪ ಅಥವಾ ಕಳಂಕವಲ್ಲ. ಮಾನಸಿಕ ರೋಗಕ್ಕೆ ಸೂಕ್ತ ಚಿಕಿತ್ಸೆ ಲಭ್ಯವಿದೆ ಹಾಗೂ ಸೂಕ್ತ ಚಿಕಿತ್ಸೆ ರೋಗದ ಪ್ರಾರಂಭಿಕ ಹಂತದಲ್ಲಿಯೇ ನೀಡಿದಲ್ಲಿ ಗುಣಮುಖ ಹೊಂದುವ ಸಾಧ್ಯತೆ ಹೆಚ್ಚಿರುತ್ತದೆ. ಚಿಕಿತ್ಸೆ ಎಷ್ಟು ಬೇಗ ಪ್ರಾರಂಭಿಸುವಿರೋ ಅಷ್ಟು ಒಳ್ಳೆಯದು. ಆದುದರಿಂದ ಮಾನಸಿಕ ರೋಗಿಗಳನ್ನು ಕೀಳಾಗಿ ಕಾಣದೆ ಅವರೂ ನಮ್ಮಂತೆಯೇ ಎಂದು ಭಾವಿಸಬೇಕು. ಆಗ ಮಾತ್ರ ಈ ಮಾನಸಿಕ ರೋಗವನ್ನು ಸಮಾಜದಿಂದ ಮುಕ್ತಗೊಳಿಸಬಹುದು.


Downloaded From:www.kpscvaani.com



# ಗಡಾಯಿಕಲ್ಲನ್ನೊಮ್ಮೆ ಹತ್ತಿ ಬನ್ನಿ...

**ಜಮಾಲಾಬಾದ್ ಕೋಟೆಯಿರುವ ಗಡಾಯಿಕಲ್ಲು ಬೆಟ್ಟವು ಚಾರಣ ಪ್ರಿಯರಿಗೆ ಸ್ವರ್ಗದ ಅನುಭವ ನೀಡುವ ತಾಣವೆನಿಸಿದೆ.**

ಸೌಮ್ಯ ಕಾರ್ಕಳ

ಬೆಳ್ತಂಗಡಿ ಉಜಿರೆಯ ಮಧ್ಯೆ ಕೆಎಸ್‌ಆರ್‌ಟಿಸಿ ಬಸ್ ಮೂಲಕ ಸಂಚರಿಸುತ್ತಿದ್ದರೆ ಎಡ ಭಾಗದಲ್ಲೊಂದು ಬೃಹದಾಕಾರದ ಕಲ್ಲು ಎದ್ದು ಕಾಣುತ್ತದೆ. ಚಂದಮಾಮ ಆಕಾಶದಲ್ಲಿ ಮರೆಯಾಗಿ ಹೋದಂತೆ, ನಮ್ಮ ಹಿಂದೆ ಬಂದಂತೆ, ಕಾಣುವ ಈ ವಿಶೇಷ ಆಕರ್ಷಣೆ ಉಜಿರೆ ಸಮೀಪಿಸುವವರೆಗೂ ನಮ್ಮನ್ನು ಹಿಂಬಾಲಿಸುತ್ತದೆ. ಬಯಲು ಪ್ರದೇಶದಲ್ಲಿ ವಿಸ್ತಾರವಾಗಿ ಕಾಣುವ ಜಾಗದಲ್ಲಿ ಪ್ರಯಾಣಿಕರ ಕೈಯಲ್ಲಿರುವ ಮೊಬೈಲ್‌ಗಳು ಅದರ ಫೋಟೋ ಕ್ಲಿಕ್ಕಿಸುತ್ತವೆ. ಪಶ್ಚಿಮ ಘಟ್ಟದ ಹಿನ್ನೆಲೆ ಹೊಂದಿರುವ ಈ ಪ್ರದೇಶ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಇದುವೇ ಗಡಾಯಿಕಲ್ಲು ಅರ್ಥಾತ್ ಜಮಲಾಬಾದ್ ಕೋಟೆ.

ಬೆಳ್ತಂಗಡಿ ತಾಲೂಕು ಎಂದಾಗ ಪಕ್ಕನೆ ನೆನಪಿಗೆ ಬರುವುದು ಆಕರ್ಷಣೀಯ ಗಡಾಯಿಕಲ್ಲಿನ ಚಿತ್ರಣ. 1794ರಲ್ಲಿ ಟಿಪ್ಪು ಸುಲ್ತಾನ್ ತನ್ನ ತಾಯಿ ಜಮಾಲಾರ ಸ್ಮರಣಾರ್ಥವಾಗಿ ಗಡಾಯಿಕಲ್ಲಿನ ತುದಿಯಲ್ಲಿ ಕಟ್ಟಿರುವ ಕೋಟೆಯಿಂದಾಗಿ ಇದಕ್ಕೆ ಜಮಲಾಬಾದ್ ಎಂದು ಹೆಸರು ಬಂದಿದೆ. 1799ರ 4ನೇ ಮೈಸೂರು ಯುದ್ಧದಲ್ಲಿ ಟಿಪ್ಪು ಸೋತಾಗ, ಈ ಕೋಟೆಯನ್ನು ಬ್ರಿಟಿಷರು ವಶಪಡಿಸಿಕೊಂಡರು. ಅದಕ್ಕೂ ಮೊದಲು ಗಡಾಯಿಕಲ್ಲಿಗೆ ನರಸಿಂಹಗಡ ಎಂಬ ಹೆಸರು ಇತ್ತು.

ಒಂದು ಕಾಲದಲ್ಲಿ ಟಿಪ್ಪು ಸುಲ್ತಾನ್‌ಗೆ ಆಶ್ರಯ ತಾಣವಾಗಿದ್ದ ಗಡಾಯಿಕಲ್ಲು ಇಂದು ಪ್ರಸಿದ್ಧ ಪ್ರವಾಸಿ ತಾಣವಾಗಿದ್ದು, ಚಾರಣ ಪ್ರಿಯರಿಗಂತೂ ಸ್ವರ್ಗ ಎನಿಸಿದೆ. ಗಡಾಯಿಕಲ್ಲಿನ ತುತ್ತತುದಿಗೆ ತಲುಪಬೇಕಾದರೆ 2800 ಮೆಟ್ಟಿಲುಗಳನ್ನು ಹತ್ತಬೇಕು.

ಬೆಳ್ತಂಗಡಿಯಿಂದ ಸುಮಾರು ಎಂಟು ಕಿಲೋ ಮೀಟರ್ ದೂರದಲ್ಲಿರುವ ಪ್ರಕೃತಿ ರಮಣೀಯವಾದ ಈ ರಮ್ಯ ತಾಣಕ್ಕೆ ಹೋಗಬೇಕಾದರೆ ಗ್ರಾಮೀಣ ಪ್ರದೇಶವಾದ ನಡ್ತಕ್ಕೆ ಹೋಗಿ ಅಲ್ಲಿಂದ ಎರಡು ಕಿಲೋ ಮೀಟರ್ ದೂರದ ರಸ್ತೆಯಲ್ಲಿ ಪ್ರಯಾಣಿಸಬೇಕು. ಗಡಾಯಿಕಲ್ಲು ಪ್ರವೇಶ ಹತ್ತಿರವಾದಂತೆ ಜಮಲಾಬಾದ್ ಕೋಟೆಗೆ ಕಟ್ಟಿರುವ ಬೃಹತ್ ಕಲ್ಲಿನ ಕಮಾನು ಗಮನಸೆಳೆಯುತ್ತದೆ. ಸ್ವಲ್ಪ ಮುಂದೆ ಪ್ರಯಾಣಿಸಿದರೆ ಗಡಾಯಿಕಲ್ಲಿನ ಪ್ರವೇಶದ್ವಾರ ಸಿಗುತ್ತದೆ. ಕುದುರೆಮುಖ




Downloaded From:www.kpscvaani.com

ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ ಈ ಪ್ರದೇಶ ಬರುವುದರಿಂದ ಅರಣ್ಯ ಇಲಾಖೆಯ ಒನ್ ಮ್ಯಾನ್ ಆರ್ಮಿ ಮೇಲ್ವಿಚಾರಣಾ ಠಾಣೆ ಅರ್ಥಾತ್ ತಪಾಸಣಾ ಠಾಣೆ ಇಲ್ಲಿದೆ.

ಗಡಾಯಿಕಲ್ಲು ಪ್ರಾಚ್ಯವಸ್ತು ಇಲಾಖೆ ಮತ್ತು ಅರಣ್ಯ ಇಲಾಖೆಯ ಸಹಭಾಗಿತ್ವಕ್ಕೊಳಪಟ್ಟಿದೆ. ಇದು ರಾಷ್ಟ್ರೀಯ ಸ್ಮಾರಕವಾದ್ದರಿಂದ ಕೋಟೆ ಇತಿಹಾಸವನ್ನು ಸಂರಕ್ಷಿಸುವ ಕೆಲಸವನ್ನು ಪ್ರಾಚ್ಯವಸ್ತು ಇಲಾಖೆ ಮಾಡುತ್ತಿದ್ದು, ಅರಣ್ಯ ಇಲಾಖೆ ಪ್ರವಾಸಿಗರನ್ನು ಅರಣ್ಯ ಕಾಯ್ದೆಯ ಮಿತಿಗೊಳಪಡಿಸುತ್ತದೆ. ಗಡಾಯಿಕಲ್ಲು ಹತ್ತಬೇಕಾದರೆ ವಿದ್ಯಾರ್ಥಿಗಳು ಮತ್ತು ಮಕ್ಕಳು 20 ರೂಗಳನ್ನು, ವಯಸ್ಕರು 40 ರೂ. ಹಾಗೂ ವಿದೇಶಿಯರು 80 ರೂ. ಶುಲ್ಕವನ್ನು ಪಾವತಿಸಬೇಕು.

ಸುಮಾರು 200 ಮೀಟರ್ ದೂರದವರೆಗೆ ಅರಣ್ಯ ಇಲಾಖೆ ನಿರ್ಮಾಣ ಮಾಡಿರುವ ಕಲ್ಲಿನ ಮೆಟ್ಟಿಲುಗಳನ್ನು ಹತ್ತಿ ಮುಂದೆ ಬಂದರೆ ಚಾರಣದ ಅನುಭವ ಸಿಗುತ್ತದೆ. ದಾರಿ ಉದ್ದಕ್ಕೂ ಬಿದಿರು ಮೆಳೆಯ ಜೊತೆಗೆ ವಿವಿಧ ಜಾತಿಯ ಮರಗಳು ತಂಪನ್ನು ಮತ್ತು ನೆರಳನ್ನು ನೀಡುವುದರಿಂದ ಚಾರಣದ ವೇಳೆ ದಣಿವಾಗದು. ಇಲ್ಲಿ ಹಲವೆಡೆ ಟಿಪ್ಪುವಿನ ಕಾಲದಲ್ಲಿ ನಿರ್ಮಿತವಾಗಿರುವ ಕಲ್ಲಿನ ಮೆಟ್ಟಿಲುಗಳಿವೆ. ಬೆಟ್ಟ ಪ್ರದೇಶಗಳಲ್ಲಿ ಕಂಡುಬರುವ ಒಂದು ರೀತಿಯ ಉದ್ದದ ಹುಲ್ಲುಗಳು ದಾರಿಯುದ್ದಕ್ಕೂ ಅಲ್ಲಲ್ಲಿ ಬೆಳೆದು





### ತಲುಪುವುದು ಹೇಗೆ?

ಮಂಗಳೂರು ನಗರದಿಂದ 65 ಕಿ.ಮೀ ದೂರದಲ್ಲಿರುವ ಬೆಳ್ತಂಗಡಿ ಪಟ್ಟಣಕ್ಕೆ ಬಸ್ ಹಿಡಿಯಿರಿ. ಅಲ್ಲಿಂದ ಮಂಜೊಟ್ಟಿಗೆ ಹೋಗುವ ಬಸ್ಸಿಗೆ ಹತ್ತಿ, ಸ್ಟಾಪ್ನಲ್ಲಿ ಇಳಿದು, ಒಂದೂವರೆ ಕಿಲೋ ಮೀಟರ್ ನಡೆದು ಹೋದರೆ ಅಲ್ಲಿ ಬೆಟ್ಟದ ಬುಡ ಸಿಗುತ್ತದೆ. ಅಲ್ಲಿಂದ ಬೆಟ್ಟಗಳ ಮೇಲೆ ನಿಮ್ಮ ಪ್ರಯಾಣವನ್ನು ಪ್ರಾರಂಭಿಸಿ..

ನಿಂತಿರುವುದರಿಂದ ಕೆಲವೆಡೆ ದಾರಿ ತಿಳಿಯುವುದಿಲ್ಲ. ಇಂತಹ ಸಂದರ್ಭಗಳಲ್ಲಿ ಅಲ್ಲಲ್ಲಿ ಬಿದ್ದಿರುವ ಗುಟ್ಕಾ ಪ್ಯಾಕೆಟ್‌ಗಳು ಪಾಲಿಥಿನ್ ಚೀಲಗಳು ನಮಗೆ ದಾರಿಯನ್ನು ತೋರಿಸುತ್ತವೆ.

ಕಡಿದಾದ ದಾರಿಯ ನಡುವೆ ಏರು ರಸ್ತೆಯ ರೀತಿಯಲ್ಲಿರುವ ಮೆಟ್ಟಿಲುಗಳನ್ನು ಹತ್ತುವಾಗ ಒಮ್ಮೊಮ್ಮೆ ಮೈ ಜುಮ್ಮೆನ್ನುತ್ತದೆ. ಸ್ವಲ್ಪ ಆಕಡೆ ಈಕಡೆಗೆ ಕಾಲು ಜಾರಿದರೆ ಪ್ರಪಾತಕ್ಕೆ ಬೀಳುವುದು ಗ್ಯಾರಂಟಿ. ಹಾಗಾಗಿ ಹತ್ತುವಾಗ ಕೈಯಲ್ಲೊಂದು ಊರುಗೋಲನ್ನು ಆಸರೆಯಾಗಿ ಬಳಸುವುದು ಒಳಿತು. ಪ್ರಾರಂಭದ 500 ಮೆಟ್ಟಿಲುಗಳನ್ನು ಹತ್ತುವಾಗ ಅತ್ಯಂತ ಜಾಗರೂಕರಾಗಿರಬೇಕು, ಎಚ್ಚರ ತಪ್ಪಿದರೆ ಅಪಾಯ ಕಟ್ಟಿಟ್ಟ ಬುತ್ತಿ. ಈ ಹಂತವನ್ನು ದಾಟಿ ಅಲ್ಲೇ ಮರದ ನೆರಳಲ್ಲಿ ಕೂತರೆ ಪ್ರಕೃತಿಯ ರಮಣೀಯ ದೃಶ್ಯ ಕಣ್ತುಂಬಿಕೊಳ್ಳಬಹುದು.

ಬೆಟ್ಟದ ತುತ್ತ ತುದಿಯಿಂದ ಕೆಳಗೆ ನೋಡಿದರೆ ಅಂಕುಡೊಂಕಾಗಿ ಹಾವಿನಂತೆ ಮಕಾಡೆ ಮಲಗಿರುವ ರಸ್ತೆ, ಬೆಂಕಿ ಪಟ್ಟಣದಂತೆ ಕಾಣುವ ಮನೆಗಳು, ಕುದುರೆಮುಖ ಪಶ್ಚಿಮಘಟ್ಟದ ಪ್ರಾಕೃತಿಕ ಸೌಂದರ್ಯ ಮನಸೆಳೆಯುತ್ತದೆ. ತಂಪಾದ ಗಾಳಿ ಮನಸ್ಸಿಗೆ ಮುದನೀಡುತ್ತದೆ. ತುತ್ತ ತುದಿಯಲ್ಲಿ ಸರ್ಕಾರದ ವತಿಯಿಂದ ಕಟ್ಟಲ್ಪಟ್ಟ ಬಂಗ್ಲೆಗಳಿವೆ. ಕುಡಿಯಲು ಯೋಗ್ಯವಾದ ನೀರಿರುವ ಕೆರೆಯಿದೆ. ಮೆಟ್ಟಿಲುಗಳನ್ನು ಹತ್ತಿ, ತುತ್ತತುದಿಯಲ್ಲಿ ನಿಂತು ನೋಡಿದರೆ ಆಗುವ ಅನುಭವವನ್ನು ವರ್ಣಿಸಲು ಅಸಾಧ್ಯ. ಪ್ರಕೃತಿಯ ಸೊಬಗು, ಜೊತೆಗೆ ಹಕ್ಕಿಗಳ ಹಾರಾಟ, ಸೂರ್ಯ ಮೂಡುವ ಮತ್ತು ಮುಳುಗುವ ಎಲ್ಲವೂ ಅನನ್ಯ ಆನಂದವನ್ನು ನೀಡುತ್ತವೆ. ಆದರೆ ಈ ಸುಂದರ ಪ್ರಕೃತಿಯು ಪ್ರವಾಸಿಗರಿಂದ ಮಾಲಿನ್ಯಗೊಳ್ಳುತ್ತಿರುವುದು ಬೇಸರ ತರಿಸುತ್ತದೆ. ಒಂದೆಡೆ ಈ ಬಗೆಯ ಅಸಮಾಧಾನ ಇದ್ದರು ಗಡಾಯಿಕಲ್ಲಿಗೆ ಹೋಗುವುದನ್ನಂತೂ ತಪ್ಪಿಸಿಕೊಳ್ಳುವುದು ಬೇಡ. ಒಮ್ಮೆ ಹೋದವರನ್ನು ಮತ್ತೆ ಮತ್ತೆ ಕೈ ಬೀಸಿ ಕರೆಯುತ್ತದೆ ಈ ರಮ್ಯ ರಮಣೀಯ ತಾಣ. ಚಳಿಗಾಲದಲ್ಲಿ ಮಂಜು ಹೆಚ್ಚಾಗಿರುವುದರಿಂದ ಬೇಸಿಗೆ ಕಾಲದಲ್ಲಿ ಈ ಜಾಗಕ್ಕೆ ಹೋಗುವುದು ಸೂಕ್ತ. ಸಂಜೆ ನಾಲ್ಕು ಗಂಟೆಯ ನಂತರ ಚಾರಣಕ್ಕೆ ಅವಕಾಶವಿರುವುದಿಲ್ಲ. ■



Downloaded From:www.kpscvaani.com



# ಶೋಷಿತರಿಗೆ ಸಂಜೀವಿನಿಯಾಗಿರುವ ಕುವೆಂಪು ಸಾಹಿತ್ಯ

**ಕೋಟ್ಯಾಂತರ ಶೋಷಿತ ಭಾರತೀಯರಿಗೆ ಸಮಸ್ಯೆಗಳ ಪರಿಹಾರದ ಸಂಜೀವಿನಿಯಾಗಿದ್ದ ಅಂಬೇಡ್ಕರರಂತೆ ಸಾಹಿತ್ಯ ಕ್ಷೇತ್ರದ ಮೂಲಕ ಕನ್ನಡನಾಡಲ್ಲಿ ಸಾಮಾಜಿಕ ಶೋಷಣೆ, ತಾರತಮ್ಯ, ಬಡತನ, ಅನಕ್ಷರತೆ, ಬಾಲ್ಯ ವಿವಾಹ, ಜಾತ್ಯಾತೀಯತೆ ಹೀಗೆ ಹತ್ತು ಹಲವು ಅವ್ಯವಸ್ಥೆಗಳ ನೈಜ ಚಿತ್ರಣವನ್ನು ತಮ್ಮ ಬರಹಗಳ ಮೂಲಕ ಸಾಮಾಜಿಕ ಜಾಗೃತಿ ಮೂಡಿಸುತ್ತಾ ಸಮಾಜ ಸುಧಾರಣೆಗೆ ಚೈತನ್ಯ ತುಂಬಿದವರು ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು.**

ವಿರೇಶ ಮಾಶೆಟ್ಟಿ

ಕೆಳಮಟ್ಟದ ಜನರ ದನಿಯಾಗಿ ಬಡತನದ ಕ್ರೌರ್ಯವನ್ನು ಮನಸ್ಸು ಕಲಕುವಂತೆ ತಮ್ಮ ಸಾಹಿತ್ಯದ ಮೂಲಕ ವಿಶ್ವದ ಗಮನ ಸೆಳೆದರು. ಆ ಮೂಲಕ ವಿಶ್ವ ಮಾನವರೆನ್ನಿಸಿಕೊಂಡರು. ಇಂತಹ ನೈತಿಕ ಹಾಗೂ ಸಾಮಾಜಿಕ ಅನ್ಯಾಯಗಳಿಗೆ ಸೂಕ್ತ ರೀತಿಯಲ್ಲಿ ಫಲಶ್ರುತಿ ಲಭಿಸುವಲ್ಲಿ ಯಶಸ್ವಿಯಾದರು. ದಲಿತ ಮತ್ತು ಬಂಡಾಯ ಚಳುವಳಿಗಳಿಗೆ ಸ್ಫೂರ್ತಿಯಾಗಿದ್ದರು. ಹೆಣ್ಣುಮಕ್ಕಳ ಬಡ ತಂದೆಯರ ಹೊರೆಯನ್ನು ಇಳಿಸುವ ಸಲುವಾಗಿಯೇ 'ಮಂತ್ರ ಮಾಂಗಲ್ಯ' ಎಂಬ ಸರಳ ವಿವಾಹ ಪದ್ಧತಿಯನ್ನು ರೂಢಿಗೆ ತಂದರು. ತಮ್ಮ ಕಾದಂಬರಿ, ಮಹಾಕಾವ್ಯ, ಕವನ, ಕಥೆ, ನಾಟಕ, ಪ್ರಬಂಧ, ವಿಮರ್ಶೆ, ಭಾಷಣ, ಲೇಖನಗಳ ಮೂಲಕ ಸಾಮಾಜಿಕ ಶೋಷಣೆ ಮತ್ತು ಸಾಮಾಜಿಕ ಸಂಘರ್ಷಗಳಿಗೆ ಸಾಹಿತ್ಯ ಒದಗಿಸಿ, ಆಳುವವರ ಗಮನಕ್ಕೆ ತಂದರು.

'ಕುವೆಂಪು' ಎಂಬ ಕಾವ್ಯನಾಮದಿಂದ ಪ್ರಖ್ಯಾತರಾಗಿ ಕನ್ನಡದ ಕೀರ್ತಿಯನ್ನು ರಾಷ್ಟ್ರಮಟ್ಟಕ್ಕೇರಿಸಿದ ಕವಿ ಕೆ.ವಿ.ಪುಟ್ಟಪ್ಪನವರನ್ನು ಇದೇ ಡಿಸೆಂಬರ್ 29 ರಂದು ಅವರ ಜನ್ಮದಿನದಂದು ನೆನೆಯುವುದು ನಮ್ಮೆಲ್ಲರ ಭಾಗ್ಯವಾಗಿದೆ. ಹಾಗೆಯೇ ಇಂಥ ಮಹಾನ ಚೇತನದ ಕನ್ನಡಾಭಿಮಾನ, ಕನ್ನಡ ಏಕೀಕರಣಕ್ಕೆ ನೀಡಿದ ಬೆಂಬಲ ಹಾಗೂ ಸರ್ವಜನರನ್ನು ಹುರಿದುಂಬಿಸಿದ ರೀತಿಯನ್ನು ನಾವು ನೆನೆಯಬೇಕು. ಕೆ.ವಿ.ಪುಟ್ಟಪ್ಪನವರು ಪ್ರಾರಂಭದಲ್ಲಿ 'ಕಿಶೋರ ಚಂದ್ರವಾಣಿ' ಎಂಬ ಕಾವ್ಯನಾಮದಿಂದ ಸಾಹಿತ್ಯ ರಚನೆಗೆ ತೊಡಗಿದರು.

ಪುಟ್ಟಪ್ಪನವರ ಇಂಗ್ಲಿಷ್ ಮತ್ತು ಕನ್ನಡ ಬರವಣಿಗೆ 1922 ರಿಂದ ಪ್ರಾರಂಭಗೊಂಡರೂ ಅವರ ಮೊದಲ ಕವನ ಸಂಕಲನ 'ಕೊಳಲು' 1930ರಲ್ಲಿ ಪ್ರಕಟವಾಯಿತು. 1936ರಲ್ಲಿ ಪ್ರಖ್ಯಾತ ಕಾದಂಬರಿ 'ಕಾನೂರು ಹೆಗ್ಗಡತಿ' ಪ್ರಕಟವಾಯಿತು. ಪುಟ್ಟಪ್ಪನವರ ಮೇರು ಕೃತಿಯಾದ 'ಶ್ರೀರಾಮಾಯಣ ದರ್ಶನಂ' ಮಹಾ ಕಾವ್ಯದ ಎರಡು ಸಂಪುಟಗಳು 1949–51ರಲ್ಲಿ ಪ್ರಕಟವಾದವು. ಅವರು ಪ್ರಥಮದಲ್ಲಿ ರಚಿಸಿದ 'ಬಿಗಿನರ್ಸ್ ಮ್ಯೂಸ್' ಎಂಬ ಇಂಗ್ಲಿಷ್ ಪ್ರಬುದ್ಧ ಸಾಹಿತ್ಯವನ್ನು ಗಮನಿಸಿದ ಜೇಮ್ಸ್ ಕಸಿನ್ಸ್‌ರವರು ಕುವೆಂಪುರವರನ್ನು ಇಂಗ್ಲಿಷನ್ನು ಬಿಟ್ಟು ಮಾತೃಭಾಷೆ ಕನ್ನಡದಲ್ಲಿ ಕಾವ್ಯ ರಚಿಸುವಂತೆ ಪ್ರೇರೇಪಿಸಿದರು. ಅನಿಕೇತನ, ಕಾನೂರು ಹೆಗ್ಗಡತಿ, ವಾಲ್ಮೀಕಿಯ ಭಾಗ್ಯ, ಸ್ಮಶಾನ ಕುರುಕ್ಷೇತ್ರ, ಬೊಮ್ಮನಹಳ್ಳಿ ಕಿಂದರಿ ಜೋಗಿ, ಶೂದ್ರ ತಪಸ್ವಿ, ಜಲಗಾರ,



Downloaded From:www.kpscvaani.com

ಬೆರಳ್‌ಗೆ ಕೊರಳ್ ನಂತಹ ಅದ್ಭುತವಾದ ಸಾಹಿತ್ಯಗಳು ಕನ್ನಡ ಸಾಹಿತ್ಯಕ್ಕೆ ಆದರ್ಶ ಪ್ರಾಯವಾಗುವಂತಿವೆ.

ಕನ್ನಡ ಸಾಹಿತ್ಯದ ಮೇರು ಪರ್ವತವಾಗಿರುವ ಇವರು 'ಎಡ'-'ಬಲ' ಪಂಥ ಸಾಹಿತಿಗಳ ನಡುವೆ ಸೇತುವೆಯಾಗಿದ್ದರು. "ಓ ನನ್ನ ಚೇತನ, ಆಗು ನೀ ಅನಿಕೇತನ" ಎಂಬ ಆತ್ಮವಿಶ್ವಾಸದ ನುಡಿಗಳನ್ನು ಹೇಳಿದ ಕುವೆಂಪು ಮಲೆನಾಡಿನ ಅಮೋಘ ಸಾಹಿತ್ಯ ಕೃಷಿಕ. ಈ ನಿಸರ್ಗ ಸಂಪತ್ತಿನ ಸೌಂದರ್ಯವನ್ನು ಸ್ವಲ್ಪವೂ ನೋಡದ ಬಯಲುಸೀಮೆಯ ಹಳ್ಳಿಹೈದನಿಗೂ, ನಗರವಾಸಿ ಅಂತರ್ಜಾಲದ ಯುವಕನಿಗೂ ತಮ್ಮ ಸಾಹಿತ್ಯದಲ್ಲಿ ನೈಜವಾಗಿ ಸವಿಯುವಂತೆ ತಿಳಿಸಿದ್ದಾರೆ.

ಕನ್ನಡಕ್ಕೆ ಅಗ್ರಸ್ಥಾನ ಒದಗಿ ಅದು ಅಗ್ರಮಾನ್ಯವಾಗಬೇಕು ಎಂದು ಬಯಸಿದ್ದ ಅವರು ಜಗತ್ತಿನ ವಿದ್ಯಾ, ಸಾಹಿತ್ಯ, ಸಂಸ್ಕೃತಿ ಎಲ್ಲವೂ ಕನ್ನಡಿಗರಿಗೆ ಕನ್ನಡದಲ್ಲಿಯೇ ದೊರೆಯುಂತಾಗಬೇಕು. ಕನ್ನಡ ನಾಡಿನಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು. ಎಲ್ಲಾ ವಿದ್ಯಾಸಂಸ್ಥೆಗಳಲ್ಲಿಯೂ ಕನ್ನಡವೇ ಬೋಧಕ ಭಾಷೆಯಾಗಬೇಕು. ಕೋರ್ಟು-ಕಛೇರಿ ಮೊದಲಾದ ಸರ್ಕಾರಿ ಸಂಸ್ಥೆಗಳ ವ್ಯವಹಾರವೆಲ್ಲಾ ಕನ್ನಡದಲ್ಲಿಯೇ ನಡೆಯಬೇಕು. ಒಂದು ಮಾತಿನಲ್ಲಿ ಹೇಳುವುದಾದರೆ ಇಂಗ್ಲೆಂಡಿನಲ್ಲಿ ಇಂಗ್ಲೀಷ್ ಭಾಷೆ ಇರುವಂತೆ, ಫ್ರಾನ್ಸ್‌ನಲ್ಲಿ ಫ್ರೆಂಚ್ ಭಾಷೆ ಇರುವಂತೆ, ಕರ್ನಾಟಕದಲ್ಲಿ ಕನ್ನಡವಿರಬೇಕು ಎಂದು ಕುವೆಂಪು ಆಶಯ ಪಟ್ಟಿದ್ದರು.

"ಮಾತೃಭಾಷೆಯಲ್ಲಿ ಶಿಕ್ಷಣ" ಎಂಬ ವಿಷಯಕ್ಕೆ ಒತ್ತು ನೀಡಿ ಅವರು ಕನ್ನಡವನ್ನು ಶಿಕ್ಷಣದ ಮಾಧ್ಯಮವನ್ನಾಗಿ ಮಾಡುವ ಆಂದೋಲನವನ್ನು ಮುನ್ನಡೆಸಿದರು. ಕನ್ನಡ ಸಂಶೋಧನೆಯ ಅಗತ್ಯತೆಗಳನ್ನು ಪೂರೈಸಲು ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಯ ಸಂಸ್ಥೆ ("ಇನ್ಸ್ಟಿಟ್ಯೂಟ್ ಆಫ್ ಕನ್ನಡ ಸ್ಟಡೀಸ್") ಅನ್ನು ಸ್ಥಾಪಿಸಿದರು. ನಂತರ ಇದನ್ನು "ಕುವೆಂಪು ಇನ್ಸ್ಟಿಟ್ಯೂಟ್ ಆಫ್ ಕನ್ನಡ ಸ್ಟಡೀಸ್" ಎಂದು ಮರುನಾಮಕರಣ ಮಾಡಲಾಯಿತು.

"ಹಳಗನ್ನಡ ಸಾಹಿತ್ಯಕ್ಕೆ ಪಂಪ ಮಹಾಕವಿಯಾದರೆ, 20ನೇ ಶತಮಾನದ ಹೊಸಗನ್ನಡ ಸಾಹಿತ್ಯಕ್ಕೆ ಕುವೆಂಪು ಮಹಾಕವಿ' ಎಂದು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರು ಅಭಿಪ್ರಾಯಪಟ್ಟಿದ್ದರು.

"ಇಂದೋ, ನಾಳೆಯೋ ಕರ್ನಾಟಕ ಪ್ರಾಂತ ರಚನೆ ನಮಗೆ ಕಟ್ಟಿಟ್ಟ ಬುತ್ತಿ. ಕನ್ನಡ ಭಾಷೆಯ ಸಾಮಾರ್ಥ್ಯದಲ್ಲಿ ನಿಮ್ಮಲ್ಲಿ ಯಾರಿಗಾದರೂ ಶಂಕೆಯಿದೆಯೇ? ಇದ್ದರೆ ಇಂದೇ ತೊಲಗಲಿ!" ಎಂದು ಹೇಳಿದರು.

ಕನ್ನಡ ಮೊಳಗಬೇಕೆಂಬುದೇ ಕವಿ ಕುವೆಂಪು ಅವರ ಆಶಯ ಆಗಿತ್ತು. ಹಾಗಾಗಿಯೇ ಅವರು ತಮ್ಮ ಕಾವ್ಯದಲ್ಲಿ ಕರ್ನಾಟಕದ ಏಕೀಕರಣಕ್ಕಾಗಿ ಸಹ್ಯಾದ್ರಿ, ಕಾವೇರಿ, ಚಾಮುಂಡಿ, ಗೊಮ್ಮಟ ಇವುಗಳ ಮೇಲೆ ಆಣೆಯಿಟ್ಟು ದೀಕ್ಷೆ ತೊಡುವಂತೆ ಕನ್ನಡ ತರುಣರಿಗೆ ಕರೆ ಕೊಟ್ಟಿದ್ದಾರೆ.

ಕುವೆಂಪು ಅವರು "ಮನುಜಮತ ವಿಶ್ವಪಥ" ಎಂಬ ವಿಶ್ವಮಾನವ ಸಂದೇಶವನ್ನು ಸಾರಿದವರು. ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಲಭಿಸಿದ್ದು, ಅದು ಕನ್ನಡಕ್ಕೆ ದೊರಕಿದ ಮೊದಲ ಜ್ಞಾನಪೀಠ ಪ್ರಶಸ್ತಿ. ಕುವೆಂಪುರವರು ಭವಿಷ್ಯದ ಸಾಹಿತಿಗಳಿಗೆ ಪ್ರೇರಕದ ಕಳಸದಂತಿದ್ದರು. ಪ್ರಭುಶಂಕರ, ಚೆನ್ನಬಸಪ್ಪ, ದೇ.ಜವರೇಗೌಡ, ವಿ.ಕೃ.ಗೋಕಾಕ ಹೀಗೆ ಅಸಂಖ್ಯಾತ ಸಾಹಿತಿಗಳಿಗೆ ಕುವೆಂಪು ಅವರ ಸಾಹಿತ್ಯ ದಾರಿ ದೀಪವಾಗುವ ಜೊತೆಗೆ ಪ್ರೇರಕಶಕ್ತಿಯಾಗಿತ್ತು. ಅಸಂಖ್ಯಾತ ಕವಿಗಳ ಸಾಹಿತ್ಯ ಸೇವೆ ಹಾಗೂ ಅವರ ಬದುಕಲ್ಲಿ ಉನ್ನತ ಸ್ಥಾನ ಹಾಗೂ ಗೌರವವನ್ನು ಏರಲು ಇವರ ಕಾವ್ಯಗಳೇ ಸ್ಫೂರ್ತಿದಾಯಕವಾಗಿತ್ತು.

ದ.ರಾ.ಬೇಂದ್ರೆಯವರಿಂದ "ಯುಗದ ಕವಿ ಜಗದ ಕವಿ" ಎಂದು ಕರೆಸಿಕೊಂಡಿರುವ ಇವರು ರಚಿಸಿರುವ ಅಸಂಖ್ಯಾತ ಕವನ ಕಾದಂಬರಿಗಳಲ್ಲಿ ಓದುಗರಿಗೆ ಪ್ರಕೃತಿಯ ಸಸ್ಯ ಸಂಪತ್ತಿನ



ಸೌಂದರ್ಯದ ಪ್ರತ್ಯಕ್ಷ ದರ್ಶನ ಮಾಡಿಸಿದ್ದಾರೆ. ಸೂರ್ಯೋದಯ ಹಾಗೂ ಸೂರ್ಯಾಸ್ತಗಳನ್ನು ಕುರಿತು ಬಹುಶಃ ಅವರಷ್ಟು ರಮ್ಯವಾಗಿ ಕವಿತೆಗಳನ್ನು ಬರೆದವರು ಅಪರೂಪವೆನ್ನಬಹುದು.


ಕುವೆಂಪುರವರು ವಿಶೇಷವಾಗಿ ನಾಟಕ ಹಾಗೂ ಕವನ ಸಂಕಲನಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಕೃಷಿ ಮಾಡಿದ್ದಾರೆ. "ಆಡು ಮುಟ್ಟದ ಸೊಪ್ಪಿಲ್ಲ" ಎಂಬಂತೆ ಕುವೆಂಪುರವರಿಗೆ ಸಿಗದ ಪುರಸ್ಕಾರವಿಲ್ಲ. ಅವರ ಸಾಹಿತ್ಯಗಳಲ್ಲಿ ಸಾಮಾಜಿಕ ಕಳಕಳಿ ಇರುವುದನ್ನು ಪರಿಗಣಿಸಿಯೇ ಕರ್ನಾಟಕ ಸರ್ಕಾರವು 2015 ರಲ್ಲಿ ಕುವೆಂಪು ಜನ್ಮದಿನವಾದ ಡಿಸೆಂಬರ್ 29 ಅನ್ನು "ವಿಶ್ವ ಮಾನವ" ದಿನವನ್ನಾಗಿ ಆಚರಿಸುವುದಾಗಿ ಆದೇಶ ಹೊರಡಿಸಿತು. ಈ ಮೂಲಕ ವಿಶ್ವಮಾನವ ಸಂದೇಶ ಸಾರಿದ ಕವಿಗೆ ಮತ್ತೊಂದು ಗೌರವ ಸಂದಾಯವಾದಂತಾಯಿತು.

ಕುವೆಂಪು ಅವರು ಮಾನವ ಕುಲಕ್ಕೆ ನೀಡಿದ ಮಾರ್ಗದರ್ಶನ ಮತ್ತು ಆದರ್ಶಗಳು ಸರ್ವಕಾಲಿಕವಾಗಿವೆ. ಹುಟ್ಟುವ ಪ್ರತಿ ಮಗುವು ವಿಶ್ವಮಾನವನೇ. ಆದರೆ ಹುಟ್ಟಿದ ನಂತರ ಆ ಮಗುವಿಗೆ ಜಾತಿ, ಮತಗಳ ಕಟ್ಟುಪಾಡುಗಳಿಂದ ಬಂಧಿಸಲಾಗುತ್ತದೆ. ಹಾಗೆ ಆಗಬಾರದು, ಯಾವುದೇ ವ್ಯಕ್ತಿ ಜಾತಿಯಿಂದ ಮುಖ್ಯನಾಗಬಾರದು, ನೈತಿಕ ವ್ಯಕ್ತಿತ್ವದಿಂದ ಮುಖ್ಯನಾಗಬೇಕು ಎಂಬುದು ಕುವೆಂಪು ಅವರ ಇಂಗಿತವಾಗಿತ್ತು. ಹಾಗಾಗಿ ಆದಿನಗಳಲ್ಲೇ 'ಮನುಜ ಮತ ವಿಶ್ವಪಥ' ಸಂದೇಶ ನೀಡಿದ ಕುವೆಂಪು ಅವರ ಜನ್ಮ ದಿನಾಚರಣೆಯನ್ನು ಶಾಲಾ ಕಾಲೇಜುಗಳಲ್ಲಿ 'ವಿಶ್ವ ಮಾನವ ದಿನಾಚರಣೆ'ಯಾಗಿ ಆಚರಿಸಲಾಗುತ್ತದೆ.

ಅವರು ರಚಿಸಿದ ಕಾದಂಬರಿ, ಕಥೆ, ಕವನಗಳಲ್ಲಿ ಭಿನ್ನ-ಭಿನ್ನ ಧರ್ಮ, ಜಾತಿ, ಪಂಥದ ಮನಸ್ಸುಗಳನ್ನು ಕನ್ನಡವೆಂಬ ಸೇತುವೆ ನಿರ್ಮಿಸಿ, ಭಾವೈಕ್ಯತೆ ಎಂಬ ಸುಖಕರ ಸಮೃದ್ಧಿಯ ಮಿಲನದ ಮೂಲಕ ಜನರಲ್ಲಿ ಏಕತೆ ಮೂಡಿಸಿದ ಮೇರು ಪರ್ವತ ಅವರು. ಕುವೆಂಪು ಅವರಂತೆ ಇಂದಿನ ಎಡ ಮತ್ತು ಬಲಪಂಥೀಯ ಸಾಹಿತಿಗಳು ಕೂಡ ಕನ್ನಡ ಭಾಷೆ, ಗಡಿ, ಜಲ, ಭಾವೈಕ್ಯತೆ ಮುಂತಾದ ವಿಷಯದಲ್ಲಿ ಸಾಹಿತ್ಯವನ್ನು ರಚಿಸಬೇಕು.


Downloaded From:www.kpscvaani.com

# ಪದಬಂಧ-37



ವಿದ್ಯಾ ವಿ. ಹಾಲಭಾವಿ

### ಎಡದಿಂದ ಬಲಕ್ಕೆ

1. ನವರತ್ನಗಳಲ್ಲಿ ಒಂದಾಗಿರುವ ಕಠಿಣ ವಸ್ತು (2)
3. ಓಟನ್ನು ನೀಡುವುದು (4)
5. ಪ್ರಕೃತಕ್ಕೆ ಸಂಬಂಧಪಡದಿರುವುದು (4)
8. ನವಂಬರ್ ಒಂದರಂದು ಪುನೀತ್ ರಾಜಕುಮಾರ್‌ಗೆ ನೀಡಲಾದ ಮರಣೋತ್ತರ ಪ್ರಶಸ್ತಿ (6)
11. ತಾನಾಗಿ ಕಲ್ಪಿಸಿಕೊಡದ್ದು (6)
13. ಇದೊಂದು ಚರ್ಮವಾದ್ಯ (4)
15. ತಲೆಮಾರು ಈ ತರ ಬಂದಿದೆ (4)
16. ಪ್ರಾಣಿ ಪಕ್ಷಿಗಳನ್ನು ಹಿಡಿಯುವ ಸಾಧನ (2)

### ಮೇಲಿಂದ ಕೆಳಕ್ಕೆ

1. ವದನದಲ್ಲಿ ಕಾಣಿಸಿದ ಕಾಡು (2)
2. ಆಯಾಸ ಹೀಗೆ ಬಂದಿದೆ (2)
4. ಅತಿಯಾದ ಆತುರ (3)
6. ಹೆಚ್ಚು ಶ್ರಮ(3)
7. ಕೆನ್ನೆಗೆ ಹೊಡೆಯುವ ಏಟು(4)
9. ತಾವರೆ ಇಲ್ಲಿದೆ(3)
10. ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸ್ಥಾಪನೆಯಾಗಿರುವ ಪ್ರತಿಮೆ (4)
11. ಧಾನ್ಯದ ತೆನೆ (3)
12. ವ್ಯಾಕರಣದಲ್ಲಿ ಧಾತುವಲ್ಲದ ಪ್ರಕೃತಿಗಳಿಗೆ ಹತ್ತುವ ಪ್ರತ್ಯಯ (3)
14. ಬಟ್ಟೆ ನೇಯುವ ಸಾಧನ (2)
15. ತರಲೆಯ ಶಿರ! (2)

### ಉತ್ತರ

**ಮೇಲಿಂದ ಕೆಳಕ್ಕೆ**

1. ವನ 2. ಸುಸ್ತು 4. ತವಕ 6. ಪ್ರಯತ್ನ 7. ತಪರಾಕಿ 9. ಕಮಲ 10. ಕೆಂಪೇಗೌಡ 11. ಕದಿರು 12. ತದ್ಧಿತ 14. ಮಗ್ಗ 15. ತಲೆ

**ಎಡದಿಂದ ಬಲಕ್ಕೆ**

1. ವಜ್ರ 3. ಮತದಾನ 5. ಅಪ್ರಸ್ತುತ 8. ಕರ್ನಾಟಕರತ್ನ 11. ಕಪೋಲಕಲ್ಪಿತ 13. ಡಮರುಗ 15. ತಲಾಂತರ 16. ಬಲೆ

**-: ಸೂಚನೆ :-**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ-ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From:www.kpscvaani.com



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಆರ್.ಟಿ ನಗರದ ತಮ್ಮ ನಿವಾಸದ ಬಳಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುತ್ತಿರುವುದು.



ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಮೀರಾಸಾಬಿ ಹಳ್ಳಿ ಕೆರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಾಗಿನ ಅರ್ಪಿಸುತ್ತಿರುವುದು. ಈ ಸಂದರ್ಭದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಸಚಿವರಾದ ಗೋವಿಂದ ಕಾರಜೋಳ, ಶಾಸಕರಾದ ಎಂ.ಚಂದ್ರಪ್ಪ, ತಿಪ್ಪಾರೆಡ್ಡಿ, ರಘು ಮೂರ್ತಿ, ವಿಧಾನ ಪರಿಷತ್ ಸದಸ್ಯರಾದ ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದಾರೆ.

Downloaded From:www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



Downloaded From:www.kpscvaani.com